15 October 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 1297 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಭಾವನಾಂತರಂಗ**

ರಾತ್ರಿ ಸರಿಯಾಗಿ ನಿದ್ರೆ ಬಂದರೆ ಅದು ಎಲ್ಲ ನೋವನ್ನೂ ಮರೆಸುತ್ತದೆ, ಬರದಿದ್ದರೆ ಎಲ್ಲವನ್ನೂ ನೆನಪಿಸುತ್ತದೆ!

ಸ್ನೇಹಾ ಆನಂದ್


ದಸರಾ ಕ್ರೀಡಾಕೂಟ: ವಿಜೇತರಿಗೆ ಬಹುಮಾನ ವಿತರಣೆ — ಪುಟ ಸಂ. 2


ರೈತರು ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳಿ: ಡಾ.ಎನ್.ಶಿವಕುಮಾರ್ — ಪುಟ ಸಂ. 3


ಯುವಜನತೆಯನ್ನು ಕಾಡುತ್ತಿದೆ ನಿರುದ್ಯೋಗ, ಅಸಮಾನತೆ — ಪುಟ ಸಂ. 4

# ಪ್ರಶಾಂತನ 'ಹೆಗಲಿಗೆ ಅಂಬಾರಿ' ಹೊಣೆ

## 21ರಂದು ದಸರಾ ಜಂಬೂಸವಾರಿಯಲ್ಲಿ ಚಿನ್ನದ ಅಂಬಾರಿ ಹೊರಲಿರುವ ಪ್ರಶಾಂತ

**ಮೈಸೂರು:** ನಾಡಹಬ್ಬ ದಸರಾ ಗಜಪಡೆಯ ಕ್ಯಾಪ್ಟನ್ ಯಾರು ಎಂಬ ವಿಚಾರಕ್ಕೆ ತೆರೆಬಿದ್ದಿದೆ. ಈ ಬಾರಿ ಜಂಬೂಸವಾರಿಯಲ್ಲಿ ಮೊದಲ ಬಾರಿಗೆ ಚಿನ್ನದ ಅಂಬಾರಿಯನ್ನು ಪ್ರಶಾಂತ ಆನೆ ಹೊರಲಿದ್ದಾನೆ.

ದಸರಾ ಗಜಪಡೆ ಕ್ಯಾಪ್ಟನ್ ಆಗಿದ್ದ ಅಭಿಮನ್ಯು ಆನೆ ನಿವೃತ್ತಿಯಾದ ಬಳಿಕ ಉದ್ಭವಿಸಿದ್ದ ಕುತೂಹಲಕ್ಕೆ ತೆರೆಬಿದ್ದಿದೆ. ಪ್ರಶಾಂತನನ್ನು ಅಂಬಾರಿ ಆನೆಯಾಗಿ ಆಯ್ಕೆ ಮಾಡಿ ರಾಜ್ಯ ಸರ್ಕಾರ ಅಧಿಕೃತ ಘೋಷಣೆ ಹೊರಡಿಸಿದೆ.

ಜಿಲ್ಲಾ ಉಸ್ತುವಾರಿ ಸಚಿವ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಈ ಬಾರಿ 13 ಆನೆಯನ್ನು ದಸರಾಗೆ ಕರೆ ತಂದಿದ್ದೇವೆ. ಈ ಪೈಕಿ ಸ್ವಭಾವ, ದೈಹಿಕ ಸಾಮರ್ಥ್ಯ, ನಡವಳಿಕೆ ಆಧಾರದ ಮೇಲೆ ಪ್ರಶಾಂತನನ್ನು ಆಯ್ಕೆ ಮಾಡಿದ್ದೇವೆ. ಧನಂಜಯ ಆನೆ ಮೀಸಲು ಆನೆ ಆಗಿರುತ್ತದೆ ಎಂದು ತಿಳಿಸಿದರು.

ವಿಜಯ ದಶಮಿ ದಿನ ಅ.21ರಂದು ದಸರಾ ಜಂಬೂಸವಾರಿ ನಡೆಯಲಿದೆ. ಕಳೆದ 6 ವರ್ಷ ಅಂಬಾರಿ ಹೊತ್ತಿದ್ದ 'ಅಭಿಮನ್ಯು'ವನ್ನು ವಯಸ್ಸಿನ ಕಾರಣಕ್ಕಾಗಿ ಈ ಬಾರಿ ಅಂಬಾರಿ ಹೊರುವ ಜವಾಬ್ದಾರಿಯಿಂದ ಹೊರಗಿಡಲಾಯಿತು. ಹೀಗಾಗಿ ಈ ಬಾರಿ ಅಂಬಾರಿ ಹೊರಲು ಹೊಸ ಆನೆ ಆಯ್ಕೆ ಬಗ್ಗೆ ಕುತೂಹಲ ಗರಿಗೆದರಿತ್ತು. ಪ್ರಶಾಂತ, ಧನಂಜಯ, ಸುಗ್ರೀವ, ಮಹೇಂದ್ರ, ಏಕಲವ್ಯ ನಡುವೆ ಆಯ್ಕೆಗೆ ಸ್ಪರ್ಧೆ ಏರ್ಪಟ್ಟಿತ್ತು.

ಸ್ಪರ್ಧೆಯಲ್ಲಿದ್ದ ಮಹೇಂದ್ರ ಎರಡು ಬಾರಿ ಮರದ ಅಂಬಾರಿ ಹೊತ್ತು ಬನ್ನಿಮಂಟಪ ಸೇರುವಲ್ಲಿ ವಿಫಲವಾದ ಕಾರಣ ಅದನ್ನು ಆಯ್ಕೆಯಿಂದ ಹೊರಗಿಡಲಾಗಿತ್ತು. ಇದೀಗ ಪ್ರಶಾಂತ ಅಂಬಾರಿ ಹೊರುವ ಆನೆಯಾಗಿ ಆಯ್ಕೆಯಾಗಿದ್ದಾನೆ.

ಆನೆಗಳ ನಡಿಗೆ ಸಮತೋಲನ. ಭಾರ ಹೊರುವ ಸಾಮರ್ಥ್ಯ, ಸಹನಶಕ್ತಿ ಹಾಗೂ ವರ್ತನೆಯನ್ನು ಪಶುವೈದ್ಯಾಧಿಕಾರಿಗಳು, ಅರಣ್ಯಾಧಿಕಾರಿಗಳು ಮತ್ತು ಅನುಭವಿ ಮಾವುತರ ಸಹಕಾರದೊಂದಿಗೆ ಮೌಲ್ಯಮಾಪನ ಮಾಡಲಾಗಿದೆ. ಇದಲ್ಲದೆ ಜಂಬೂಸವಾರಿಯ ಸಂದರ್ಭದಲ್ಲಿ ಉಂಟಾಗುವ ಸಿಡಿಮದ್ದಿನ ಶಬ್ದಕ್ಕೆ ಆನೆಗಳು ಹೊಂದಿಕೊಳ್ಳುವಂತೆ ವಿಶೇಷ ತಾಲೀಮುಗಳನ್ನು ನೀಡಲಾಗುತ್ತಿದೆ. ಈ ಎಲ್ಲ ಅಂಶಗಳ ತುಲನಾತ್ಮಕ ಪರಿಶೀಲನೆ ನಂತರ ಪ್ರಶಾಂತ್ ಆನೆಯ ಸುದೀರ್ಘ ಅನುಭವ, ಅಂಬಾರಿ ಸ್ಥಾಪನೆಗೆ ಅನುಕೂಲಕರವಾದ ಬೆನ್ನಿನ ರಚನೆ ತರಬೇತಿಯಲ್ಲಿ ಸಾಬೀತಾಗಿರುವ ಸಾಮರ್ಥ್ಯ ಹಾಗೂ ಶಾಂತ ಸ್ವಭಾವ ಅದರ ಆಯ್ಕೆಗೆ ಪ್ರಮುಖ ಆಧಾರಗಳಾಗಿವೆ.





### ಅಭಿಮನ್ಯು ನಿಶಾನೆ ಆನೆ

**ಜಂಬೂಸವಾರಿಯ ಸುಗಮ ನಿರ್ವಹಣೆಗಾಗಿ ಧನಂಜಯ ಆನೆಯನ್ನು ಮೀಸಲು ಅಂಬಾರಿ ಆನೆಯಾಗಿ ಆಯ್ಕೆ ಮಾಡಲಾಗಿದೆ. ಅಭಿಮನ್ಯು ಆನೆಯನ್ನು ನಿಶಾನೆ ಆನೆಯಾಗಿ ಹಾಗೂ ಗೋಪಿ ಆನೆಯನ್ನು ನೌಫತ್ ಅನೆಯಾಗಿ ನಿಯೋಜಿಸಲು ಶಿಫಾರಸು ಮಾಡಲಾಗಿದೆ. ಕಾವೇರಿ ಮತ್ತು ರೂಪಾ ಕುಮ್ಕಿ ಆನೆಗಳಾಗಿ ಆಯ್ಕೆಯಾಗಿವೆ. ಉಳಿದ ಆನೆಗಳು ಸಾಲಾನೆಗಳಾಗಿ ಭಾಗವಹಿಸಲಿವೆ.**

ಪ್ರಸ್ತುತ ದಸರಾ ಮಹೋತ್ಸವಕ್ಕೆ ಆಗಮಿಸಿರುವ ಆನೆಗಳಿಗೆ ಮೈಸೂರು ಅರಮನೆ ಅವರಣ ಹಾಗೂ ನಿಗದಿತ ಮೆರವಣಿಗೆ ಮಾರ್ಗದಲ್ಲಿ ನಿಯಮಿತ ತರಬೇತಿ ನೀಡಲಾಗುತ್ತಿದೆ. ಪ್ರಶಾಂತ್. ಸುಗ್ರೀವ, ಧನಂಜಯ ಮತ್ತು ಏಕಲವ್ಯ ಸೇರಿದಂತೆ ವಿವಿಧ ಆನೆಗಳ ಮರಳು ಮೂಟೆ ಹಾಗೂ ಮರದ ಅಂಬಾರಿ ಹೊರುವ ತರಬೇತಿಯನ್ನು ಪರಿಶೀಲಿಸಲಾಗಿದೆ.

### 19 ವರ್ಷಗಳಿಂದ ದಸರಾದಲ್ಲಿ ಭಾಗಿ

**ಪ್ರಶಾಂತ ಆನೆ ಕಳೆದ 18 ವರ್ಷಗಳಿಂದ ಮೈಸೂರು ದಸರಾ ಮಹೋತ್ಸವದಲ್ಲಿ ನಿರಂತರವಾಗಿ ಭಾಗವಹಿಸುತ್ತಿದೆ. ಬಲಿಷ್ಠ ಹಾಗೂ ನಂಬಿಕಸ್ಥ ಆನೆಯಾಗಿ ಅರಣ್ಯ ಇಲಾಖೆಯ ವಿವಿಧ ಕಾರ್ಯಾಚರಣೆ ಗಳಲ್ಲಿ ಪ್ರಶಾಂತ ಸೇವೆ ಸಲ್ಲಿಸಿದೆ. ಅದರ ಶಿಸ್ತುಬದ್ಧ ನಡೆ, ಸತತ ಸೇವೆ ಮತ್ತು ಆಜ್ಞಾಪಾಲನೆ ಈ ಆನೆಯನ್ನು ದಸರಾ ಆನೆಗಳ ಪೈಕಿ ಅತ್ಯಂತ ನಂಬಿಕಸ್ಥ ಸದಸ್ಯನನ್ನಾಗಿ ಪರಿಗಣಿಸಿದೆ. ಉತ್ಸವದ ಪ್ರಮುಖ ಆಕರ್ಷಣೆಯಾಗಿದೆ. 54 ವರ್ಷದ ಪ್ರಶಾಂತ ದುಬಾರೆ ಆನೆ ಶಿಬಿರದಿಂದ ಬಂದಿದೆ. 5,100 ಕೆ.ಜಿ ತೂಕ ಹೊಂದಿದ್ದಾನೆ. ಈ ಆನೆಯನ್ನು 1993ರಲ್ಲಿ ಶಿವಮೊಗ್ಗ ಜಿಲ್ಲೆ ಕಾರೆಕೊಪ್ಪ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆ ಸೆರೆಹಿಡಿದಿತ್ತು. ಪ್ರಬಲ ದೇಹ ಹಾಗೂ ಗಂಭೀರ ನಡವಳಿಕೆಯುಳ್ಳ ಈ ಆನೆಯನ್ನು ಪಳಗಿಸಿ ವಿಶಿಷ್ಟ ತರಬೇತಿಗೆ ಒಳಪಡಿಸಲಾಗಿತ್ತು. ಪ್ರಶಾಂತ ಆನೆಯು ತನ್ನ ಶಕ್ತಿಯುತ ಸ್ಥಿತಿಯಿಂದ ಭದ್ರತೆಗೆ ಸಹಕಾರಿಯಾಗಿದೆ. ಪ್ರತಿ ದಸರಾ ಮೆರವಣಿಗೆಯಲ್ಲಿ ಶಾಂತಿಯುತ ಶಕ್ತಿಯ ಸಂಕೇತವಾಗಿದೆ. ಕಳೆದ ಬಾರಿ ದಸರಾದಲ್ಲಿ ಸಾಲಾನೆಯಾಗಿ ಭಾಗವಹಿಸಿತ್ತು.**

# ಸಿದ್ದು ವರ್ಚಸ್ಸಿಗೆ ಧಕ್ಕೆ ಯತ್ನ

## ಜೆಡಿಎಸ್ ನಾಯಕರನ್ನು ಬಿಟ್ಟು ಬೇರೆ ಯಾರು ಮಾಡಲು ಸಾಧ್ಯ: ಚಲುವರಾಯಸ್ವಾಮಿ

**ಬೆಂಗಳೂರು:** ಮಾಜಿ ಸಿಎಂ ಸಿದ್ದರಾಮಯ್ಯ ವರ್ಚಸ್ಸಿಗೆ ಧಕ್ಕೆ ತರುವ ಪ್ರಯತ್ನ ನಡೆದಿದೆ. ಜನತಾದಳದವರನ್ನು ಬಿಟ್ಟು ಬೇರೆ ಯಾರು ಈ ರೀತಿ ಮಾಡಲು ಸಾಧ್ಯ ಎಂದು ಜಲಸಂಪನ್ಮೂಲ ಸಚಿವ ಚಲುವರಾಯಸ್ವಾಮಿ ಪ್ರಶ್ನಿಸಿದರು.



ರಾಜ್ಯ ರಾಜಕೀಯದಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಗಿರುವ ಸ್ಟಿಂಗ್ ಆಪರೇಷನ್ ವಿಚಾರವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ರೀತಿ ಕೆಲಸ ಮಾಡೋದು ಜನತಾದಳದ ನಾಯಕರು. ಅವರನ್ನು ಬೇರೆ ಯಾರು ಈ ರೀತಿ ಮಾಡಲು ಸಾಧ್ಯವಿಲ್ಲ. ಈಗ ಸಿದ್ದರಾಮಯ್ಯ ಬಗ್ಗೆ ಅನುಕಂಪದಿಂದ ಮಾತನಾಡುತ್ತಿದ್ದಾರೆ. ಯಾವತ್ತೂ ಇಲ್ಲದ ಅನುಕಂಪ ಈಗ ಬಂದಿದೆ. ಪಕ್ಷದಿಂದ ಓಡಿಸಿದಾಗ ಇರಲಿಲ್ಲ. ಇಂದು ಸಿದ್ದರಾಮಯ್ಯ ಮೇಲೆ ಎಚ್‌ಡಿಕೆಗೆ ಅನುಕಂಪ ಹುಟ್ಟಿದೆ ಪಾಪ ಎಂದು ವ್ಯಂಗ್ಯವಾಡಿದರು.

ಸಿದ್ದರಾಮಯ್ಯ ಅವರ ನಾಯಕತ್ವ, ಅವರು ಬಂದ ದಾರಿ ಎಲ್ಲರಿಗೂ ಗೊತ್ತಿದೆ. ಯಾರೋ ಒಬ್ಬ ಮೈಕ್ ಹಿಡಿದು ಹೆಸರು ಹೇಳಿಸಿದರೆ ಆಗುತ್ತಾ? ಎಚ್.ಡಿ.ಕುಮಾರಸ್ವಾಮಿ ರೀತಿ ಸಿದ್ದರಾಮಯ್ಯ ಅವರ ಚರಿತ್ರೆ ಅಲ್ಲ. ಇವರ ರೀತಿ ಸಿದ್ದರಾಮಯ್ಯ ಚರಿತ್ರೆ ಇದ್ದರೆ ನಾವು ಒಪ್ಪುತ್ತೇವೆ. ಸಿದ್ದರಾಮಯ್ಯ ಸಿಎಂ ಆದಾಗ ಬರದೆ ಇರುವ ಪ್ರೀತಿ, ಕುಮಾರಸ್ವಾಮಿಗೆ ಈಗ ಏಕೆ ಬಂತು? ನಮ್ಮ ಪಕ್ಷದಲ್ಲಿ ಗೊಂದಲ ಹುಟ್ಟಿಸಲು ಎಚ್‌ಡಿಕೆ ಹುನ್ನಾರ ಮಾಡುತ್ತಿದ್ದಾರೆ. ಇದೆಲ್ಲವೂ ಎಚ್‌ಡಿಕೆ ಹುನ್ನಾರದ ಭಾಗ ಎಂದು ಚಲುವರಾಯಸ್ವಾಮಿ ಕಿಡಿಕಾರಿದರು.

ಸ್ಟಿಂಗ್ ಆಪರೇಷನ್ ವಿಚಾರವಾಗಿ ಸಿಬಿಐ ತನಿಖೆಗೆ ವಿಪಕ್ಷಗಳ ಆಗ್ರಹ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ನಾಳೆ ಸಚಿವ ಸಂಪುಟ ಸಭೆ ಇದೆ. ಸಿಎಂ ಅಥವಾ ಎಲ್ಲ ಸಚಿವರು ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಾರೆ. ಆದರೆ, ನನಗೆ ಅದರ ಅವಶ್ಯಕತೆ ಇಲ್ಲ ಅನ್ನಿಸುತ್ತದೆ. ತನಿಖೆಗೆ ಅವಶ್ಯಕತೆ ಇದ್ದರೆ ಈ ಬಗ್ಗೆ ಸಿಎಂ ನಿರ್ಧಾರ ಕೈಗೊಳ್ಳುತ್ತಾರೆ ಎಂದು ಹೇಳಿದರು.

# ಕೆಆರ್‌ಎಸ್ ನೀರಿನ ಮಟ್ಟ 100 ಅಡಿಗೆ ಕುಸಿತ

**ಮೈಸೂರು:** ಹಳೆ ಮೈಸೂರು ಭಾಗದ ಜೀವನಾಡಿ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ದಿನದಿಂದ ದಿನಕ್ಕೆ ಗಣನೀಯವಾಗಿ ಕುಸಿಯುತ್ತಿದೆ. ಸದ್ಯ ನೀರಿನ ಮಟ್ಟ 100 ಅಡಿಗೆ ತಲುಪಿದೆ. ಮಳೆಯ ಕೊರತೆ ನಡುವೆಯೂ ತಮಿಳುನಾಡಿಗೆ ನಿರಂತರವಾಗಿ ನೀರು ಹರಿಸುತ್ತಿರುವುದರಿಂದ ಜಲಾಶಯದ ನೀರು ಆತಂಕಕಾರಿ ಮಟ್ಟಕ್ಕೆ ಕುಸಿದಿದೆ. ಇದು ಸಾರ್ವಜನಿಕರಲ್ಲಿ ಹಾಗೂ ರೈತರಲ್ಲಿ ತೀವ್ರ ಆತಂಕ ಮೂಡಿಸಿದೆ.

ಜಲಾಶಯದ ಒಟ್ಟು ಗರಿಷ್ಠ ಮಟ್ಟ 124.80 ಅಡಿಗಳಾಗಿದೆ. ಪ್ರಸ್ತುತ ಜಲಾಶಯದಲ್ಲಿ ಕೇವಲ 100.88 ಅಡಿ ನೀರು ಮಾತ್ರ ಉಳಿದಿದೆ. 49.452 ಟಿಎಂಸಿ ನೀರು ಸಂಗ್ರಹಿಸುವ ಸಾಮರ್ಥ್ಯ ಹೊಂದಿದೆ. ಈಗ ಒಟ್ಟು 23.507 ಟಿಎಂಸಿ ನೀರು ಮಾತ್ರ ಲಭ್ಯವಿದೆ. ಈ ಮಳೆಗಾಲದಲ್ಲಿ ಜಲಾಶಯ ಗರಿಷ್ಠ 110 ಅಡಿಗಳವರೆಗೆ ಮಾತ್ರ ಭರ್ತಿಯಾಗಿತ್ತು. ಆದರೆ ತಮಿಳುನಾಡಿಗೆ ನೀರು ಹರಿದಿದ್ದರಿಂದ ಕುಸಿತ ಕಂಡಿದೆ.

ಜಲಾಶಯಕ್ಕೆ ಒಳಹರಿವು ಅತ್ಯಂತ ಕನಿಷ್ಠ ಮಟ್ಟದಲ್ಲಿದ್ದು, ಹೊರಹರಿವು ಮಾತ್ರ ಮುಂದುವರಿದಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿಗೂ ತೀವ್ರ ಸಂಕಷ್ಟ ಎದುರಾಗುವ ಸಾಧ್ಯತೆಯಿದೆ.



# ಸ್ಟಿಂಗ್ ಆಪರೇಷನ್ ಕೆಟ್ಟ ಚಾಳಿ: ಸಚಿವ ಎಂ.ಬಿ.ಪಾಟೀಲ್ ಆಕ್ರೋಶ

**ಬೆಂಗಳೂರು:** ಯಾರೇ ಸ್ಟಿಂಗ್ ಆಪರೇಷನ್ ಮಾಡಿದರೂ ತಪ್ಪು. ಅವರನ್ನು ಬಲಿ ಹಾಕಬೇಕು ಎಂದು ಸಚಿವ ಎಂ.ಬಿ.ಪಾಟೀಲ್ ಗುಡುಗಿದರು.

ಸ್ಟಿಂಗ್ ಆಪರೇಷನ್ ವಿಚಾರಕ್ಕೆ ವಿಧಾನ ಸೌಧದಲ್ಲಿ ಮಾತನಾಡಿದ ಅವರು, ಸ್ಟಿಂಗ್ ಆಪರೇಷನ್ ಕೆಟ್ಟ ಚಾಳಿ. ಯಾರೇ ಮಾಡಿದರೂ ಸರಿಯಲ್ಲ. ರಾಜಕೀಯದಲ್ಲಿ ಪೈಪೋಟಿ ಮಾಡಬಹುದು. ಇಂತಹದ್ದು ಮಾಡೋದು ಸರಿಯಲ್ಲ. ಸಿದ್ದರಾಮಯ್ಯ ಅತ್ಯುತ್ತಮ ನಾಯಕ. ಅವರ ಚಾರಿತ್ರಿಕ ವಧೆ ಮಾಡೋ ಕೆಲಸ ಆಗಿದೆ. ಈ ಸ್ಟಿಂಗ್ ಯಾರೇ ಮಾಡಿದರೂ



ಅವರ ಬಲಿ ಹಾಕಬೇಕು ಎಂದು ಕಿಡಿಕಾರಿದರು.

ಕರ್ನಾಟಕದಲ್ಲಿ ಈ ಸ್ಟಿಂಗ್ ಆಪರೇಷನ್ ನಿರ್ನಾಮ ಮಾಡಬೇಕು. ರಾಜಕೀಯ, ದುಡ್ಡು ಹೀಗೆ ಬೇರೆ ಬೇರೆ ವಿಚಾರಕ್ಕೆ ದೇಶ, ವಿದೇಶದಲ್ಲಿ ಆಗುತ್ತದೆ. ಇದರ ಬಗ್ಗೆ ಕ್ರಮ ಆಗಬೇಕು ಎಂದು ಆಕ್ರೋಶ ಹೊರಹಾಕಿದರು.

ಕಬ್ಬು ಬೆಳೆಗಾರರ ಹೋರಾಟದ ಬಗ್ಗೆ ಮಾತನಾಡಿ, ಎಂಎಸ್ಪಿ, ಎಫ್‌ಆರ್‌ಪಿ ನಿಗದಿ ಮಾಡೋದು ಕೇಂದ್ರ ಸರ್ಕಾರ. ಎಥೆನಾಲ್ ಉತ್ಪಾದನೆ ಮಾಡಿ ಅಂತ ಹೇಳಿತ್ತು. ಆದರೆ ಈಗ ಕೇಂದ್ರ ಎಥನಾಲ್ ತೆಗೆದುಕೊಳ್ಳುತ್ತಿಲ್ಲ. ಪ್ರಧಾನಿ, ಕೇಂದ್ರದ ಸಚಿವರು ರೈತರನ್ನು ಕರೆದು ಮಾತಾಡಬೇಕು ಎಂದು ಆಗ್ರಹಿಸಿದರು.

ವೈಜ್ಞಾನಿಕವಾಗಿ ದರ ಫಿಕ್ಸ್ ಮಾಡಬೇಕು. ಕೇಂದ್ರ ಸರ್ಕಾರ ನ್ಯಾಯ ಒದಗಿಸಬೇಕು. ವೈಜ್ಞಾನಿಕ ವ್ಯವಸ್ಥೆ ಮಾಡಬೇಕು. ರೈತರು ಕಾರ್ಖಾನೆ ಹಿತ ಕಾಯಬೇಕು ಎಂದು ಕೇಂದ್ರಕ್ಕೆ ಒತ್ತಾಯಿಸಿದರು.

# ಸಿದ್ದು ಫೈಟ್ ಮಾಡಬೇಕಿತ್ತು

## ಸಿದ್ದರಾಮಯ್ಯ-ರಮೇಶ್ ಜಾರಕಿಹೊಳಿ ಭೇಟಿ

**ಮೈಸೂರು:** ವಿವಾದಿತ ಸ್ಟಿಂಗ್ ಕಾರ್ಯಾಚರಣೆ ವಿಚಾರವಾಗಿ ಸಿದ್ದರಾಮಯ್ಯ ಅವರು ನ್ಯಾಯಾಲಯದಿಂದ ತಡೆಯಾಜ್ಞೆ ತರಬಾರದಿತ್ತು, ಧೈರ್ಯವಾಗಿ ಎದುರಿಸಿ ಫೈಟ್ ಮಾಡಬೇಕಿತ್ತು ಎಂದು ಮಾಜಿ ಸಚಿವ ಹಾಗೂ ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಅಭಿಪ್ರಾಯಪಟ್ಟರು.



ಮೈಸೂರಿನಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿಯಾಗಿ 45 ನಿಮಿಷಕ್ಕೂ ಹೆಚ್ಚು ಕಾಲ ಗೌಪ್ಯ ಮಾತುಕತೆ ನಡೆಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದರು.

ರಾಜಕೀಯ ವಲಯದಲ್ಲಿ ಭಾರೀ ಕುತೂಹಲ ಮೂಡಿಸಿದ್ದ ಈ ದಿಢೀರ್ ಭೇಟಿಯ ಕುರಿತು ವಿವರ ನೀಡಲು ನಿರಾಕರಿಸಿದ ಜಾರಕಿಹೊಳಿ, ಸಿದ್ದರಾಮಯ್ಯ ಅವರು ಯಾವ ಪಕ್ಷದಲ್ಲಿದ್ದರೂ ನಮ್ಮ ನಾಯಕರು. ನಾನು ಈಗ ಆ ಸ್ಟಿಂಗ್ ವಿಚಾರವಾಗಿ ಹೆಚ್ಚು ಮಾತನಾಡುವುದಿಲ್ಲ. ನಾನು ಬೇರೆಯದೇ ವಿಚಾರವಾಗಿ ಅವರನ್ನು ಮಾತನಾಡಿಸಲು ಬಂದಿದ್ದೇನೆ. ಇದು ಖಾಸಗಿ ಭೇಟಿ ಎಂದು ಸ್ಪಷ್ಟಪಡಿಸಿದರು.

ಸುಮಾರು 45 ನಿಮಿಷಗಳಿಗೂ ಅಧಿಕ ಕಾಲ ಉಭಯ ನಾಯಕರ ನಡುವೆ ನಡೆದ ಈ ಸುದೀರ್ಘ ಚರ್ಚೆ ರಾಜ್ಯ ರಾಜಕೀಯದಲ್ಲಿ ಭಾರೀ ಚರ್ಚೆಗೆ ಎಡೆಮಾಡಿಕೊಟ್ಟಿದೆ.

### ರಾಜಕೀಯ ವಿಚಾರವಿಲ್ಲ: ಸಿದ್ದು

**ಮೈಸೂರು: ರಮೇಶ್ ಜಾರಕಿಹೊಳಿ ಮತ್ತು ನನ್ನದು ಸೌಜನ್ಯದ ಭೇಟಿ ಅಷ್ಟೇ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿದರು. ಮೈಸೂರಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಮೇಶ್ ಜಾರಕಿಹೊಳಿ ನನ್ನ ಭೇಟಿಗೆ ಬಂದಿದ್ದು ಉಭಯಕುಶಲೋಪರಿಗೆ. ಇದರಲ್ಲಿ ರಾಜಕೀಯ ವಿಚಾರ ಇಲ್ಲ. ಅವರು ಬಂದು ಊಟ ಮಾಡಿ ಹೋದರು ಅಷ್ಟೇ ಎಂದು ತಿಳಿಸಿದರು.**

# ರಾಜ್ಯಕ್ಕೆ 3ನೇ ಸಿಎಂ ಬಂದರೂ ಆಶ್ಚರ್ಯವಿಲ್ಲ: ಬಿ.ವೈ.ವಿಜಯೇಂದ್ರ

**ಶಿವಮೊಗ್ಗ:** ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಆಂತರಿಕ ಕಚ್ಚಾಟದಿಂದ ರಾಜ್ಯದಲ್ಲಿ ಮೂರನೇ ಮುಖ್ಯಮಂತ್ರಿ ಬಂದರೂ ಆಶ್ಚರ್ಯವಿಲ್ಲ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.



ಮಾಧ್ಯಮಗಳ ಜೊತೆ ಬುಧವಾರ ಮಾತನಾಡಿದ ಅವರು, ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಮೂಲೆಗುಂಪು ಮಾಡುವ ಪ್ರಯತ್ನ ಕಾಂಗ್ರೆಸ್‌ನಲ್ಲೇ ನಡೆಯುತ್ತಿರಬಹುದು ಎಂದು ಟೀಕಿಸಿದರು.

ಸಿದ್ದರಾಮಯ್ಯ ಅವರನ್ನೇ

ಪುಟ 2ಕ್ಕೆ

# ಸಿದ್ದುಗೆ ಖೆಡ್ಡಾ: ಇಬ್ಬರ ಬಂಧನ

**ಬೆಂಗಳೂರು:** ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ವಿರುದ್ಧ ನಕಲಿ ಹಾಗೂ ದುರುದ್ದೇಶಪೂರಿತ ವಿಡಿಯೋಗಳನ್ನು ಹಂಚಿಕೊಂಡು ತೇಜೋವಧೆ ಮಾಡಲಾಗುತ್ತಿದೆ ಎಂದು ಆರೋಪಿಸಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ ದೂರಿನ ಮೇರೆಗೆ ಸಿಸಿಬಿ ಸೈಬರ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಸೂಚನೆಯಂತೆ ತನಿಖೆ ಚುರುಕುಗೊಳಿಸಿರುವ ಪೊಲೀಸರು, ಈಗಾಗಲೇ ಇಬ್ಬರು ಶಂಕಿತರನ್ನು ವಶಕ್ಕೆ ಪಡೆದು ಅಜ್ಞಾತ ಸ್ಥಳದಲ್ಲಿ ವಿಚಾರಣೆ ನಡೆಸುತ್ತಿದ್ದಾರೆ.

ಸೈಬರ್ ಕ್ರೈಮ್ ಪೊಲೀಸರು ಸಾಮಾಜಿಕ ಜಾಲತಾಣಗಳಲ್ಲಿ ಹದ್ದಿನ ಕಣ್ಣಿಟ್ಟಿದ್ದು, ವಿಡಿಯೋ ಪ್ರಸಾರ ಮಾಡಿದ ಪ್ರಮುಖ ಖಾತೆಗಳ ಐಪಿ ವಿಳಾಸಗಳ ಮೂಲಕ ಡಿವೈಸ್

ಪುಟ 2ಕ್ಕೆ

# ಸ್ಟಿಂಗ್ ಬಹಳ ಕೆಟ್ಟದ್ದು: ಮಧು ಬಂಗಾರಪ್ಪ ಟೀಕೆ

**ಮೈಸೂರು:** ಮಾರುವೇಷದ ಕಾರ್ಯಾಚರಣೆ ಎನ್ನುವುದು ಬಹಳ ಕೆಟ್ಟದ್ದು. ಆ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.



ನಗರದಲ್ಲಿ ಬುಧವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ನಿತ್ಯವೂ ಸುಮ್ಮನೆ ಏನಾದರೂ ಒಂದು ವಿಚಾರ ತೆಗೆದು ಮಾಡುವ ಆರೋಪಗಳಿಗೆ ನಾನು ಪ್ರತಿಕ್ರಿಯೆ ಕೊಡುವುದಿಲ್ಲ. ನನಗೆ ಇಲಾಖೆ ಕೆಲಸಗಳು ಸಾಕಷ್ಟಿವೆ. ಅದನ್ನು ಮಾಡುತ್ತಿದ್ದೇನೆ. ನಿರ್ಬಂಧಕಾಜ್ಞೆ ತಂದಿರುವ ಬಗ್ಗೆ ಸಿದ್ದರಾಮಯ್ಯ ಅವರೇ ಸ್ವತಃ ಸ್ಪಷ್ಟೀಕರಣ

ಪುಟ 2ಕ್ಕೆ

# 1225 ಕೆಪಿಎಸ್ ಶಾಲೆ ಆರಂಭ

## ಎಲ್‌ಕೆಜಿ ಯಿಂದ ಪಿಯುಸಿ ವರೆಗೆ ಶಿಕ್ಷಣ: ಸಚಿವ ಮಧು ಬಂಗಾರಪ್ಪ

**ಮೈಸೂರು:** ರಾಜ್ಯದಲ್ಲಿ ಮುಂದಿನ ಶೈಕ್ಷಣಿಕ ವರ್ಷದ ಜೂನ್ ನಿಂದ 1225 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲಾಗುತ್ತದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ನಗರದ ಕಲಾಮಂದಿರದಲ್ಲಿ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಬುಧವಾರ ಆಯೋಜಿಸಿದ್ದ ಮಕ್ಕಳ ದಸರಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮುಖ್ಯ ಮಂತ್ರಿಗಳ ಸಿಎಸ್‌ಆರ್ ಅನುದಾನಲ್ಲೂ 1000 ಶಾಲೆಗಳನ್ನು ಸ್ಥಾಪಿಸಲು ಕ್ರಮವಹಿಸಲಾಗುತ್ತಿದೆ ಎಂದು ಹೇಳಿದರು.

ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ (ಕೆಪಿಎಸ್) ಎಲ್‌ಕೆಜಿ ಯಿಂದ ದ್ವಿತೀಯ ಪಿಯುಸಿ ವರೆಗೆ ಗುಣಮಟ್ಟದ ಶಿಕ್ಷಣವನ್ನು ನೀಡಲಾಗುವುದು. ಪ್ರತಿ ತರಗತಿಗೆ ಒಬ್ಬ ಶಿಕ್ಷಕರು ಹಾಗೂ ಕೌಶಲ್ಯ ಅಭಿವೃದ್ಧಿ, ನಾಟಕ, ದೈಹಿಕ ಹಾಗೂ ಸಂಗೀತ ಶಿಕ್ಷಣಕ್ಕೆ ಪ್ರತ್ಯೇಕ ಶಿಕ್ಷಕರು ಇರಲಿದ್ದಾರೆ. ಅಲ್ಲದೇ

ಪುಟ 2ಕ್ಕೆ




### ಸಾಧಕ ಮಕ್ಕಳಿಗೆ ಸನ್ಮಾನ

**ಧಾರಾವಾಹಿ ಕಲಾವಿದೆ ಬೆಂಗಳೂರಿನ ಕು.ಟಿ.ಬಿ ರಚನಾ, ಕ್ರೀಡಾಪಟು ಮೈಸೂರಿನ ಮೇದಿನಿ ಗ್ರಾಮದ ತನುಶ್ರೀ ಹಾಗೂ ವಿಶೇಷ ಚೇತನ ಕ್ರೀಡಾಪಟು ಧಾರವಾಡದ ವಿನಾಯಕ ಹಳ್ಳಿಕೇರಿ ಅವರಿಗೆ ಸಚಿವ ಮಧು ಬಂಗಾರಪ್ಪ ಸನ್ಮಾನಿಸಿದರು. ಟಿ.ಬಿ.ರಚನಾ ಓಂ ನಮಃ ಶಿವಾಯ... ಓಂ ನಮಃ ಶಿವಾಯ... ಹರಹರ ಶಂಭೊ... ಶಿವ ಶಂಭೊ... ಸ್ವಯಂಭೊ... ಹಾಗೂ ನಗರವಿ ಶಾರದ ನಟರಾಜು ಬಂದನು... ಹಾಡುಗಳಿಗೆ ನೃತ್ಯ ಮಾಡಿ ಸಭಿಕರನ್ನು ರಂಜಿಸಿದರು.**

# ಬರಪೀಡಿತ ಪಟ್ಟಿಗೆ ಇನ್ನೂ 9 ತಾಲ್ಲೂಕುಗಳ ಸೇರ್ಪಡೆ: ಪರಂ

**ಬೆಂಗಳೂರು:** ರಾಜ್ಯದಲ್ಲಿ ಇನ್ನೂ 9 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗುತ್ತದೆ. ಇದರಿಂದ ರಾಜ್ಯದ ಬರಪೀಡಿತ ತಾಲೂಕುಗಳ ಸಂಖ್ಯೆ 226ಕ್ಕೆ ಏರಿಕೆಯಾಗಲಿದೆ ಎಂದು ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಬುಧವಾರ ತಿಳಿಸಿದರು.

ಈ 9 ತಾಲೂಕುಗಳಲ್ಲಿ ಸ್ಥಳ ಪರಿಶೀಲನೆ ಪೂರ್ಣಗೊಂಡಿದೆ. ಉಳಿದ ತಾಲೂಕುಗಳು ನಿಗದಿತ ಮಾನದಂಡಗಳನ್ನು ಪೂರೈಸುತ್ತವೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಉಳಿದ ತಾಲೂಕುಗಳ ಪೈಕಿ ಯಾವುದಾದರೂ ನಿಗದಿತ ಮಾನದಂಡ ಪೂರೈಸಿದರೆ. ಆ ತಾಲೂಕುಗಳಲ್ಲೂ ಸ್ಥಳ ಪರಿಶೀಲನೆ ನಡೆಸಲು ಕ್ರಮಕೈಗೊಳ್ಳುತ್ತೇವೆ ಎಂದು ತಿಳಿಸಿದರು.

ಕರ್ನಾಟಕದಲ್ಲಿ ಉಂಟಾಗಿರುವ ನಷ್ಟದ ವಿವರಗಳನ್ನು ಒಳಗೊಂಡ ಅಂತಿಮ ಮನವಿಯನ್ನು ರಾಜ್ಯ ಸರ್ಕಾರ ಸಿದ್ಧಪಡಿಸುತ್ತಿದೆ. ಒಂದು ವಾರದೊಳಗೆ ಅದು ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಅವರು ಹೇಳಿದರು.

### ಎಸ್‌ಸಿ-ಎಸ್‌ಟಿ ಮೀಸಲಾತಿ: ಸಂಪುಟ ಸಭೆಯಲ್ಲಿ ಚರ್ಚೆ

**ಎಸ್‌ಸಿ-ಎಸ್‌ಟಿ ಮೀಸಲಾತಿಗೆ ಸಂಬಂಧಿಸಿದಂತೆ ಹೈಕೋರ್ಟ್ ತೀರ್ಪು ವಿಚಾರವಾಗಿ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕೇ ಅಥವಾ ಒಂಬತ್ತನೇ ಶೆಡ್ಯೂಲ್‌ಗೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಬೇಕೇ ಎಂಬ ಕುರಿತು ಸಂಪುಟದಲ್ಲಿ ತೀರ್ಮಾನ**

ಪುಟ 2ಕ್ಕೆ



ಕರ್ನಾಟಕಕ್ಕೆ ಉಂಟಾಗಿರುವ ಒಟ್ಟು ನಷ್ಟದ ಅಂದಾಜು ದೊರೆತ ಬಳಿಕ, ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯಾ ನಿಧಿ ಮಾರ್ಗಸೂಚಿಗಳಡಿ ಎಷ್ಟು ಆರ್ಥಿಕ ನೆರವು ಕೋರಬಹುದು ಎಂಬುದನ್ನು ನಿರ್ಧರಿಸುತ್ತೇವೆ ಎಂದು ತಿಳಿಸಿದರು.

ಬರದಿಂದ ಉಂಟಾಗಿರುವ ನಷ್ಟವನ್ನು ನಿಭಾಯಿಸಲು ಕರ್ನಾಟಕಕ್ಕೆ ಅಗತ್ಯವಾದ

ಪುಟ 2ಕ್ಕೆ

# ದಸರಾ ಕ್ರೀಡಾಕೂಟ: ವಿಜೇತರಿಗೆ ಬಹುಮಾನ ವಿತರಣೆ




ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ "ದಸರಾ ಕ್ರೀಡಾಕೂಟ ಸಿಎಂ ಕಪ್-2026"ರ ವಿಜೇತರಿಗೆ ಬುಧವಾರ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಬಹುಮಾನ ವಿತರಿಸಲಾಯಿತು.

ಈ ವೇಳೆ ಶಾಸಕ ತನ್ವೀರ್ ಸೇಠ್ ವಿಜೇತ ಕ್ರೀಡಾಪಟುಗಳಿಗೆ ಬಹುಮಾನ ವಿತರಿಸಿ ಮಾತನಾಡಿ, ಈಗಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಪೋಷಕರು ತಮ್ಮ ಮಕ್ಕಳು ಕ್ರೀಡೆಯಲ್ಲಿ ಭಾಗವಹಿಸಿ ಎಂದು ಪ್ರೇರೆಪಿಸುತ್ತಿಲ್ಲ. ಅತೀ ಹೆಚ್ಚು ಅಂಕ ಪಡೆಯಬೇಕು ಎಂದು ನೀರಿಕ್ಷಿಸುತ್ತಿದ್ದಾರೆ. ಎಲ್ಲರೂ ವೈದ್ಯರು, ಎಂಜಿನಿಯರ್ ಆಗಬೇಕು ಎಂದು ಬಯಸುತ್ತಾರೆ. ಈ ನಾಡನ್ನು ಕಟ್ಟಲು ಎಲ್ಲಾ ಕ್ಷೇತ್ರದವರು ಬೇಕು. ಗೆಲವು, ಸೋಲು ಎರಡನ್ನು ಸಮವಾಗಿ ಸ್ವೀಕರಿಸುವ ಮನಸ್ಥಿತಿಯನ್ನು ಕ್ರೀಡೆ ಕಲಿಸುತ್ತದೆ. ಹೀಗಾಗಿ ಸ್ಥಳೀಯ ಸಂಸ್ಥೆಗಳಿಗೆ ಕ್ರೀಡಾ ಜವಾಬ್ದಾರಿ ನೀಡಬೇಕು. ನಗರ ಸಭೆ, ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ವಿಧಾನ ಸಭಾ ಕ್ಷೇತ್ರವಾರು ಕ್ರೀಡಾಪಟುಗಳನ್ನು ಗುರುತಿಸಲು ಸರ್ಕಾರ ಹೆಚ್ಚಿನ ಆದ್ಯತೆ ನೀಡಲಿದೆ ಎಂದರು.

ದಸರಾದಲ್ಲಿ ಪ್ರತೀ ವರ್ಷ ಕ್ರೀಡಾಪಟುಗಳ ಏರಿಕೆಯನ್ನು ನಾವು ನೋಡುತ್ತಿದ್ದೇವೆ. ಯುವಸಮೂಹವು ಕ್ರೀಡಾ ಮಾನೋಭಾದಿಂದಲೇ ಈ ಸಮಾಜವನ್ನು ಕಟ್ಟುವ ಕೆಲಸ ಮಾಡಬೇಕಿದೆ. ಇದೇ ಉದ್ದೇಶದಿಂದ ನಮ್ಮ ಸರ್ಕಾರವು ಭಾರತ್ ಜೋಡೊ ಯುವಕರ ಸಂಘವನ್ನು ರೂಪಿಸುತ್ತಿದೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರಾದ ಎಂ.ಎನ್.ಅನುಚೇತ್ ಅವರು ಮಾತನಾಡಿ, ನಾಲ್ಕು ದಿನಗಳ ಕಾಲ ದಸರಾ ಕ್ರೀಡಾಕೂಟವನ್ನು ಉತ್ತಮವಾಗಿ ಆಯೋಜಿಸಿ ಯಶಸ್ವಿಗೊಳಿಸಿರುವ ಹೆಗ್ಗಳಿಕೆ ನಮಗಿದೆ. ಇದಕ್ಕಾಗಿ ತರಬೇತುದಾರರು ಹಾಗೂ ಇಲಾಖಾ ಅಧಿಕಾರಿಗಳು ಸಾಕಷ್ಟು ಶ್ರಮವಹಿಸಿದ್ದಾರೆ ಎಂದರು. ಸರ್ಕಾರದಿಂದ ಕ್ರೀಡಾಪಟುಗಳಿಗೆ ಸಲ್ಲಬೇಕಾದ ಎಲ್ಲಾ ಸೌಲಭ್ಯ ಹಾಗೂ ಗೌರವವನ್ನು ಇಲಾಖೆ ಒದಗಿಸಿಕೊಡುತ್ತಿದೆ. ಅದರಂತೆ ಕ್ರೀಡಾಪಟುಗಳು ನಮ್ಮ ದೇಶಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿ ಮತ್ತು ಯಶಸ್ಸನ್ನು ತರಬೇಕು ಎಂದು ಆಶಿಸಿದರು. ಇದೇ ಸಂದರ್ಭದಲ್ಲಿ ಕಬ್ಬಡ್ಡಿ ರಾಷ್ಟ್ರೀಯ ತರಬೇತುದಾರ ಬಿ.ಸಿ.ರಮೇಶ್ ರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಉಪನಿರ್ದೇಶಕ ಎಂ.ಸಿ.ರಮೇಶ್, ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ದಸರಾ ಉಪಸಮಿತಿಯ ಅಧ್ಯಕ್ಷ ವಿಜಯ್, ಉಪಾಧ್ಯಕ್ಷ ಸಂದೇಶ್, ಜಾಕೀರ್ ಪಾಷಾ, ಪ್ರಮೋದ್ ಜಯರಾಮ್, ವಿನಯ್ ಕುಮಾರ್, ಟಿ.ರಘು, ಪರಶಿವಮೂರ್ತಿ ಸೇರಿ ಇತರರು ಉಪಸ್ಥಿತರಿದ್ದರು.

# ವೃದ್ಧಾಶ್ರಮದ ನಿವಾಸಿಗಳಿಗೆ ಅರ್ಪಣೆ

ಮೈಸೂರು: ಇಂದಿನ ಡಿಜಿಟಲ್ ಯುಗದಲ್ಲಿ ಸಾಮಾಜಿಕ ಜಾಲತಾಣಗಳು ಕೆಲವರಿಗೆ ಮನರಂಜನೆಯ ವೇದಿಕೆಯಾಗಿದ್ದರೆ, ಇನ್ನು ಕೆಲವರಿಗೆ ಆದಾಯಗಳಿಸುವ ಮಾರ್ಗವಾಗಿವೆ. ಆದರೆ, ಸಾಮಾಜಿಕ ಜಾಲತಾಣದ ಮೂಲಕಗಳಿಸಿದ ಮೊದಲ ಹಣವನ್ನು ಅಶಕ್ತರ ಸೇವೆಗೆ ವಿನಿಯೋಗಿಸುವ ಮೂಲಕ ಕೊಡಗು ಮೂಲಕ ಕೂಡುಮಂಗಳೂರಿನ ಯುವತಿ ನಂದಿನಿಗೌಡ ಮಾನವೀಯತೆ ಮೆರೆದಿದ್ದಾರೆ.

ಕೂಡುಮಂಗಳೂರು ನಿವಾಸಿ ನಂದಿನಿಗೌಡ ಅವರು ತಮ್ಮ ಇನ್ಸ್ಟಾಗ್ರಾಮ್ ಖಾತೆಯಾದ ನಂದಿನಿ.ಗೌಡ369 ಮೂಲಕ ಸ್ಥಳೀಯ ವಿಚಾರಗಳು ಹಾಗೂ ಮಹತ್ವದ ಮಾಹಿತಿಗಳನ್ನು ಹಂಚಿಕೊಳ್ಳುತ್ತಾ ಪ್ರಮೋಷನ್ ಕಾರ್ಯ ಆರಂಭಿಸಿದ್ದಾರೆ. ಈ ಮೂಲಕ ಬಂದ ಮೊದಲ ಗಳಿಕೆಯನ್ನು ವೈಯಕ್ತಿಕ ಬಳಕೆಗೆ ಬಳಸಿಕೊಳ್ಳದೆ, ಕೂಡಿಗೆ ಸಮೀಪದ ಶ್ರೀ ಶಕ್ತಿ ವೃದ್ಧಾಶ್ರಮದಲ್ಲಿರುವ ವಿಕಲಚೇತನರು ಹಾಗೂ ವಿಶೇಷ ಚೇತನರ ಸೇವೆಗೆ ಮೀಸಲಿಟ್ಟಿದ್ದಾರೆ. ತಮ್ಮ ಮೊದಲ ಪ್ರಮೋಷನ್ನಿಂದ ಬಂದ ಹಣದಲ್ಲಿ ವೃದ್ಧಾಶ್ರಮದ ನಿವಾಸಿಗಳಿಗೆ ಹಣ್ಣು-ಹಂಪಲು ವಿತರಿಸುವುದರ ಜತೆಗೆ ಒಂದು ಹೊತ್ತಿನ ಊಟದ ವ್ಯವಸ್ಥೆ ಮಾಡುವ ಮೂಲಕ ಸೇವಾ ಮನೋಭಾವ ಮೆರೆದಿದ್ದಾರೆ.



ಪ್ರಸ್ತುತ ಸಾಮಾಜಿಕ ಜಾಲತಾಣಗಳು ವಿವಿಧ ಉದ್ದೇಶಗಳಿಗೆ ಬಳಕೆಯಾಗುತ್ತಿದ್ದು, ಕೆಲವರು ಪ್ರಚಾರ ಹಾಗೂ ವೈಯಕ್ತಿಕ ಪ್ರತಿಷ್ಠೆಗೆ ಹೆಚ್ಚಿನ ಆದ್ಯತೆ ನೀಡುತ್ತಿರುವ ಸಂದರ್ಭದಲ್ಲಿ ನಂದಿನಿಗೌಡ ಅವರ ಈ ಕಾರ್ಯ ಗಮನ ಸೆಳೆಯುತ್ತದೆ. ಸಾಮಾಜಿಕ ಜಾಲತಾಣವನ್ನು ಕೇವಲ ಆದಾಯಗಳಿಕೆ ಅಥವಾ ಜನಪ್ರಿಯತೆಗಾಗಿ ಮಾತ್ರವಲ್ಲದೆ, ಸಮಾಜಮುಖಿ ಕಾರ್ಯಗಳಿಗೂ ಬಳಸಿಕೊಳ್ಳಬಹುದು ಎಂಬುದನ್ನು ತಮ್ಮ ನಡೆ ಮೂಲಕ ತೋರಿಸಿಕೊಟ್ಟಿದ್ದಾರೆ.

# ಮಕ್ಕಳಿಗೆ ನನ್ನ ಮೊದಲ ಆದ್ಯತೆ: ಮಧು ಬಂಗಾರಪ್ಪ

**ಮೈಸೂರು:** ದೇವರು ಮತ್ತು ಮಕ್ಕಳ ವಿಷಯ ಬಂದಾಗ ನಾನು ಮಕ್ಕಳಿಗೇ ಮೊದಲ ಆದ್ಯತೆ ನೀಡುತ್ತೇನೆ. ದೇವರ ಜಾಗದಲ್ಲಿ ಮಕ್ಕಳನ್ನು ನೋಡಬೇಕು. ಅವರೇ ಮುಂದಿನ ದಿನಗಳಲ್ಲಿ ದೇಶವನ್ನು ಮುನ್ನಡೆಸಬಲ್ಲ ಆಶಾಕಿರಣಗಳು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ನಾಡಹಬ್ಬ ಮೈಸೂರು ದಸರಾ ಮಹೋ ತ್ಸವ-2026ರ ಅಂಗವಾಗಿ ಮೈಸೂರಿನ ಕರ್ನಾ ಟಕ ಕಲಾಮಂದಿರದಲ್ಲಿ ಬುಧವಾರ ನಡೆದ ಮಕ್ಕಳ ದಸರಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ದಸರಾ ಮಹೋತ್ಸವದ ಅಂಗವಾಗಿ ಸುಮಾರು 6,500 ಮಕ್ಕಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ವೇದಿ ಕೆಗೆ ಬರುವ ಮುನ್ನವೇ ಮಕ್ಕಳು ರಂಗೋಲಿ ಹಾಗೂ ಚಿತ್ರಕಲಾ ಸ್ಪರ್ಧೆಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದಾರೆ. ನಾಡಹಬ್ಬ ದಸರಾವನ್ನು ಮಕ್ಕಳು ತಮ್ಮದೇ ಆದ ವಿಭಿನ್ನ ದೃಷ್ಟಿಕೋನದಲ್ಲಿ ಚಿತ್ರಗಳ ಮೂಲಕ ಅಭಿವ್ಯಕ್ತಿಪಡಿಸಿದ್ದಾರೆ. ಮಕ್ಕಳ ಪ್ರತಿಭೆಯನ್ನು ಗುರುತಿಸಿ, ಗೌರವಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಶಿಕ್ಷಣ ಸಚಿವ ನಾಗಿ ಮಕ್ಕಳ ಹಿತಕ್ಕಾಗಿ ಪ್ರಾಮಾಣಿ ಕವಾಗಿ ಕೆಲಸ ಮಾಡಿಕೊಂಡು ಬಂದಿದ್ದೇನೆ. ರಾಜ್ಯದಲ್ಲಿ ಸುಮಾರು 1.16 ಕೋಟಿ ಮಕ್ಕಳು ನನ್ನ ಇಲಾಖೆಯ ವ್ಯಾಪ್ತಿಗೆ ಬರುತ್ತಾರೆ. ಇಷ್ಟು ದೊಡ್ಡ ಸಂಖ್ಯೆ ಯ ಮಕ್ಕಳ ಶೈಕ್ಷ ಣಿಕ ಭವಿಷ್ಯ ರೂಪಿ ಸುವ ಕೆಲಸದಲ್ಲಿ ತೊಡಗಿಸಿಕೊಳ್ಳುವು ದು ನನ್ನ ಪಾಲಿನ ಭಾಗ್ಯ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವುದು ನಮ್ಮ ಸರ್ಕಾರದ ಪ್ರಮುಖ ಆದ್ಯತೆ ಯಾಗಿದೆ ಎಂದು ತಿಳಿಸಿದರು.

## ಮಕ್ಕಳ ದರ್ಬಾರ್

ಮೈಸೂರು: ನಟಿ ಟಿ.ಬಿ.ರಚನಾ, ಅವರು ಓಂ ನಮಃ ಶಿವಾಯ... ಓಂ ನಮಃ ಶಿವಾಯ... ಹರ ಹರ ಶಂಭೊ... ಶಿವ ಶಂಭೊ... ಸ್ವಯಂಭೊ... ಹಾಗೂ ನಗರವಿ ಶಾರದ ನಟರಾಜು ಬಂದನು ಹಾಡುಗಳಿಗೆ ನೃತ್ಯ ಮಾಡಿ ಸಭಿಕರನ್ನು ರಂಜಿಸಿದರು. ವಿವಿಧ ವೇಷಭೂಷಣ ಕಲಾಪ್ರಕಾರಗಳೊಂದಿಗೆ 1000 ಮಕ್ಕಳೊಂದಿಗೆ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಡಿ.ದೇವ ರಾಜು ಅರಸು ರಸ್ತೆ ಮಾರ್ಗವಾಗಿ ಕಲಾಮಂದಿರದ ವರಗೆ ಕಲಾಥಾನ್ ಮೆರವಣಿಗೆ ನಡೆಯಿತು.

## ರೈತರ ಬದುಕು ಹಸನಾಗಲಿ

ಮೈಸೂರು: ಕೊಪ್ಪಳದ ಅಭಿನವ ಶ್ರೀ ಗವಿಸಿದ್ದೇಶ್ವರ ಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ಮೈಸೂರು ದಸರಾ ಮಹೋತ್ಸವ ನಡೆಯುತ್ತಿರುವುದು ವಿಶೇಷವಾಗಿದೆ. ಶ್ರೀಗಳ ಆಶೀರ್ವಾದ ಹಾಗೂ ತಾಯಿ ಚಾಮುಂಡೇಶ್ವರಿಯ ಕೃಪೆಯಿಂದ ರಾಜ್ಯದಲ್ಲಿ ಬರ ಗಾಲದ ಪರಿಸ್ಥಿತಿ ದೂರವಾಗಿ, ರೈತರ ಬದುಕು ಹಸನಾಗಲಿ ಎಂದು ಸಚಿವ ಮಧು ಬಂಗಾರಪ್ಪ ಪ್ರಾರ್ಥಿಸುವುದಾಗಿ ತಿಳಿಸಿದರು

# 26 ರಂದು ವಾಲ್ಮೀಕಿ ಜಯಂತಿ: ಅರ್ಥಪೂರ್ಣ ಆಚರಣೆಗೆ ಕ್ರಮವಹಿಸಿ

ಹಾಸನ: ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಹಾಗೂ ವಿಜೃಂಭಣೆಯಿಂದ ಆಚರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿಂದು ವಾಲ್ಮೀಕಿ ಜಯಂತಿ ಆಚರಣೆ ಕುರಿತು ಪೂರ್ವ ಸಿದ್ಧತಾ ಸಭೆ ನಡೆಸಿ ಮಾತನಾಡಿದ ಅವರು ಅ.26ರಂದು ನಡೆಯಲಿರುವ ಜಯಂತಿ ಕಾರ್ಯಕ್ರಮವನ್ನು ಎಲ್ಲರ ಸಹಕಾರದೊಂದಿಗೆ ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ತಿಳಿಸಿದರು. ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದೆ. ಅಂದು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಮೆರವಣಿಗೆಗೆ ಚಾಲನೆ ನೀಡಲಾಗುವುದು. ಮೆರವಣಿಗೆಯಲ್ಲಿ ವಿವಿಧ ಕಲಾತಂಡಗಳು ಭಾಗವಹಿಸುವಂತೆ ತಿಳಿಸಿದರು.

ಶಿಷ್ಟಾಚಾರದಂತೆ ಜನಪ್ರತಿನಿಧಿಗಳಿಗೆ ಆಹ್ವಾನ ಪತ್ರಿಕೆಗಳನ್ನು ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಸಮಾಜದ ಮುಖಂಡರನ್ನು ಸನ್ಮಾನಿಸುವ ಕುರಿತು ಈ ಹಿಂದೆ ಐದು ಮಂದಿಗೆ ಸನ್ಮಾನಿಸಲಾಗುತಿತ್ತು ಆದರೆ ಈ ಬಾರಿ ತಾಲ್ಲೂಕಿಗೆ ಒಬ್ಬರಂತೆ ಎಂಟು ಮಂದಿಯನ್ನು ಸನ್ಮಾನಿಸಲು ತೀರ್ಮಾನಿಸಿ ಅಗತ್ಯ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ತಿಳಿಸಿದರು. ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ದೂದ್ ಪಿರ್, ಸಂಘಟನೆಯ ಮುಖಂಡರಾದ ಸಂದೇಶ್, ಶ್ರೀಧರ್ ಕಲಿವೀರ್, ಮತ್ತಿತರರು ಉಪಸ್ಥಿತರಿದ್ದರು.




## ಮೊದಲ ಪುಟದಿಂದ

### 1225 ಕೆಪಿಎಸ್ ಶಾಲೆ ಆರಂಭ

ಮಕ್ಕಳಿಗೆ ಇಲಾಖೆಯಿಂದಲೇ ಜೂನ್ ತಿಂಗಳಿಂದ ಉಚಿತ ಬಸ್ ವ್ಯವಸ್ಥೆಯನ್ನು ಸಹ ಮಾಡಲಾಗುತ್ತದೆ ಎಂದು ತಿಳಿಸಿದರು. ಶಿಕ್ಷಣ ಸಚಿವನಾಗಿ ನಾಲ್ಕನೇ ಬಾರಿಗೆ ಮಕ್ಕಳ ದಸರಾ ಆಚರಣೆಯಲ್ಲಿ ಪಾಲ್ಗೊಳ್ಳುತ್ತಿರುವುದು ನನಗೆ ತುಂಬಾ ಸಂತೋಷ ತಂದಿದೆ. ನಮ್ಮ ಸರ್ಕಾರದಿಂದ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿ, ಗೌರವಿಸುವ ಕೆಲಸ ಮಾಡಲಾಗುತ್ತಿದೆ. ಇದರಿಂದ ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಯಲು ಸಾಧ್ಯ. ಮಕ್ಕಳೇ ನನಗೆ ಮೊದಲ ದೇವರು, ಜನರಿಗೆ

ಬರಗಾಲವನ್ನು ಎದುರಿಸುವ ಶಕ್ತಿಯನ್ನು ತಾಯಿ ಚಾಮುಂಡೇಶ್ವರಿ ನೀಡಲಿ ಎಂದು ಪ್ರಾರ್ಥಿಸಿದರು.

### ಸಂಪುಟ ಸಭೆಯಲ್ಲಿ ಚರ್ಚೆ

ಕೈಗೊಳ್ಳಬೇಕಿದೆ. ಸಚಿವ ಸಂಪುಟದ ನಿರ್ಧಾರದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಪರಮೇಶ್ವರ್ ತಿಳಿಸಿದರು.

### ಸ್ಟಿಂಗ್ ಬಹಳ ಕೆಟ್ಟದ್ದು

ನೀಡಿದ್ದಾರೆ ಎಂದರು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ಅವರ ಕೈಕೆಳಗೆ ಸ್ವತಂತ್ರವಾಗಿ ಕೆಲಸ ಮಾಡಿದ್ದೇನೆ. ಅಂತಹ ಸಿಹಿ ಗಳಿಗೆಯನ್ನು ಮಾತ್ರ ನೆನಪಿಟ್ಟುಕೊಳ್ಳುತ್ತೇನೆ. ಉಳಿದಿದ್ದು ನನಗೆ ಬೇಡವಾದ ವಿಚಾರ ಎಂದು ಹೇಳಿದರು.

### ಸಿದ್ದುಗೆ ಖೆಡ್ಡಾ: ಇಬ್ಬರ ಬಂಧನ

ಮಾಲೀಕರನ್ನು ಪತ್ತೆಹಚ್ಚುವ ಕಾರ್ಯ ನಡೆಸಿದ್ದಾರೆ. ಈ ಬೆನ್ನಲ್ಲೇ ಇಬ್ಬರು ಅನುಮಾನಾಸ್ಪದ ವ್ಯಕ್ತಿಗಳನ್ನು ವಶಕ್ಕೆ ಪಡೆಯಲಾಗಿದೆ. ಈ ಕೃತ್ಯದ ಹಿಂದೆ ಯಾರ ಕೈವಾಡವಿದೆ ಮತ್ತು ವಿಡಿಯೋ ಎಲ್ಲಿ ಸೃಷ್ಟಿಯಾಗಿದೆ ಎಂಬ ಕುರಿತು ಪೊಲೀಸರು ತೀವ್ರ ವಿಚಾರಣೆ ನಡೆಸುತ್ತಿದ್ದಾರೆ.

### 9 ತಾಲ್ಲೂಕುಗಳ ಸೇರ್ಪಡೆ: ಪರಂ

ಆರ್ಥಿಕ ನೆರವು ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು. ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಅವರು, ಅಧಿಕಾರಿಗಳು ದೆಹಲಿಗೆ ತೆರಳಿ ಮನವಿಯನ್ನು ಖುದ್ದಾಗಿ ಸಲ್ಲಿಸುವ ನಿಯೋಗದ ಸದಸ್ಯರನ್ನು ಅಂತಿಮಗೊಳಿಸಲಿದ್ದಾರೆ ಎಂದು ಪರಮೇಶ್ವರ್ ಹೇಳಿದರು.

### 3ನೇ ಸಿಎಂ ಬಂದರೂ ಆಶ್ಚರ್ಯವಿಲ್ಲ

ರಾಜಕೀಯವಾಗಿ ಮೂಲೆಗುಂಪು ಮಾಡುವ ಪ್ರಯತ್ನಗಳು ಕಾಂಗ್ರೆಸ್‌ನಲ್ಲೇ ನಡೆಯುತ್ತಿವೆಯೇ ಎಂಬ ಗಂಭೀರ ಅನುಮಾನಗಳು ಮೂಡುತ್ತಿದೆ ಎಂದು ಆರೋಪಿಸಿದರು. ಕಾಂಗ್ರೆಸ್ ನಾಯಕರನ್ನು ಒಳಗೊಂಡಿರುವ 'ಸ್ಟಿಂಗ್ ಆಪರೇಷನ್' (ರಹಸ್ಯ ಕಾರ್ಯಾಚರಣೆ) ಆರೋಪಗಳಿಗೆ ಸಂಬಂಧಿಸಿದ ವಿವಾದವನ್ನು ಪ್ರಸ್ತಾಪಿಸಿದ ಅವರು, ಈ ಬೆಳವಣಿಗೆಗಳು ಆಡಳಿತಾರೂಢ ಪಕ್ಷದೊಳಗಿನ ಆಂತರಿಕ ಅಧಿಕಾರ ಸಂಘರ್ಷವನ್ನು ಬಯಲು ಮಾಡಿವೆ ಎಂದರು. ಈ ಸ್ಟಿಂಗ್ ಆಪರೇಷನ್ ಹಿಂದೆ ಯಾರಿದ್ದಾರೆ? ಅವುಗಳನ್ನು ಯಾರು ಯೋಜಿಸಿದ್ದಾರೆ ಮತ್ತು ಯಾರು ನಿರ್ದೇಶಿಸುತ್ತಿದ್ದಾರೆ ಎಂಬುದನ್ನು ಕಾಂಗ್ರೆಸ್ ನಾಯಕರೇ ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು.



ಬುಧವಾರ ಮೈಸೂರು ದಸರಾದಲ್ಲಿ ನಡೆದ ಕಾರ್ಯಕ್ರಮಗಳ ಚಿತ್ರನೋಟ



# ಅ.18ಕ್ಕೆ ಕಾವಾದಲ್ಲಿ ಕಲಾಜಾತ್ರೆ ಸಂಭ್ರಮ

**ಮೈಸೂರು:** ದಸರಾ ಮಹೋತ್ಸವ ಅಂಗವಾಗಿ ದಸರಾ ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ ಕಾವಾ ಹಿರಿಯ ವಿದ್ಯಾರ್ಥಿಗಳ ಸಂಘದ ಸಹಯೋಗದೊಂದಿಗೆ 2ನೇ ವರ್ಷದ ಕಲಾಜಾತ್ರೆಯನ್ನು ಸಿದ್ದಾರ್ಥ ನಗರದ ನೂತನ ಡಿಸಿ ಕಚೇರಿ ಹಿಂಭಾಗ ಇರುವ ಕಾವಾ ಕಾಲೇಜಿನಲ್ಲಿ ಅ.18ರ ಭಾನುವಾರ ಆಯೋಜಿಸಲಾಗಿದೆ.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ದಸರಾ ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ ಉಪ ವಿಶೇಷಾಧಿಕಾರಿ ಹಾಗೂ ಕಾವಾ ಡೀನ್ ದೇವರಾಜು ಮಾತನಾಡಿ, ಅಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ನಡೆಯಲಿರುವ ಕಲಾಜಾತ್ರೆ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಶಾಸಕ ತನ್ವೀರ್ ಸೇಠ್, ಶಿಲ್ಪ ಕಲಾವಿದ ಅರುಣ್ ಯೋಗಿರಾಜ್ ಆಗಮಿಸಲಿದ್ದಾರೆ ಎಂದು ಹೇಳಿದರು.

ಈ ಬಾರಿಯ ಕಲಾಜಾತ್ರೆಯಲ್ಲಿ ರಾಜ್ಯ ಹಾಗೂ ಹೊರ ರಾಜ್ಯದ ನೂರಕ್ಕೂ ಹೆಚ್ಚು ವೃತ್ತಿಪರ ಕಲಾವಿದ ಹಾಗೂ ಹವ್ಯಾಸಿ ಕಲಾವಿದರು ಪಾಲ್ಗೊಳ್ಳುತ್ತಿದ್ದು,




ತಾವು ರಚಿಸಿದ ಚಿತ್ರಕಲೆ, ಶಿಲ್ಪಕಲೆ, ಛಾಯಾಚಿತ್ರ, ಹಾಗೂ ಮಿಶ್ರ ಮಾಧ್ಯಮ ಪ್ರಕಾರದ ಕಲಾಕೃತಿಗಳನ್ನು ಪ್ರದರ್ಶಿಸಿ ಮಾರಾಟಕ್ಕೆ ಇಡಲಿದ್ದಾರೆ. ಮೈಸೂರು ಹಾಗೂ ಸುತ್ತಮುತ್ತಲಿನ ಕಲಾಸಕ್ತರು ಹಾಗೂ ಸಾರ್ವಜನಿಕರು ಈ ಕಲಾಜಾತ್ರೆಗೆ ಆಗಮಿಸಿ ಕಲಾವಿದರು ಮತ್ತು ಕಲೆಯನ್ನು ಪ್ರೋತ್ಸಹಿಸಬೇಕು ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ದಸರಾ ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ ಕಾರ್ಯಾಧ್ಯಕ್ಷ ರಾಘವೇಂದ್ರ, ಉಪಾಧ್ಯಕ್ಷ ರವಿಕುಮಾರ್, ದೊರೆಸ್ವಾಮಿ, ಕಾವಾ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಮಂಜು ಪ್ರಸಾದ್, ಉಪಾಧ್ಯಕ್ಷ ಮಧುಸುಧನ್ ಇತರರು ಉಪಸ್ಥಿತರಿದ್ದರು.

# ಅಕ್ರಮ ಪಡಿತರ ಅಕ್ಕಿ ಸಾಗಾಟ

**ಗುಂಡ್ಲುಪೇಟೆ:** ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಾಗಾಟ ಮಾಡುತ್ತಿದ್ದ ಗೂಡ್ಸ್ ವಾಹನವನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದು, ಸಾಗಾಟ ಮಾಡುತ್ತಿದ್ದ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಆಹಾರ ನಿರೀಕ್ಷಕ ಅರವಿಂದ್ ಪಿ. ಅವರು ನೀಡಿದ ದೂರಿನ ಮೇರೆಗೆ, ಪೊಲೀಸ್ ಸಹಾಯಕ ಉಪನಿರೀಕ್ಷಕ ವೆಂಕಟೇಶಮೂರ್ತಿ ಅವರು ಬೀಮನಬೀಡು ಗ್ರಾಮದ ಎಚ್.ಸಿ. ಪೆಟ್ರೋಲ್ ಬಂಕ್ ಸಮೀಪ ರಸ್ತೆಯಲ್ಲಿ ಕೆಎ-11 ಬಿ-6549 ನೋಂದಣಿ ಸಂಖ್ಯೆಯ ಅಶೋಕ್ ಲೇಲ್ಯಾಂಡ್ ಗೂಡ್ಸ್ ವಾಹನವನ್ನು ಪರಿಶೀಲಿಸಿದರು. ಈ ವೇಳೆ ವಾಹನದಲ್ಲಿ ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಸುಮಾರು 800 ಕೆ.ಜಿ. ಪಡಿತರ ಅಕ್ಕಿ ಪತ್ತೆಯಾಗಿದ್ದು, ಇದರ ಮೌಲ್ಯ ಅಂದಾಜು ?24 ಸಾವಿರ ಎಂದು ತಿಳಿದುಬಂದಿದೆ. ಅಧಿಕಾರಿಗಳು ವಾಹನ ಹಾಗೂ ಅಕ್ಕಿಯನ್ನು ವಶಕ್ಕೆ ಪಡೆದಿದ್ದಾರೆ.

ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ 331/2026ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು, ಮುಂದಿನ ತನಿಖೆ ಕೈಗೊಳ್ಳಲಾಗಿದೆ.



## 'ಸಂಪದ ಸಾಲು' ಪತ್ರಿಕೆಯ ಸಂಪಾದಕರಿಗೆ ಅಂತರರಾಷ್ಟ್ರೀಯ ಪ್ರಶಸ್ತಿಯ ಗರಿ; ಅಕ್ಟೋಬರ್ 25ರಂದು ಗೋವಾದಲ್ಲಿ ಪ್ರಶಸ್ತಿ ಪ್ರದಾನ

# ವೆಂಕಟೇಶ ಎಸ್. ಸಂಪಗೆ ಇಂಟರ್‌ನ್ಯಾಷನಲ್ ನೋಬ್ಲರ್ ಅವಾರ್ಡ್

ಮೈಸೂರು: ಕಳೆದ ಎರಡು ದಶಕಗಳಿಂದ ಧನಾತ್ಮಕ ಪತ್ರಿಕೋದ್ಯಮದ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸುತ್ತಾ, ಯುವ ಬರಹಗಾರರಿಗೆ ಪ್ರೋತ್ಸಾಹ ನೀಡುತ್ತಾ ಬಂದಿರುವ ಪತ್ರಕರ್ತ ಹಾಗೂ 'ಸಂಪದ ಸಾಲು' ಪತ್ರಿಕೆಯ ಸಂಪಾದಕ ವೆಂಕಟೇಶ ಎಸ್. ಸಂಪ ಅವರಿಗೆ ಮತ್ತೊಂದು ಪ್ರತಿಷ್ಠಿತ ಗೌರವ ಲಭಿಸಲಿದೆ.

ಜಿಎಸ್ ಹೈ-ಟೆಕ್ ಸೊಲ್ಯೂಷನ್ಸ್ (GS High-Tech Solutions) ಸಂಸ್ಥೆ ಮತ್ತು ಕನ್ನಡ ಸ್ನೇಹ ಬಳಗ ನೀಡುವ 'ಇಂಟರ್ನ್ಯಾಷನಲ್ ನೋಬ್ಲರ್ ಅವಾರ್ಡ್ 2026' ಅನ್ನು ಅಕ್ಟೋಬರ್ 25 ರಂದು ಗೋವಾದಲ್ಲಿ ಪ್ರದಾನ ಮಾಡಲಾಗುವುದು ಎಂದು ಸಂಘಟಕ ಹಾಗೂ ಉದ್ಯಮಿ ಡಾ. ಜಿ. ಶಿವಣ್ಣ ತಿಳಿಸಿದ್ದಾರೆ.

ಈಗಾಗಲೇ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (KUWJ) ರಾಜ್ಯ ಪ್ರಶಸ್ತಿ ಹಾಗೂ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ



ನೀಡಲಾಗುವ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಪ್ರಶಸ್ತಿ ಸೇರಿದಂತೆ ನೂರಾರು ಪ್ರಶಸ್ತಿ-ಗೌರವಗಳಿಗೆ ಭಾಜನರಾಗಿರುವ ವೆಂಕಟೇಶ ಎಸ್. ಸಂಪ ಅವರಿಗೆ ಮತ್ತೊಂದು ಪ್ರಶಸ್ತಿ ಘೋಷಣೆಯಾಗಿರುವುದು ಅವರ ಪತ್ರಿಕೋದ್ಯಮ ಹಾಗೂ ಸಾಮಾಜಿಕ ಸೇವಾ ಕ್ಷೇತ್ರದ ಸಾಧನೆಗೆ ಸಂದ ಗೌರವವೆಂದು ಪರಿಗಣಿಸಲಾಗಿದೆ.

## 20 ವರ್ಷಗಳ ಧನಾತ್ಮಕ ಪತ್ರಿಕೋದ್ಯಮದ ಪಯಣ

ವೆಂಕಟೇಶ ಎಸ್. ಸಂಪ ಅವರು ಕಳೆದ 20 ವರ್ಷಗಳಿಂದ 'ಸಂಪದ ಸಾಲು' ಎಂಬ ಧನಾತ್ಮಕ ಕನ್ನಡ ಪತ್ರಿಕೆಯನ್ನು ನಿರಂತರವಾಗಿ ಮುನ್ನಡೆಸುತ್ತಿದ್ದಾರೆ. ಸಮಾಜಮುಖಿ ಚಿಂತನೆ, ಯುವಜನರಿಗೆ ಪ್ರೇರಣೆ, ಮಾನವೀಯ ಮೌಲ್ಯಗಳ ಪ್ರತಿಪಾದನೆ ಹಾಗೂ ಸಕಾರಾತ್ಮಕ ಬದಲಾವಣೆಯ ಆಶಯಗಳನ್ನು ತಮ್ಮ ಬರಹಗಳ ಮೂಲಕ ಓದುಗರಿಗೆ ತಲುಪಿಸುತ್ತಿದ್ದಾರೆ. ಅವರ ಸಾವಿರಾರು ಲೇಖನಗಳು ಕರ್ನಾಟಕದ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಸಂಪದ ಸಾಲು' ಪತ್ರಿಕೆಯ ಸಂಪಾದಕೀಯಗಳ ಮೂಲಕವೂ ಸಾಮಾಜಿಕ ಸಮಸ್ಯೆಗಳು, ಬದುಕಿನ ಮೌಲ್ಯಗಳು, ಯುವಜನರ ಭವಿಷ್ಯ ಹಾಗೂ ಸಮಾಜದ ಪ್ರಗತಿಯ ಕುರಿತು ತಮ್ಮದೇ ಆದ ವಿಶಿಷ್ಟ ಚಿಂತನೆಗಳನ್ನು ಮಂಡಿಸಿ ದ್ದಾರೆ. ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗುವ ಅವರ ಅಂಕಣ ಬರಹಗಳು ಓದುಗರಲ್ಲಿ ಜನಪ್ರಿಯತೆ ಗಳಿಸಿವೆ.

## ಪತ್ರಿಕೋದ್ಯಮದಾಚೆಗೂ ವಿಸ್ತರಿಸಿದ ಸಾಧನೆ

ಮುದ್ರಣ ಮಾಧ್ಯಮದ ಜೊತೆಗೆ ರೇಡಿಯೋ ಮತ್ತು ದೂರದರ್ಶನ ಕ್ಷೇತ್ರಗಳಲ್ಲಿಯೂ ವೆಂಕಟೇಶ ಎಸ್. ಸಂಪ ತಮ್ಮ ಛಾಪು ಮೂಡಿಸಿದ್ದಾರೆ. ನೂರಾರು ರೇಡಿಯೋ ಮತ್ತು ಟಿವಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿರುವ ಅವರು, ವಿವಿಧ ಟಿವಿ ವಾಹಿನಿಗಳ ಚರ್ಚಾ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿದ್ದಾರೆ. ಸಿನಿಮಾ ಹಾಗೂ ಧಾರಾವಾಹಿಗಳಲ್ಲಿ ನಟಿಸುವ ಮೂಲಕ ತಮ್ಮ ಬಹುಮುಖ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಎಂಬಿಎ ಪದವೀಧರರಾಗಿರುವ ಅವರು ಕೃಷಿಯಲ್ಲಿಯೂ ಆಸಕ್ತಿ ಬೆಳೆಸಿಕೊಂಡಿದ್ದಾರೆ. ವಿವಿಧ ಮಿಶ್ರ ಬೆಳೆಗಳ ಕೃಷಿ ಹಾಗೂ ಸಾವಯವ ಕೃಷಿಯ ಮೂಲಕ ಸ್ವಾವಲಂಬಿ ಬದುಕಿನ ಮಹತ್ವವನ್ನು ಸಾರುತ್ತಿದ್ದಾರೆ.

## ಸಾಮಾಜಿಕ ಜಾಗೃತಿಯೇ ಮುಖ್ಯ ಧ್ಯೇಯ

ರಕ್ತದಾನ, ನೇತ್ರದಾನ, ಪರಿಸರ ಜಾಗೃತಿ ಮತ್ತು ನೀರಿನ ಸಂರಕ್ಷಣೆ ಸೇರಿದಂತೆ ಹಲವು ಸಾಮಾಜಿಕ ಅಭಿಯಾನಗಳಲ್ಲಿ ಅವರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. 'ಸಂಪದ ಫೌಂಡೇಶನ್ ಫಾರ್ ಪಬ್ಲಿಕ್ ಅವೇರ್ನೆಸ್' ಸಂಸ್ಥೆಯ ಮೂಲಕ ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುತ್ತಿದ್ದಾರೆ.

ಪತ್ರಿಕೋದ್ಯಮವನ್ನು ಕೇವಲ ಸುದ್ದಿಗಳ ಪ್ರಕಟಣೆಗೆ ಸೀಮಿತಗೊಳಿಸದೆ, ಸಮಾಜದಲ್ಲಿ ಜವಾಬ್ದಾರಿಯುತ ಚಿಂತನೆಯನ್ನು ಬೆಳೆಸುವ ಹಾಗೂ ಜನರಲ್ಲಿ ಸಕಾರಾತ್ಮಕ ಬದಲಾವಣೆ ಮೂಡಿಸುವ ಮಾಧ್ಯಮವನ್ನಾಗಿ ರೂಪಿಸುವುದು ಅವರ ಕಾರ್ಯದ ಪ್ರಮುಖ ಆಶಯವಾಗಿದೆ.

ಮಹದೇಶ್ವರ ಸ್ವಾಮಿಯ ಅಮೂಲ್ಯ ಆಭರಣಗಳು

## ನೂತನ ಕಾರ್ಯದರ್ಶಿಗೆ ಹಸ್ತಾಂತರ



ಹನೂರು: ಮಲೆ ಮಹದೇಶ್ವರ ಬೆಟ್ಟದ ಶ್ರೀ ಮಲೆ ಮಹದೇಶ್ವರ ಸ್ವಾಮಿಗೆ ಮೈಸೂರು ರಾಜಮನೆತನ ಸೇರಿದಂತೆ ವಿವಿಧ ದಾನಿಗಳು ಅರ್ಪಿಸಿದ್ದ ಕೋಟ್ಯಂತರ ಮೌಲ್ಯದ ಚಿನ್ನಾಭರಣ ಮತ್ತು ಬೆಳ್ಳಿ ಸಾಮಗ್ರಿಗಳನ್ನು ನಿಕಟಪೂರ್ವ ಕಾರ್ಯದರ್ಶಿ ಎ.ಈ. ರಘು ಅವರು ನೂತನ ಕಾರ್ಯದರ್ಶಿ ಪುರುಷೋತ್ತಮ್ ಅವರಿಗೆ ಅಧಿಕೃತವಾಗಿ ಹಸ್ತಾಂತರಿಸಿದರು.

ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಸೇವಾರ್ಥವಾಗಿ ನೀಡಿದ್ದ ಬಂಗಾರದ ಗಂಡಭೇರುಂಡ ಪದಕ, ಬಂಗಾರದ ಸರ, ಸಂಸ್ಕೃತ ಅಕ್ಷರವಿರುವ ಮತ್ತೊಂದು ಗಂಡಭೇರುಂಡ ಪದಕ ಮತ್ತು ಬಂಗಾರದ ಜೋಡಿ ಸರ ಸೇರಿದಂತೆ ಸ್ವಾಮಿಯ ಪ್ರಮುಖ ಆಭರಣಗಳನ್ನು ಹಸ್ತಾಂತರಿಸಲಾಯಿತು.

ಹಸ್ತಾಂತರಿಸಲಾದ ಆಭರಣಗಳಲ್ಲಿ ಚಿನ್ನದ ಕೊಳಗದ ಹಣೆಯ ಮೇಲಿನ ಮೂರು ಸಾಲಿನ ವಿಭೂತಿ ಪಟ್ಟಿಯಲ್ಲಿರುವ 176 ವಜ್ರಗಳು ಮತ್ತು 21 ಮಾಣಿಕ್ಯಗಳು, ದೊಡ್ಡ ಮುತ್ತಿನ ಪದಕ, ದೊಡ್ಡ ಮತ್ತು ಚಿಕ್ಕ ರತ್ನಖಚಿತ ಕಿರೀಟಗಳು, ಎರಡು ಬಂಗಾರದ ಕರ್ಣಜ್ವಾಲೆ, ಎರಡು ಬಂಗಾರದ ಕಣ್ಣಿಗಳು, ಒಂದು ಬಂಗಾರದ ಮೀಸೆ, ಎರಡು ಬಂಗಾರದ ಹಸ್ತಗಳು, ಬಂಗಾರದ ವೀರಭದ್ರಸ್ವಾಮಿ ಮುದ್ರಿಕೆ, ಶೇಷಣ್ಣ ಒಡೆಯರ ಬಂಗಾರದ ಕಿರೀಟ, ಬಂಗಾರದ ಮುಕ್ಕಣ್ಣ ಮತ್ತು ಬೊಟ್ಟು, ವಜ್ರಖಚಿತ ಕೋರಂಬಾ, ಬೆಳ್ಳಿ ಪೀಠದಲ್ಲಿ ಬಂಗಾರದ ಬಸವ, ಬೆಳ್ಳಿ ಸರ ಮತ್ತು ಬೆಳ್ಳಿ ಕೊಂಡಿ ಸೇರಿದಂತೆ ಇತರೆ ಬೆಳ್ಳಿ ಸಾಮಗ್ರಿಗಳು ಸೇರಿವೆ. ಇದೇ ಸಂದರ್ಭದಲ್ಲಿ ಸ್ಟ್ರಾಂಗ್ ರೂಂನ ಬೀಗದ ಕೀಲಿಕೈಯನ್ನೂ ಹಸ್ತಾಂತರಿಸುವ ಮೂಲಕ ಪ್ರಾಧಿಕಾರದ ಎಲ್ಲಾ ಜವಾಬ್ದಾರಿಗಳನ್ನು ನೂತನ ಕಾರ್ಯದರ್ಶಿಗಳಿಗೆ ವಹಿಸಿಕೊಟ್ಟು ನಿಕಟಪೂರ್ವ ಕಾರ್ಯದರ್ಶಿ ರಘು ಅವರು ತಮ್ಮ ಕರ್ತವ್ಯ ಪೂರ್ಣಗೊಳಿಸಿದ್ದಾರೆ. ಈ ವೇಳೆ ಉಪ ಕಾರ್ಯದರ್ಶಿ ಚಂದ್ರಶೇಖರ್, ಲೆಕ್ಕಪತ್ರ ಸಲಹೆಗಾರ ಮಹದೇವ್, ಸಿಬ್ಬಂದಿ ವರ್ಗದವರಾದ ಸರಗೂರು ಮಹದೇವಸ್ವಾಮಿ, ಮಲ್ಲಿಕಾರ್ಜುನ್, ಪಾರುಪತ್ತೆದಾರ ಮಹಾಲಿಂಗನಕಟ್ಟೆ ಮಹದೇವಸ್ವಾಮಿ, ಜನಾರ್ದನ್,ಪ್ರಧಾನ ಅರ್ಚಕ ಕೆ.ವಿ. ಮಾದೇಶ್ ಸೇರಿದಂತೆ ಇತರರು ಹಾಜರಿದ್ದರು.

## ಜಿಲ್ಲಾ ಆಸ್ಪತ್ರೆ ಅವ್ಯವಸ್ಥೆ ಖಂಡಿಸಿ ಕನ್ನಡಪರ ಸಂಘಟನೆಗಳ ಪ್ರತಿಭಟನೆ

ಮಂಡ್ಯ:ಹೊರಗುತ್ತಿಗೆ ಕೆಲಸ ಮಾಡುತ್ತಿದ್ದ ಡ್ರೈವರ್ ಹಾಗೂ ಡಾಟಾ ಆಪರೇಟರ್ ಕೈ ಬಿಟ್ಟಿರುವ ನೌಕರರನ್ನು ಮರು ನೇಮಿಸಿಕೊಳ್ಳಲು ಹಾಗೂ ಹಿರಿಯರ ಆರೈಕೆ ಕಟ್ಟಡವನ್ನು ಬೇರೆ ಕಡೆ ನಿರ್ಮಾಣ ಮಾಡಿ ಎಂದು ಮಂಡ್ಯ ಜಿಲ್ಲಾ ಆಸ್ಪತ್ರೆಯ ಆಡಳಿತ ಕಚೇರಿಯ ಮುಂದೆ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಂಡ್ಯ ನಗರದ ಜಿಲ್ಲಾ ಆಸ್ಪತ್ರೆ ಆಡಳಿತ ಕಚೇರಿ ಮುಂದೆ ಕನ್ನಡಪರ ಸಂಘಟನೆಯ ನೂರಾರು ಕಾರ್ಯಕರ್ತರು ಜಿಲ್ಲಾ ಆಸ್ಪತ್ರೆಯ ಅವ್ಯವಸ್ಥೆ ವಿರುದ್ಧ ಹಾಗೂ ಸರಿಯಾಗಿ ಚಿಕಿತ್ಸೆ ನೀಡಬೇಕೆಂದು ಒತ್ತಾಯಿಸಿ ಆಡಳಿತ ಅಧಿಕಾರಿ ಮಿಮ್ಸ್ ನಿರ್ದೇಶಕರ ವಿರುದ್ಧ ಘೋಷಣೆ ಕೂಗಿದರು ಶೋಷಿತ ಸಮುದಾಯದ ಒಕ್ಕೂಟದ ರಾಜ್ಯ ಅಧ್ಯಕ್ಷರಾದ ರಾಜೇಂದ್ರಸಿಂಗ್ ಬಾಬು ಮಾತನಾಡಿ ಮಂಡ್ಯ ಜಿಲ್ಲಾ ಆಸ್ಪತ್ರೆಯ ಅವ್ಯವಸ್ಥೆಯಿಂದ ಕೂಡಿದೆ ಸರಿಯಾದ ಸಮಯಕ್ಕೆ ಚಿಕಿತ್ಸೆ ಸಿಗದೇ ಬಡವರು ಕಂಗಾಲಾಗಿದ್ದಾರೆ ಈ ಸಂಬಂಧ ಸಾಕಷ್ಟು ಬಾರಿ ದೂರು ನೀಡಿದರೂ ಆಸ್ಪತ್ರೆಯ ವೈದ್ಯಾಧಿಕಾರಿ ಹಾಗೂ ಮಿಮ್ಸ್ ನಿರ್ದೇಶಕರು ಯಾವುದೇ ಕ್ರಮ ಕೈಗೊಳ್ಳದೆ ಬಡ ರೋಗಿಗಳ ಜೀವನದ ಜೊತೆ ಚೆಲ್ಲಾಟ ವಾಡುತ್ತಿದ್ದಾರೆ ಹಾಗೆ 9 ವರ್ಷಗಳಿಂದ ಡ್ರೈವರ್ ಆಗಿ ಕೆಲಸ ನಿರ್ವಹಿಸುತ್ತಿದ್ದ ಬಾಲಸುಬ್ರಹ್ಮಣ್ಯಂ ಹಾಗೂ ಡಾಟಾ ಆಪರೇಟ್ ಆದ ಲಕ್ಷ್ಮಿ ಇನ್ನಿತರೆ ಹೊರಗುತ್ತಿಗೆ ನೌಕರರನ್ನು ಕನಿಷ್ಠ ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಿ, ಏಕಾಏಕಿ ಕೆಲಸದಿಂದ ಕೈ ಬಿಟ್ಟಿರುತ್ತಾರೆ ಕಾರ್ಮಿಕ ಇಲಾಖೆಯ ಕಾನೂನಿನ ಅನ್ವಯ ಒಬ್ಬ ವ್ಯಕ್ತಿಯನ್ನು ತೆಗೆಯಲು ಕನಿಷ್ಠ ಮೂರು ತಿಂಗಳು ಮುಂಚೆ ನೋಟಿಸ್ ನೀಡಬೇಕು ಹಾಗೂ ಕಾರಣವನ್ನು ಕೊಡಬೇಕು ಯಾವುದೇ ಕಾನೂನು ಅನುಸರಿಸದೇ ಕಾನೂನಿನ ಉಲ್ಲಂಘಿಸಿ ನೌಕರರನ್ನು ಕೈಬಿಟ್ಟರೋದು ಸರಿಯಾದ ಕ್ರಮವಲ್ಲ ಈ ಕೂಡಲೇ ಅವರನ್ನು ಮರು ನೇಮಿಸಿಕೊಳ್ಳಬೇಕೆಂದು ಸೂಚಿಸಿದರು. ಕರುನಾಡ ಸೇವಕರ ಸಂಘಟನೆಯ ರಾಜ್ಯ ವಕ್ತಾರರ ಎಂ.ಬಿ.ನಾಗಣ್ಣಗೌಡ ಮಾತನಾಡಿ ಆಸ್ಪತ್ರೆಯಲ್ಲಿ ತುರ್ತು ನಿಗ ಘಟಕದಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಿಲ್ಲ. ಜೊತೆಗೆ ಹೃದಯ ಸಂಬಂಧಿತ ವೈದ್ಯರಿಲ್ಲ ಅವ್ಯವಸ್ಥೆ ತುಂಬಿ ತುಳುಕುತ್ತಿದೆ ಮಂಡ್ಯದ ಜಿಲ್ಲಾ ಆಸ್ಪತ್ರೆ ಬಡ ಜನರು ಬಂದರು ಸರಿಯಾದ ಚಿಕಿತ್ಸೆ ಸಿಗದೇ ಸಾವುಗಳು ಸಂಭವಿಸುತ್ತಿವೆ ಈ ಸಾವುಗಳಿಗೆ ನೇರ ಕಾರಣ ಇಲ್ಲಿಯ ವೈದ್ಯಾಧಿಕಾರಿಗಳು ಮತ್ತು ವೈದ್ಯರು ಕಾರಣರಾಗಿರುತ್ತಾರೆ ಎಂದು ದೂರಿದರು. ಸ್ಥಳಕ್ಕೆ ಮಿಮ್ಸ್ ನಿರ್ದೇಶಕರ ಹಾಗೂ ವೈದಾಧಿಕಾರಿ ಶಿವಕುಮಾರ್ ಬರಬೇಕೆಂದು ಪಟ್ಟು ಹಿಡಿದರು. ಪ್ರತಿಭಟನೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಎಚ್ ಡಿ ಜಯರಾಮ್ ಆಟೋ ಚಾಲಕರ ಸಂಘಟನೆಯ ಸೋಮಣ್ಣ ವೆಂಕಟೇಶ್ ಗೋವಿಂದರಾಜು ರಾಷ್ಟ್ರೀಯ ಮಾನವ ಹಕ್ಕುಗಳ ರಾಜ್ಯಾಧ್ಯಕ್ಷರಾದ ಭೀಮೇಶ್ , ಎಂ.ಬಿ ರಮೇಶ್, ಉಮಾಶಂಕರ್, ಭಾಗವಹಿಸಿದ್ದರು




## ನಾಯಕರ ಆದರ್ಶ ರೂಢಿಸಿಕೊಳ್ಳಿ



ಚಾಮರಾಜನಗರ:ವೀರಮದಕರಿ ನಾಯಕರ ಧ್ಯೇಯ ಆದರ್ಶಗಳನ್ನು ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಎಂ.ರಾಮಚಂದ್ರು ತಿಳಿಸಿದರು.

ನಗರದ ಪರವೀಕ್ಷಣಾ ಮಂದಿರದಲ್ಲಿ ಆಯೋಜಿಸಲಾಗಿದ್ದ ವೀರಮದಕರಿ ನಾಯಕರ ಜಯಂತಿ ಕಾರ್ಯಕ್ರಮದಲ್ಲಿ ಮದಕರಿ ನಾಯಕರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಂತರ ಮಾಡಿದ ಅವರು, ದುರ್ಗದ ಹುಲಿ ಎಂದೇ ಖ್ಯಾತರಾಗಿದ್ದ ವೀರ ಮದಕರಿ ನಾಯಕರು ಚಿತ್ರದುರ್ಗದಲ್ಲಿ ರಾಜರಾಗಿ ಉತ್ತಮವಾದ ಆಳ್ವಿಕೆ ಮಾಡಿದ್ದಾರೆ. ಅವರ ಧ್ಯೇಯ, ಆದರ್ಶಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು ಎಂದರು. ಮದವೇರಿದ ಆನೆಯನ್ನು ಮದಿಸಿ, ಇಡೀ ವಿಶ್ವದಲ್ಲೇ ಹೆಸರುವಾಸಿಯಾದ ನಾಯಕರೇ ವೀರಮದಕರಿ ನಾಯಕರು. ಇವರ ಹೋರಾಟ, ಚಿಂತನೆ, ಆದರ್ಶ, ಆಡಳಿತ ಅತ್ಯುತ್ತಮವಾಗಿತ್ತು ಎಂದರು.

ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಸದಸ್ಯರಾದ ಅರಕಲವಾಡಿ ಸೋಮನಾಯಕ, ರಮೇಶ್, ನಗರಸಭಾ ಮಾಜಿ ಅಧ್ಯಕ್ಷ ಸುರೇಶ್ ನಾಯಕ, ನಗರಸಭಾ ಮಾಜಿಸದಸ್ಯ ಚಂಗುಮಣ , ಶಿವರಾಜ್, ಮುಖಂಡರಾದ ಶ್ರೀನಿವಾಸ ನಾಯಕ, ಕಂಡಕ್ಟರ್ ಸೋಮನಾಯಕ, ಶಿವು ವಿರಾಟ್, ಬದನಗುಪ್ಪೆ ಶಿವರಾಮ್, ವರದನಾಯಕ, ಹರದನಹಳ್ಳಿ ನಟರಾಜು, ರಂಗಸ್ವಾಮಿ ನಾಯಕ, ಅಮಚವಾಡಿ ಲಿಂಗರಾಜು, ಕೃಷ್ಣನಾಯಕ, ಬುಲೆಟ ಚಂದ್ರು, ಜಿ.ಬಂಗಾರ್, ಮಹದೇಶ್, ಆಟೋ ಮಂಜುನಾಥ್, ಬಸವಣ್ಣ ನಾಯಕ, ಲಿಂಗರಾಜು, ನಾರಾಯಣನಾಯಕ, ಸಿದ್ದರಾಜನಾಯಕ, ಜ್ಯೋತಿಗೌಡನಪುರ ಗ್ರಾ.ಪಂ.ಸದಸ್ಯ ನಿಂಗರಾಜನಾಯಕ ಇದ್ದರು.

## ಮಾದಪ್ಪನ ಸನ್ನಿಧಿಗೆ: ಟಿವಿಎಸ್ ಅಧ್ಯಕ್ಷ

ಚಾಮರಾಜನಗರ: ಟಿವಿ ಸುಂದರಂ ಆಂಡ್ ಸನ್ಸ್ ಕಂಪನಿಯ ಗೌರವ ಅಧ್ಯಕ್ಷ ವೇಣು ಶ್ರೀನಿವಾಸನ್ ಚಾಮರಾಜನಗರಕ್ಕೆ ಆಗಮಿಸಿ ಚಾಮರಾಜೇಶ್ವರನ ದರ್ಶನ ಪಡೆದರು.

ವಿಶೇಷ ಹೆಲಿಕಾಪ್ಟರ್‌ನಲ್ಲಿ ನಗರದಲ್ಲಿ ತಾತ್ಕಾಲಿಕ ಹೆಲಿಪ್ಯಾಡ್‌ಗೆ ಬಂದಿಳಿದು ಚಾಮರಾಜೇಶ್ವರನ ದರ್ಶನ ಪಡೆದು ವಿಶೇಷ ಪ್ರಾರ್ಥನೆ ಸಲ್ಲಿಸಿದರು. ದೇವಾಲಯದ ಇತಿಹಾಸ, ಐತಿಹ್ಯ ಮತ್ತು ರಥೋತ್ಸವದ ವಿಶೇಷತೆ ಬಗ್ಗೆ ಅರ್ಚಕರಿಂದ ಮಾಹಿತಿ ಪಡೆದರು. ಚಾಮರಾಜೇಶ್ವರನಿಗೆ ಪಂಚಾಮೃತ ಅಭಿಷೇಕ, ಕೆಂಪನಂಜಾಂಬ ದೇವಿ ಮತ್ತು ಶ್ರೀ ಚಾಮುಂಡೇಶ್ವರಿ ದೇವಿಗೆ ಕುಂಕುಮ ಅರ್ಚನೆ ಸಲ್ಲಿಸಿ ಫಲ-ತಾಂಬೂಲ ಪಡೆದರು.

ಚಾಮರಾಜೇಶ್ವರ ದೇವಾಲಯ 200 ವರ್ಷ ಪೂರೈಸಿರುವುದು ಜೊತೆಗೆ ಮೈಸೂರು ಒಡೆಯರ್ ನಿರ್ಮಿಸಿದ್ದರ ಬಗ್ಗೆ ತಿಳಿದು ದೇವಾಲಯಕ್ಕೆ ಆಗಬೇಕಾದ ಅಭಿವೃದ್ಧಿ ಯೋಜನೆಗಳಿಗೆ ಸಹಕರಿಸುವುದಾಗಿ ಭರವಸೆ ನೀಡಿದರು. ಚಾಮರಾಜೇಶ್ವರ ದೇಗುಲದ ಆಗಮಿಕರಾದ ದರ್ಶನ್, ಅರ್ಚಕರಾದ ರಾಮಕೃಷ್ಣ ಭಾರದ್ವಜ್, ನಾಗರಾಜ ದೀಕ್ಷಿತ್ ದೇವಾಲಯದ ಪರಂಪರೆ ಬಗ್ಗೆ ಮಾಹಿತಿ ನೀಡಿ,



ಆಷಾಡ ಮಾಸದಲ್ಲಿ ರಥೋತ್ಸವ ನಡೆಯುವ ಬಗ್ಗೆ ತಿಳಿಸಿಕೊಟ್ಟಾಗ ಮುಂದಿನ ವರ್ಷದ ರಥೋತ್ಸವಕ್ಕೆ ಬರಲು ಪ್ರಯತ್ನಿಸುವುದಾಗಿ ತಿಳಿಸಿದರು. ದೇವಸ್ಥಾನದ ಕಾರ್ಯನಿರ್ವಾಹಕಧಿಕಾರಿ ರಾಜಶೇಖರ್ ಹಾಜರಿದ್ದರು.

# ಎತ್ತಿನಹೊಳೆ ಯೋಜನೆ ಕಾಮಗಾರಿ ವೀಕ್ಷಣೆ

## ಯೋಜನೆ ಪೂರ್ಣಗೊಳಿಸಲು ವಿಳಂಬ: ಸಾರ್ವಜನಿಕ ಉದ್ಯಮಗಳ ಸಮಿತಿಯಿಂದ ಪರಿಶೀಲನೆ

ಹಾಸನ: ಕರ್ನಾಟಕ ಸರ್ಕಾರದ ಸಾರ್ವಜನಿಕ ಉದ್ಯಮಗಳ ಸಮಿತಿಯು ಎತ್ತಿನಹೊಳೆ ಯೋಜನೆಯ ಕಾಮಗಾರಿಯನ್ನು ವೀಕ್ಷಿಸಿ, ಯೋಜನೆಯ ಪ್ರಗತಿ ಹಾಗೂ ಕಾಮಗಾರಿ ಪೂರ್ಣಗೊಳಿಸುವಲ್ಲಿ ಆಗಿರುವ ವಿಳಂಬದ ಕುರಿತು ಪರಿಶೀಲನೆ ನಡೆಸಿತು.

ಸಮಿತಿ ಸದಸ್ಯ ಡಾ. ಎಂ.ಸಿ. ಸುಧಾಕರ್ ಮಾತನಾಡಿ, ಎತ್ತಿನಹೊಳೆ ಯೋಜನೆಯ ಪ್ರಗತಿ ಮತ್ತು ಮಹಾಲೇಖಪಾಲರು ವ್ಯಕ್ತಪಡಿಸಿರುವ ಕೆಲವು ಆಕ್ಷೇಪಣೆಗಳ ಕುರಿತು ಖುದ್ದಾಗಿ ಪರಿಶೀಲನೆ ನಡೆಸುವ ಉದ್ದೇಶದಿಂದ ಸಮಿತಿಯು ಭೇಟಿ ನೀಡಿದೆ. ಯೋಜನೆಯ ವಾಸ್ತವಾಂಶಗಳಲ್ಲಿ ಯಾವ ಕಾರಣಗಳಿಂದ ಬದಲಾವಣೆ ಮಾಡಲಾಗಿದೆ ಎಂಬುದನ್ನು ಅಧ್ಯಯನ ಮಾಡಿ, ಸಮಿತಿಯಲ್ಲಿ ವಿಸ್ತೃತವಾಗಿ ಚರ್ಚಿಸಿದ ಬಳಿಕ ವರದಿ ನೀಡಲಾಗುವುದು ಎಂದು ತಿಳಿಸಿದರು.

ಕೆಲವು ತೊಡಕುಗಳಿಂದ ಕಾಮಗಾರಿ ಪೂರ್ಣಗೊಳಿಸುವುದು ವಿಳಂಬವಾಗಿದೆ. ಇದರಿಂದಾಗಿ ಮೂಲ ಯೋಜನೆಯ ಅಂದಾಜು ವೆಚ್ಚ 8,300 ಕೋಟಿಯಿಂದ 23,000 ಕೋಟಿಗೆ ಏರಿಕೆಯಾಗಿದೆ. ವೆಚ್ಚ ಏರಿಕೆಗೆ ನೈಜ ಕಾರಣವೇನು ಹಾಗೂ ಯಾವೆಲ್ಲ ಕಾರಣಗಳಿಂದ ಕಾಮಗಾರಿ ವಿಳಂಬವಾಗಿದೆ ಎಂಬುದನ್ನು ಪರಿಶೀಲಿಸುವ ಉದ್ದೇಶದಿಂದ ಭೇಟಿ ನೀಡಲಾಗಿದೆ ಎಂದರು.

ಸಮಿತಿ ಸದಸ್ಯರಾದ ಸಮರ್ಥ್ ಶಾಮನೂರು, ಮಲ್ಲಿಕಾರ್ಜುನ್, ಐವಾನ್ ಡಿಸೋಜ, ಕಿಶೋರ್ ಕುಮಾರ್, ಶಾಂತನಗೌಡ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.



### ಏಳು ಜಿಲ್ಲೆಗಳಿಗೆ ಕುಡಿಯುವ ನೀರು

ಕಳೆದ ಐದಾರು ವರ್ಷಗಳ ಸರಾಸರಿ ಮಳೆಯ ಅಂಕಿಅಂಶಗಳನ್ನು ಗಮನಿಸಿದರೆ, ಏಳು ಜಿಲ್ಲೆಗಳಿಗೆ 14.5 ಟಿಎಂಸಿ ಕುಡಿಯುವ ನೀರು ಲಭ್ಯವಾಗಲಿದೆ ಎಂಬುದು ಸ್ಪಷ್ಟವಾಗುತ್ತದೆ ಎಂದು ಡಾ. ಎಂ.ಸಿ. ಸುಧಾಕರ್ ತಿಳಿಸಿದರು. ಮೂಲ ಯೋಜನೆಯಲ್ಲಿ 2023ಕ್ಕೆ 9 ಟಿಎಂಸಿ ಬಫರ್ ನೀರಿನ ಪ್ರಮಾಣವನ್ನು ಅಂದಾಜಿಸಲಾಗಿತ್ತು. 2026ರಲ್ಲಿ ಸರಾಸರಿ 16ರಿಂದ 17 ಟಿಎಂಸಿ ನೀರು ಲಭ್ಯವಾದರೆ, ಅದನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡಾಗ ನೀರಿನ ಲಭ್ಯತೆ ಇನ್ನಷ್ಟು ಹೆಚ್ಚಾಗಲಿದೆ ಎಂಬುದು ತಿಳಿಯುತ್ತದೆ. ಒಟ್ಟಾರೆ ಯೋಜನೆ ಪೂರ್ಣಗೊಳ್ಳುವ ಹಂತಕ್ಕೆ ಬಂದಿದೆ. 2026ರ ಅಂತ್ಯದ ವೇಳೆಗೆ ತುಮಕೂರಿಗೆ ನೀರು ತಲುಪಲಿದೆ ಎಂದು ಹೇಳಿದರು. ವರ್ಷದಲ್ಲಿ 139 ದಿನಗಳು ಮಾತ್ರ ನೀರು ಎತ್ತಲು ಅವಕಾಶವಿದೆ. ಈ ವರ್ಷ ವಾಡಿಕೆಯಂತೆ ಮಳೆಯಾಗದೆ ತೀವ್ರ ಬರಗಾಲ ಉಂಟಾಗಿದೆ. ಅರಣ್ಯ ಇಲಾಖೆ ಹಾಗೂ ರೈತರ ಸಮಸ್ಯೆಗಳು ಸೇರಿದಂತೆ ಹಲವು ತೊಡಕುಗಳು ನಿವಾರಣೆಯಾಗಿದ್ದು, ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯಬೇಕಾದ ಪ್ರಕ್ರಿಯೆಗಳೂ ನಡೆದಿವೆ. ಕಾಮಗಾರಿ ಪೂರ್ಣಗೊಳಿಸಿ ಮುಂದಿನ ವರ್ಷ ನಮ್ಮ ಭಾಗಕ್ಕೆ ನೀರು ತಲುಪಿಸಲಾಗುವುದು ಎಂದು ತಿಳಿಸಿದರು.

### ನೀರು ಸಂಸ್ಕರಿಸಿ ಕುಡಿಯಲು ಒದಗಿಸುವುದು ಮುಖ್ಯ

ಎತ್ತಿನಹೊಳೆ ಯೋಜನೆಯ ನೀರನ್ನು ನೇರವಾಗಿ ಬಳಸಲು ಸಾಧ್ಯವಾಗುವುದಿಲ್ಲ. ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ನೀರು ಪೂರೈಸಲು ಅದನ್ನು ಸಂಸ್ಕರಿಸಿ ಕುಡಿಯುವ ನೀರನ್ನಾಗಿ ಒದಗಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸಮಿತಿಯು ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನು ಒಳಗೊಂಡ ಸಭೆ ನಡೆಸಿ, ವಿಸ್ತೃತ ವರದಿ ನೀಡಲಿದೆ. ಶುದ್ಧ ಕುಡಿಯುವ ನೀರನ್ನು ಜನರಿಗೆ ಒದಗಿಸುವುದೇ ಈ ಯೋಜನೆಯ ಮೂಲ ಉದ್ದೇಶ ಎಂದು ಹೇಳಿದರು. ಮೇಕೆದಾಟು ಯೋಜನೆಯು ಯಶಸ್ವಿಯಾಗಿದ್ದು, ದೂರದೃಷ್ಟಿಯಿಂದ ಯೋಜನೆಗಳನ್ನು ರೂಪಿಸುವುದು ಜವಾಬ್ದಾರಿಯುತ ಸರ್ಕಾರದ ಕರ್ತವ್ಯವಾಗಿದೆ. ಯಾವುದೇ ಯೋಜನೆ ಪೂರ್ಣಗೊಂಡ ಬಳಿಕ ಯೋಚಿಸುವ ಬದಲು, ಯೋಜನೆ ಪ್ರಗತಿಯಲ್ಲಿರುವಾಗಲೇ ಮುಂದಾಲೋಚನೆಯೊಂದಿಗೆ ಅಗತ್ಯ ಯೋಜನೆಗಳನ್ನು ರೂಪಿಸಬೇಕು ಎಂದರು. ಕುಡಿಯುವ ನೀರಿನ ಬವಣೆಯನ್ನು ನಿವಾರಿಸಲು ಹಾಗೂ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಇಂತಹ ಯೋಜನೆಗಳನ್ನು ರೂಪಿಸಲಾಗುತ್ತದೆ ಎಂದು ತಿಳಿಸಿದರು.



## ಲಕ್ಷ್ಮೀನರಸಿಂಹ ಸ್ವಾಮಿಗೆ ವಿಶೇಷ ಪೂಜೆ!



ಮೈಸೂರು: ಯುವ ದಸರಾ ಕಾರ್ಯಕ್ರಮದ ಉದ್ಘಾಟನೆಗೆ ಆಗಮಿಸಿದ ನೃತ್ಯ ನಿರ್ದೇಶಕ ಹಾಗೂ ನಟ ಪ್ರಭುದೇವ್ ನಗರದ ಕಾಳಿದಾಸ ರಸ್ತೆಯಲ್ಲಿರುವ ಯತಿರಾಜ ಮಠದ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ನಂತರ ದೇವರ ಪ್ರಸಾದ ಸ್ವೀಕರಿಸಿದ ಪ್ರಭುದೇವ್ ಗೆ ಶಾಸಕ ಟಿ.ಎಸ್.ಶ್ರೀವತ್ಸ ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ಶ್ರೀಮಠದ ವೀರ ರಾಘವಾಚಾರ್, ಶಾಂತರಾಮ್, ಯೋಗ ನರಸಿಂಹ(ಮುರಳಿ), ವಿಕ್ರಂ ಅಯ್ಯಂಗಾರ್, ಟಿ.ಎಸ್.ಅರುಣ್, ಅಮಿತ್, ಎಂ.ವಿ.ನಾಗೇಂದ್ರ ಬಾಬು ಸೇರಿ ಮತ್ತಿತರರು ಉಪಸ್ಥಿತರಿದ್ದರು.

## ಸಮಿತಿ ಕರೆಯುವಂತೆ ಡಿಸಿಗೆ ಮನವಿ



ಚಾಮರಾಜನಗರ: ತಾಲೂಕು ಮತ್ತು ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಿತರಕ್ಷಣಾ ಸಮಿತಿಯ ಸಭೆಯನ್ನು ಕರೆಯುವಂತೆ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಡಿ.ಜಿ.ಸಾಗರ ಬಣದ ವತಿಯಿಂದ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಮನವಿ ಸಲ್ಲಿಸಲಾಯಿತು.

ತಾಲೂಕು ಆಡಳಿತ, ತಾಲೂಕು ಸಮಾಜ ಕಲ್ಯಾಣ ಇಲಾಖೆಗೆ ಅನೇಕ ಬಾರಿ ದಲಿತ ಸಂಘಟನೆಗಳು ಮನವಿ ಮಾಡಿದರು.ಕಳೆದ 10 ತಿಂಗಳಿಂದಲ್ಲೂ ತಾಲೂಕು ಮತ್ತು ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಿತರಕ್ಷಣಾ ಸಮಿತಿಯ ಸಭೆ ನಡೆಸಿಲ್ಲ. ವಿಳಂಬ ನೀತಿ ಧೋರಣೆ ಅನುಸರಿಸುತ್ತಿರುವುದು ಅತ್ಯಂತ ಖಂಡನೀಯವಾಗಿದೆ.ಆದ್ದುದ್ದರಿಂದ ತಕ್ಷಣವೇ ತಾಲೂಕು ಮತ್ತು ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಿತರಕ್ಷಣಾ ಸಮಿತಿಯ ಸಭೆಯನ್ನು ಕರೆಯಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಸಮಿತಿಯ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ ಒತ್ತಾಯಿಸಿದರು. ಸಂಘಟನಾ ಸಂಚಾಲಕ ರಂಗಸ್ವಾಮಿ, ಕೃಷ್ಣಯ್ಯ, ಪ್ರದೀಪ್, ಚಂದ್ರಶೇಖರ್, ರವಿಕುಮಾರ್ ಹಾಜರಿದ್ದರು.

ಉಮ್ಮತ್ತೂರಿನಲ್ಲಿ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ ಅಂಗವಾಗಿ ಕೃಷಿ ವಸ್ತು ಪ್ರದರ್ಶನ

# ರೈತರು ಆಧುನಿಕ ಕೃಷಿ ಪದ್ದತಿ ಅಳವಡಿಸಿಕೊಳ್ಳಿ: ಡಾ.ಎನ್.ಶಿವಕುಮಾರ್ ಕರೆ

ಚಾಮರಾಜನಗರ: ತಾಲ್ಲೂಕಿನ ಉಮ್ಮತ್ತೂರಿನಲ್ಲಿ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ಕೃಷಿ ವಸ್ತು ಪ್ರದರ್ಶನ ಆಯೋಜಿಸಲಾಯಿತು.

ಗ್ರಾಮದ ಸರ್ಕಾರಿ ಪ್ರಾಥಮಿಕ ಪಾಠಶಾಲಾವರಣದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ವಿ. ಸಿ. ಫಾರಂ ಮಂಡ್ಯ, ಕೃಷಿ ಮಹಾವಿದ್ಯಾಲಯ, ಯಡಬೆಟ್ಟ,ಕೃಷಿ ವಿಜ್ಞಾನ ಕೇಂದ್ರ, ಹರದನಹಳ್ಳಿ ಫಾರ್ಮ್, ಅಖಿಲ ಭಾರತ ಸುಸಂಘಟಿತ ಸಂಶೋಧನಾ ಪ್ರಾಯೋಜನೆ-ಹತ್ತಿ ಮತ್ತು ಜೋಳ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಕೃಷಿ ಸಂಬಂಧಿತ ಇಲಾಖೆಗಳು, ಹಾಲು ಉತ್ಪಾದಕರ ಸಹಕಾರ ಸಂಘ, ಉಮ್ಮತ್ತೂರು ಮತ್ತು ಕುದೇರು ಇವರುಗಳ ಸಂಯುಕ್ತ ಆಶ್ರಯದಲ್ಲಿ ಅಂತಿಮ ವರ್ಷದ ಬಿ.ಎಸ್ಸಿ (ಆನರ್ಸ್) ಕೃಷಿ ವಿದ್ಯಾರ್ಥಿಗಳ ಐ.ಸಿ.ಎ.ಆರ್.ನ ಸ್ಟೂಡೆಂಟ್ ರೆಡಿ ಯೋಜನೆಯಡಿಯಲ್ಲಿಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ ? 2026 ರ ಅಂಗವಾಗಿ ಅಯೋಜಿಸಿದ ಕೃಷಿ ಉತ್ಸವ " ಅನ್ನದಾತನ ಕೃಷಿ ಬಿಂಬ. ಕೃಷಿ ವಸ್ತು ಪ್ರದರ್ಶನಕ್ಕೆ ಅಧಿಕಾರಿಗಳು, ರೈತರು ಮೆಚ್ಚುಗೆ



ವ್ಯಕ್ತಪಡಿಸಿದರು. ಉತ್ತಮ ಸ್ಪಂದನೆ ವ್ಯಕ್ತವಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಗ್ರಾಮೀಣ ವಾಸಕ್ಕೆ ವಸತಿ ಸೌಲಭ್ಯ, ಆಹಾರ ಸೌಲಭ್ಯ ಮತ್ತು ಎಲ್ಲ ಕಾರ್ಯಕ್ರಮಗಳಿಗೂ ವಿದ್ಯಾರ್ಥಿಗಳ ಜೊತೆಗೆ ಬೆಂಬಲವಾಗಿ ನಿಂತು ಸಹಕರಿಸಿದ ಊರಿನ ಗ್ರಾಮಸ್ಥರಿಗೆ ವಂದಿಸಿ ನೆರೆದಿದ್ದ ಗಣ್ಯರಿಂದ ಅವರಿಗೆ ಸನ್ಮಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕೃಷಿ ಮಹಾವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳು ರೈತರಿಗೆ ಕೃಷಿಗೆ ಸಂಬಂಧಿಸಿದ ವಿವಿಧ ವಸ್ತುಗಳು, ಸುಧಾರಿತ ಕೃಷಿ ತಂತ್ರಜ್ಞಾನಗಳು ಹಾಗೂ ಆಧುನಿಕ ಕೃಷಿ ಪದ್ಧತಿಗಳ ಕುರಿತು ಮಾಹಿತಿ ನೀಡಿದರು. ಪ್ರದರ್ಶನದಲ್ಲಿ ವಿವಿಧ ಬೆಳೆಗಳ ಬೀಜಗಳು, ಸಾವಯವ ಕೃಷಿ ಉತ್ಪನ್ನಗಳು, ಜೈವಿಕ ಗೊಬ್ಬರಗಳು, ಕೀಟನಾಶಕ ಹಾಗೂ ರೋಗ ನಿರ್ವಹಣಾ ವಿಧಾನಗಳು, ಮಣ್ಣಿನ ಆರೋಗ್ಯ ಸಂರಕ್ಷಣೆ, ನೀರಿನ ಸಮರ್ಪಕ ಬಳಕೆ ಮತ್ತು ಕೃಷಿ ಯಾಂತ್ರೀಕರಣಕ್ಕೆ ಸಂಬಂಧಿಸಿದ ವಸ್ತುಗಳನ್ನು ಪ್ರದರ್ಶಿಸಲಾಯಿತು. ಕೃಷಿ ವಸ್ತುಪ್ರದರ್ಶನ ಉದ್ಘಾಟಿಸಿದ ಮಂಡ್ಯದ ವಿ.ಸಿ.ಫಾರಂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಶಿಕ್ಷಣ ನಿರ್ದೇಶಕ ಡಾ.ಎನ್.ಶಿವಕುಮಾರ್ ಮಾತನಾಡಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ವಿ. ಸಿ. ಫಾರಂ ಮಂಡ್ಯ, ಕೃಷಿ ಮಹಾವಿದ್ಯಾಲಯ, ಯಡಬೆಟ್ಟ,ಕೃಷಿ ವಿಜ್ಞಾನ ಕೇಂದ್ರ, ವತಿಯಿಂದ ಅಂತಿಮ ವರ್ಷದ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಕೃಷಿಯಲ್ಲಿ ಏನೇನು ಅನುಭವ ಕಲಿತಿರುತ್ತಾರೆ. ಅದನ್ನು ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಮೂಲಕ ಪ್ರಾಯೋಗಿಕ ರೈತರೊಂದಿಗೆ ಹಂಚಿಕೊಳ್ಳುವ ಕಾರ್ಯಕ್ರಮ ಇದಾಗಿದೆ. ವಿದ್ಯಾರ್ಥಿಗಳು ಗ್ರಾಮೀಣ ಜನರ ಜೀವನ ಹೇಗಿರುತ್ತದೆ ಎಂಬುದನ್ನು ತಿಳಿದುಕೊಳ್ಳಲು, ಇದರಿಂದ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡುತ್ತದೆ ಎಂದರು. ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕೃಷಿ ಮಹಾವಿದ್ಯಾಲಯ ಡೀನ್ ಡಾ.ಸಿ.ದೊರೆಸ್ವಾಮಿ ಮಾತನಾಡಿ, ಪ್ರತಿ ವರ್ಷವೂ ಕಾಲೇಜು ವತಿಯಿಂದ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ ಏರ್ಪಡಿಸಿ ನಾಲ್ಕು ಗೋಡೆ ಮಧ್ಯದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಗ್ರಾಮೀಣ ಪ್ರದೇಶದ ರೈತರ ಬದುಕು ತೋರಿಸುವುದು, ಕೃಷಿಯಲ್ಲಿ ಹೊಸತಂತ್ರಜ್ಞಾನ, ಹೊಸತಳಿ, ಆಧುನಿಕ ಕೃಷಿ ಪದ್ಧತಿ ಗಳನ್ನು ರೈತರಿಗೆ ತೋರಿಸುವುದು, ಮುಂದೆ ವಿದ್ಯಾರ್ಥಿಯು ಕೃಷಿ ಅಧಿಕಾರಿಯಾಗಿ ನೇಮಕಗೊಂಡರೆ ಹಳ್ಳಿಯ ರೈತರ ಜೀವನ ಹೇಗಿರುತ್ತದೆ. ಅದರ ಚಿತ್ರ ಅರ್ಥವಾಗಬೇಕು ಎಂಬ ಉದ್ದೇಶದಿಂದ ಹಳ್ಳಿಯಲ್ಲಿ 100 ದಿನಗಳ ಕಾಲ ರೈತರೊಂದಿಗೆ ಕೆಲಸ ಮಾಡಿ ರೈತ, ವಿದ್ಯಾರ್ಥಿ ಮಾಹಿತಿ ವಿನಿಮಯ ಮಾಡಲಾಗುತ್ತದೆ ಎಂದರು. ಮಂಡ್ಯದ ವಿ.ಸಿ.ಫಾರಂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ವಿಸ್ತರಣಾ ನಿರ್ದೇಶಕ ಡಾ.ಸಿ.ರಾಮಚಂದ್ರ, ಸಹಾಯಕ ಕೃಷಿ ನಿರ್ದೇಶಕಿ ವಿ.ರೂಪ, ಕೃಷಿ ವಿಜ್ಞಾನ ಕೇಂದ್ರ ಮುಖ್ಯಸ್ಥ ಡಾ.ಎನ್.ಟಿ.ನರೇಶ್, ಅಖಿಲ ಭಾರತ ಸುಸಂಘಟಿತ ಹತ್ತಿ ಬೆಳೆ ಸಂಶೋಧನಾ ಪ್ರಾಯೋಜನೆ ಮುಖ್ಯಸ್ಥ ಡಾ.ಶಶಿಕುಮಾರ್, ವಿಜ್ಞಾನಿ ಡಾ.ಚಂದ್ರಶೇಖರ್ ಎಸ್. ಕಳ್ಳಿಮನಿ, ಡಾ.ದೇವರಾಜು, ಡಾ.ಮೋಹನ್ ಕುಮಾರ್, ಡಾ.ಪವಿತ್ರ, ಡಾ.ಶರಣಪ್ಪ, ಡಾ.ವಾಘ್ ಮಾರೆ ವಿಜಯಕುಮಾರ್, ವೀರಪ್ಪಾ, ಕಲಾವಿದ ಉಮ್ಮತ್ತೂರು ಬಸವರಾಜು, ನಾಗೇಶ್, ಮಹೇಂದರ್ ಭಾಗವಹಿಸಿದ್ದರು.

# ಬಂಡೀಪುರದಲ್ಲಿ ಹುಲಿ, ಆನೆ ಸಾವು: ಆಕ್ರೋಶ

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ವಲಯದಲ್ಲಿ ಹುಲಿ ಹಾಗೂ ಆನೆ ಮೃತಪಟ್ಟಿರುವ ಘಟನೆಗಳು ಬೆಳಕಿಗೆ ಬಂದಿದ್ದು, ವನ್ಯಜೀವಿಗಳ ಸಂರಕ್ಷಣೆಯಲ್ಲಿ ಅರಣ್ಯ ಇಲಾಖೆಯ ಕಾರ್ಯವೈಖರಿ ಕುರಿತು ಪರಿಸರವಾದಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮದ್ದೂರು ವನ್ಯಜೀವಿ ವಲಯದ ಹೊಂಗಹಳ್ಳಿ ಬೀಟ್‌ನಲ್ಲಿ ಕಳ್ಳಬೇಟೆಗಾರರು ಹಾಕಿದ್ದ ಉರುಳಿಗೆ ಸಿಲುಕಿ ಎರಡು ವರ್ಷದ ಹುಲಿ ಮೃತಪಟ್ಟಿದೆ. ಇದೇ ವಲಯದ ಕರಡಿಕಲ್ಲು ಗುಡ್ಡದಲ್ಲಿ ಆನೆಯ ಕಳೇಬರ ಪತ್ತೆಯಾಗಿದ್ದು, ಆನೆಯ ಎರಡೂ ದಂತಗಳು ನಾಪತ್ತೆಯಾಗಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಪರಿಸರವಾದಿ ಜೋಸೆಫ್ ಹೂವರ್ ಪ್ರತಿಕ್ರಿಯಿಸಿ, ಬಂಡೀಪುರ ಹಾಗೂ ಮಧುಮಲೈ ಅರಣ್ಯ ಪ್ರದೇಶಗಳಲ್ಲಿ ಕಳ್ಳಬೇಟೆಗಾರರ ತಂಡಗಳು ಸಕ್ರಿಯವಾಗಿರುವ ಶಂಕೆಯಿದೆ. ಹುಲಿಯ ಸಾವಿಗೆ ಕಾರಣರಾದವರು ಹಾಗೂ ಆನೆಯ ದಂತಗಳನ್ನು ಕದ್ದೊಯ್ದವರನ್ನು ಕೂಡಲೇ ಪತ್ತೆಹಚ್ಚಿ ಬಂಧಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕಳ್ಳಬೇಟೆ ಪ್ರಕರಣಗಳ ಮಾಹಿತಿಯನ್ನು ಸಾರ್ವಜನಿಕರಿಂದ ಮುಚ್ಚಿಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಇಂತಹ ಘಟನೆಗಳ ಬಗ್ಗೆ ಪಾರದರ್ಶಕವಾಗಿ ಮಾಹಿತಿ ನೀಡಬೇಕು. ವನ್ಯಜೀವಿಗಳ ಸಂರಕ್ಷಣೆಗೆ





ಅಗತ್ಯ ಕ್ರಮ ಕೈಗೊಂಡು, ಕಳ್ಳಬೇಟೆ ತಡೆಗೆ ಅರಣ್ಯ ಇಲಾಖೆ ಹೆಚ್ಚಿನ ನಿಗಾ ವಹಿಸಬೇಕು ಎಂದು ಆಗ್ರಹಿಸಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿರುವ ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿ ನಂದೀಶ್ ಎಲ್., ಮದ್ದೂರು ವಲಯದಲ್ಲಿ ಹುಲಿ ಮತ್ತು ಆನೆ ಮೃತಪಟ್ಟಿರುವ ಪ್ರಕರಣಗಳ ತನಿಖೆಗಾಗಿ ವಿಶೇಷ ತನಿಖಾ ತಂಡ ರಚಿಸಲಾಗಿದೆ. ಪ್ರಕರಣಗಳ ಮಾಹಿತಿ ಬಹಿರಂಗಪಡಿಸಿದರೆ ಕಳ್ಳಬೇಟೆಗಾರರು ಎಚ್ಚೆತ್ತುಕೊಳ್ಳುವ ಸಾಧ್ಯತೆ ಇರುವುದರಿಂದ ವಿವರಗಳನ್ನು ಸಾರ್ವಜನಿಕರಿಗೆ ತಿಳಿಸಿರಲಿಲ್ಲ. ಈ ಸಂಬಂಧ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರಕ್ಕೆ ಈಗಾಗಲೇ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.

# ಸೇತುವೆ ನಿರ್ಮಾಣ ಕಾಮಗಾರಿಗೆ ಚಾಲನೆ



ಚಾಮರಾಜನಗರ: ತಾಲೂಕಿನ ನಾಗವಳ್ಳಿ ಗ್ರಾಮದ ಮಂಟೇಸ್ವಾಮಿ ದೇವಾಲಯದ ಮುಂಭಾಗ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಅನುದಾನ 1 ಕೋಟಿ ರೂ. ವೆಚ್ಚದಲ್ಲಿ ಸಿಸಿರಸ್ತೆ, ಸೇತುವೆ ನಿರ್ಮಾಣ ಕಾಮಗಾರಿಗೆ

ಪಶುಸಂಗೋಪನೆ, ರೇ??ಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಿ. ಪುಟ್ಟರಂಗಶೆಟ್ಟಿ ಭೂಮಿ ಪೂಜೆ ನೆರವೇರಿಸಿದರು. ಇದೇವೇಳೆ ಅವರು ಮಾತನಾಡಿ, ಮಾತನಾಡಿದ ಅವರು, ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ರಸ್ತೆ. ಕುಡಿಯುವ ನೀರು,ಸಮುದಾಯ ಭವನ,ಸೇರಿದಂತೆ ನಾಗರೀಕರ ಬೇಡಿಕೆಗೆ ಪೂರಕವಾಗುವಂತೆ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ವಿವಿಧ ಯೋಜನೆಗಳಡಿ ಅನುದಾನ ಮಂಜೂರುಮಾಡಿಸಿ, ಸಿಸಿ ರಸ್ತೆ,ಚರಂಡಿಗಳನ್ನು ನಿರ್ಮಿಸಲಾಗುತ್ತಿದೆ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವುದರ ಜೊತೆಗೆ ಸಾರ್ವಜನಿಕರ ಬಳಕೆಗೆ ಬಿಡಬೇಕು ಎಂದು ಸಂಬಂಧಿಸಿದ ಗುತ್ತಿಗೆದಾರರಿಗೆ ಸಚಿವರು ಸೂಚಿಸಿದರು. ಚಾಮುಲ್ ನಿರ್ದೇಶಕ ನಾಗಯ್ಯ ನಾಗವಳ್ಳಿ, ಬಸವರಾಜು, ಕಮಾಲ್‌ಖಾನ್, ರಂಗಸ್ವಾಮಿ, ಶಿವಣ್ಣ, ಸೇರಿದಂತೆ ಗ್ರಾಮದ ಮುಖಂಡರು ಗ್ರಾಮಸ್ಥರು ಇದ್ದರು

### ಅಕ್ಟೋಬರ್ 16ರಂದು

## ರೈತ ದಸರಾ, ಫಲಪುಷ್ಪ ಪ್ರದರ್ಶನ, ಶ್ವಾನ ಪ್ರದರ್ಶನ, ಹಾಲು ಕರೆಯುವ ಸ್ಪರ್ಧಾ

### ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮ

ಚಾಮರಾಜನಗರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖೆ ವತಿಯಿಂದ ಚಾಮರಾಜನಗರ ದಸರಾ ಮಹೋತ್ಸವ ಅಂಗವಾಗಿ ಅಕ್ಟೋಬರ್ 16ರಂದು ರೈತ ದಸರಾ, ಫಲಪುಷ್ಪ ಪ್ರದರ್ಶನ, ಶ್ವಾನದಳ ಪ್ರದರ್ಶನ, ಹಾಲು ಕರೆಯುವ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 10 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದ ಪಕ್ಕದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಶ್ವಾನಗಳ ಪ್ರದರ್ಶನವನ್ನು ಪಶು ಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಅವರು ಉದ್ಘಾಟಿಸುವರು. 11.45 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ರೈತ ದಸರಾದ ವೇದಿಕೆ ಕಾರ್ಯಕ್ರಮ ಹಾಗೂ ರಾಶಿ ಪೂಜೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ರೈತ ದಸರಾ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ಬೆಳಿಗ್ಗೆ 11.30 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಭವನದ ಆವರಣದಲ್ಲಿ ಕೃಷಿ ವಸ್ತು ಪ್ರದರ್ಶನ ಉದ್ಘಾಟಿಸುವರು. ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಡಳಿತ ಭವನದ ಒಳ ಆವರಣದಲ್ಲಿ ಶಾಸಕರಾದ ಎಂ.ಆರ್. ಮಂಜುನಾಥ್ ಅವರು ಫಲಪುಷ್ಪ ಪ್ರದರ್ಶನ ಉದ್ಘಾಟಿಸುವರು. ಬೆಳಿಗ್ಗೆ 11 ಗಂಟೆಗೆ ಚಾಮರಾಜೇಶ್ವರ ದೇವಸ್ಥಾನದ ಬಳಿ ರೈತ ದಸರಾ ಮೆರವಣಿಗೆಗೆ ಶಾಸಕರಾದ ಹೆಚ್.ಎಂ. ಗಣೇಶ್ ಪ್ರಸಾದ್ ಚಾಲನೆ ನೀಡುವರು. ಸಂಜೆ 5 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಭವನದ ಪಕ್ಕದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಹಾಲು ಕರೆಯುವ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಅವರು ಬಹುಮಾನ ವಿತರಿಸುವರು.

ಕಾರ್ಯಕ್ರಮದಲ್ಲಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ್ ಅವರು ಘನ ಉಪಸ್ಥಿತಿ ವಹಿಸುವರು. ಶಾಸಕರಾದ ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ (ಮುನ್ನ) ಅವರು, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಚಿಕ್ಕಸ್ವಾಮಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

## ಎಸ್‌ಸಿ, ಎಸ್‌ಟಿ ಮೀಸಲಾತಿ ಪರ ಕಾಂಗ್ರೆಸ್ ಸರ್ಕಾರ ನಿಲ್ಲಲಿ

▸▸ ಡಾ. ನವೀನ್ ಮೌರ್ಯ



ಗುಂಡ್ಲುಪೇಟೆ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳದ ವಿಚಾರದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ನ್ಯಾಯಾಲಯದಲ್ಲಿ ಸಮರ್ಥವಾಗಿ ವಾದ ಮಂಡಿಸಿ, ಮೀಸಲಾತಿ ಪರ ನಿಲ್ಲಬೇಕು ಎಂದು ಬಿಜೆಪಿ ಎಸ್‌ಸಿ ಮೋರ್ಚಾ ಚಾಮರಾಜನಗರ ಜಿಲ್ಲಾಧ್ಯಕ್ಷ ಡಾ. ನವೀನ್ ಮೌರ್ಯ ಆಗ್ರಹಿಸಿದ್ದಾರೆ.

ಹಿಂದಿನ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಶೇ.50ರಿಂದ ಶೇ.56ಕ್ಕೆ ಹೆಚ್ಚಿಸಿತ್ತು. ಆದರೆ, ಪ್ರಸ್ತುತ ರಾಜ್ಯ ಕಾಂಗ್ರೆಸ್ ಸರ್ಕಾರ ಹಾಗೂ ಸಮಾಜ ಕಲ್ಯಾಣ ಇಲಾಖೆ ನ್ಯಾಯಾಲಯದಲ್ಲಿ ಅಗತ್ಯ ದಾಖಲೆಗಳನ್ನು ಸಮರ್ಪಕವಾಗಿ ಒದಗಿಸಿ, ಮೀಸಲಾತಿ ಹೆಚ್ಚಳವನ್ನು ಸಮರ್ಥಿಸಿಕೊಳ್ಳುವಲ್ಲಿ ವಿಫಲವಾಗಿರುವುದರಿಂದ ನ್ಯಾಯಾಲಯ ಮೀಸಲಾತಿ ಹೆಚ್ಚಳವನ್ನು ರದ್ದುಗೊಳಿಸಿದೆ ಎಂದು ಆರೋಪಿಸಿದ್ದಾರೆ. ದಲಿತ ಸಮುದಾಯವನ್ನು ಕೇವಲ ಮತಬ್ಯಾಂಕ್ ಆಗಿ ಬಳಸಿಕೊಳ್ಳದೆ, ಸಾಮಾಜಿಕ ನ್ಯಾಯದ ಆಶಯದಂತೆ ಮೀಸಲಾತಿ ಹೆಚ್ಚಳದ ಪರವಾಗಿ ನ್ಯಾಯಾಲಯದಲ್ಲಿ ಮತ್ತೊಮ್ಮೆ ಸಮರ್ಥವಾಗಿ ವಾದ ಮಂಡಿಸಬೇಕು. ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ನ್ಯಾಯ ದೊರಕಿಸಿಕೊಡಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಸರ್ಕಾರ ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿದರೆ ಮುಂಬರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲು ಜನರು ಸಿದ್ಧರಾಗಲಿದ್ದಾರೆ ಎಂದು ಎಚ್ಚರಿಕೆ ನೀಡಿದ್ದಾರೆ.

## ಹಾಸನಾಂಬ ಯುವಜನೋತ್ಸವ ನೋಂದಣಿಗೆ ಅ.19 ರವರೆಗೆ ಅವಧಿ ವಿಸ್ತರಣೆ

ಹಾಸನ: ಶ್ರೀ ಹಾಸನಾಂಬ ದೇವಿ ದರ್ಶನ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ-2026 ಅಂಗವಾಗಿ ಜಿಲ್ಲಾ ಉಸ್ತುವಾರಿ ಸಚಿವರ ಮಾರ್ಗದರ್ಶನದಂತೆ ಹಾಸನಾಂಬ ಯುವಜನೋತ್ಸವ ಏರ್ಪಡಿಸಲಾಗಿದ್ದು, ನೋಂದಣಿಗೆ ಅ.19 ರವರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್ ಲತಾ ಕುಮಾರಿ ಅವರು ತಿಳಿಸಿದ್ದಾರೆ.

ಜಾತ್ರಾ ಮಹೋತ್ಸವದ ಪ್ರಯುಕ್ತ ಜಿಲ್ಲೆಯ ಯುವ ಕಲಾವಿದರಿಗೆ ಸಾಂಸ್ಕೃತಿಕ ಸ್ಪರ್ಧೆಗಳನ್ನು ಸಿಲ್ವರ್ ಜೂಬ್ಲಿ ಪಾರ್ಕ್ ಆವರಣದ ಬಯಲು ರಂಗ ಮಂದಿರದಲ್ಲಿ ಏರ್ಪಡಿಸಲಾಗಿದೆ. ನ.1 ರಂದು ಸಮೂಹ ಶಾಸ್ತ್ರಿಯ ನೃತ್ಯ, ನ.2 ರಂದು ಸಮೂಹ ಜಾನಪದ ನೃತ್ಯ, ನ. 3 ರಂದು ಸಮೂಹ ಪಾಶ್ಚಾತ್ಯ ನೃತ್ಯ, ನ.4 ರಂದು ಸಮೂಹ ಜಾನಪದ ಗಾಯನ, ನ.5 ರಂದು ಏಕವ್ಯಕ್ತಿ ಹಾಸ್ಯ ಪ್ರದರ್ಶನ, ನ.6 ರಂದು ಪೌರಾಣಿಕ ಕಿರುನಾಟಕಗಳು, ನ.7 ರಂದು ಸಮೂಹ ಭಾವಗೀತೆ, ನ.8 ರಂದು ಪಾರಂಪರಿಕ ಹಾಗೂ ಪಾಶ್ಚತ್ಯ ವಸ್ತ್ರ ವಿನ್ಯಾಸ ಸ್ಪರ್ಧೆ ನಡೆಯಲಿದು, ಆನ್ ಲೈನ್ ನಲ್ಲಿ ಕ್ಯೂರ್ ಕೋಡ್ ಮೂಲಕ ಅ.19 ರವರೆಗೆ ನೊಂದಣಿ ಮಾಡಿಕೊಳ್ಳಬಹುದಾಗಿದೆ ಎಂದು ತಿಳಿಸಿದ್ದಾರೆ.

# ಕಾಡುತ್ತಿದೆ ನಿರುದ್ಯೋಗ, ಅಸಮಾನತೆ

## ಕವಯಿತ್ರಿ ಡಾ. ಕೆ. ಷರೀಫಾ ಕಳವಳ | ದಸರಾ ಯುವ ಕವಿಗೋಷ್ಠಿ

ಮೈಸೂರು: ಮೈಸೂರು ದಸರಾ ಮಹೋ ತ್ಸವದ ಅಂಗವಾಗಿ ನಗರವು ಮದುವಣ ಗಿತ್ತಿಯಂತೆ ಸಿದ್ಧಗೊಂಡು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ ಎಂದು ಕವಯಿತ್ರಿ ಡಾ. ಕೆ. ಷರೀಫಾ ಹೇಳಿದರು.

ಮಾನಸಗಂಗೋತ್ರಿಯ ಬಿ.ಎಂ. ಶ್ರೀ ಸಭಾಂಗಣದಲ್ಲಿ ಆಯೋಜಿಸಿದ್ದ ಯುವ ಕವಿಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಯುವ ಪೀಳಿಗೆ ಸಮಾಜದ ಚೈತನ್ಯಶಕ್ತಿಯಾಗಿದೆ. ಸಾಮಾಜಿಕ ಪಿಡುಗು, ಭ್ರಷ್ಟಾಚಾರ, ಅಸಮಾನತೆ ಹಾಗೂ ಅನ್ಯಾಯವನ್ನು ಪ್ರಶ್ನಿಸುವ ಕಾವ್ಯ ರಚಿಸುವ ಮನೋಭಾವವನ್ನು ಯುವಕರು ಹೊಂದಿದ್ದಾರೆ ಎಂದರು.

ಗೋಷ್ಠಿಯಲ್ಲಿ 39 ಮಂದಿ ಕವಿತೆಗಳನ್ನು ವಾಚಿಸಿದರು. ಲಿಂಗತ್ವ ಅಲ್ಪಸಂಖ್ಯಾತರು, ವಿಶೇಷ ಚೇತನರು ಹಾಗೂ ಕೂಲಿಕಾರ್ಮಿಕರು ಕವನ ವಾಚಿಸಿದ್ದು ವಿಶೇಷವಾಗಿತ್ತು. ಭ್ರಷ್ಟಾಚಾರ, ನಿರುದ್ಯೋಗ, ರಾಜಕೀಯ, ಧರ್ಮ, ಕಾರುಣ್ಯ ಹಾಗೂ ಪ್ರಕೃತಿಗೆ ಸಂಬಂಧಿಸಿದ ಕವಿತೆಗಳು ಪ್ರೇಕ್ಷಕರ ಚಪ್ಪಾಳೆಗೆ ಪಾತ್ರವಾದವು.

ಕಾರ್ಯಕ್ರಮದಲ್ಲಿ ಕವಿ ಹೆಚ್. ಗೋವಿಂದಯ್ಯ, ಸಿನಿಮಾ ಗೀತರಚನಾಕಾರ ಹೃದಯ ಶಿವ, ಪಾಲಿಕೆ ಆಯುಕ್ತ ದಾಸೇಗೌಡ, ದಸರಾ ಕವಿಗೋಷ್ಠಿ ಕಾರ್ಯದರ್ಶಿ ಆನಂದ, ಕನ್ನಡ ಪ್ರಾಧ್ಯಾಪಕರಾದ ತ್ರಿವೇಣಿ, ಉಮೇಶ ದೇವಿನಹಳ್ಳಿ ಹಾಗೂ ಪ್ರೊ. ನಂಜಯ್ಯ ಹೊಂಗನೂರು ಉಪಸ್ಥಿತರಿದ್ದರು.



### ಯುವಕರನ್ನು ಕಾಡುತ್ತಿರುವ ಸಾಮಾಜಿಕ ಸಮಸ್ಯೆಗಳು

ನಿರುದ್ಯೋಗ, ಕೆಲಸದ ಅಭದ್ರತೆ, ಸಾಮಾಜಿಕ ಪಿಡುಗುಗಳು, ಅಸಮಾನತೆ, ಕೃಷಿ ಸಂಕಷ್ಟ, ಕೋಮುವಾದ ಹಾಗೂ ಮಾನಸಿಕ ಒತ್ತಡ ಯುವಕರನ್ನು ಕಾಡುತ್ತಿವೆ. ಇದರಿಂದಾಗಿ ಅನೇಕರು ಮಾದಕ ವ್ಯಸನಕ್ಕೆ ಒಳಗಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಕೋಮುವಾದ ಮತ್ತು ಕೇಸರೀಕರಣ ಪಠ್ಯಪುಸ್ತಕಗಳನ್ನು ಪ್ರವೇಶಿಸುತ್ತಿವೆ. ಕೋಮುವಾದದಿಂದ ಮಕ್ಕಳು ಏನನ್ನು ಕಲಿಯುತ್ತಾರೆ ಎಂಬುದನ್ನು ಪ್ರಶ್ನಿಸಬೇಕಿದೆ. ಇದೀಗ ಕೃತಕ ಬುದ್ಧಿಮತ್ತೆ (ಎಐ) ಬಳಕೆ ಹೆಚ್ಚಾಗುತ್ತಿದೆ. ಆದರೆ, ಇದರಿಂದ ವಾಸ್ತವತೆ ಮರೆಯಾಗುತ್ತಿದೆ ಎಂದು ಹೇಳಿದರು. ಯುವಕರು ಜಾಗೃತರಾಗುವ ಮೂಲಕ ಉತ್ತಮ ಸಮಾಜವನ್ನು ಕಟ್ಟಬೇಕು. ಯುವಜನರು ಸಾಮಾಜಿಕ ಜಾಲತಾಣಗಳ ಮೂಲಕ ಪರಸ್ಪರ ಮುಖಾಮುಖಿಯಾಗುತ್ತಿದ್ದಾರೆ. ಅನ್ಯಾಯದ ವಿರುದ್ಧ ಪ್ರತಿಭಟಿಸಲು ಜೆನ್ ಜಿ ಯುವಕರು ಮುಂದಾಗಿದ್ದಾರೆ. ಹೋರಾಟದ ರೂಪಕಗಳು ಬದಲಾಗುತ್ತಿವೆ. ಗಾಂಧಿ, ನೆಹರು ಹಾಗೂ ಅಂಬೇಡ್ಕರ್ ಇಂದಿಗೂ ಪ್ರಸ್ತುತರಾಗಿದ್ದು, ಜನರ ಹೃದಯದಲ್ಲಿದ್ದಾರೆ ಎಂದರು. ನಮ್ಮ ಸಮಸ್ಯೆಗಳನ್ನು ಪ್ರಶ್ನಿಸುವ ಮೂಲಕ ಉತ್ತರಗಳನ್ನು ಪಡೆಯಬೇಕು. ಬರಹ ಪ್ರಬಲವಾದ ಅಸ್ತ್ರವಾಗಿದ್ದು, ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ಬರವಣಿಗೆ ಬದ್ಧತೆಯಿಂದ ಕೂಡಿರಬೇಕು. ಕಾವ್ಯದಿಂದ ಹೊಟ್ಟೆ ತುಂಬಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಉದ್ಯೋಗದ ಜೊತೆಗೆ ಕಾವ್ಯವನ್ನೂ ಸಶಕ್ತವಾಗಿ ಬೆಳೆಸಿಕೊಳ್ಳಿ ಎಂದು ಸಲಹೆ ನೀಡಿದರು.

### ಪ್ರಶಸ್ತಿ, ಪ್ರಚಾರಕ್ಕಾಗಿ ಕವಿತೆ ಬರೆಯಬೇಡಿ

ಕವಿ ಡಾ. ಸತ್ಯನಂದಾ ಪಾತ್ರೋಟ ಮಾತನಾಡಿ, ದಸರಾ ಮಹೋತ್ಸವದಲ್ಲಿ ರಾಜ್ಯದ ಎಲ್ಲರಿಗೂ ಅವಕಾಶ ಸಿಗಬೇಕು. ಈ ಬಾರಿಯ ದಸರಾ ಉದ್ಘಾಟನೆಗೆ ಸ್ವಾಮೀಜಿಯವರಿಗೆ ಅವಕಾಶ ನೀಡಿರುವುದು ಸ್ವಾಗತಾರ್ಹ ಎಂದರು. ಯುವ ಕವಿಗಳು ಕವಿತೆ ಕಟ್ಟುವ ಮೂಲಕ ನಾಡು ಕಟ್ಟುವ ಕೆಲಸ ಮಾಡಬೇಕು. ಜಾತಿ, ಮತ ಹಾಗೂ ಧರ್ಮದ ಸ್ವಾರ್ಥವಿಲ್ಲದೆ ಕವಿತೆ ರಚಿಸುವ ತಾಯಿಯ ಕರುಳಿನಂತಹ ಮನೋಭಾವ ಇರಬೇಕು. ಪ್ರಶಸ್ತಿ ಹಾಗೂ ಪ್ರಚಾರಕ್ಕಾಗಿ ಕವಿತೆ ಬರೆಯಬೇಡಿ ಎಂದು ಕಿವಿಮಾತು ಹೇಳಿದರು.

## ನಾಳೆ ನಗರದಲ್ಲಿ ವಿವಿಧ ಹುದ್ದೆಗಳ ನೇಮಕಾತಿಗೆ ನೇರ ಸಂದರ್ಶನ

ಚಾಮರಾಜನಗರ:- ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಚಾಮರಾಜನಗರದ ಯು.ಫ್ಲೈ, ಎಲ್.ಐ.ಸಿ ಆಫ್ ಇಂಡಿಯಾ, ಬಂಧನ್ ಬ್ಯಾಂಕ್ ಮತ್ತು ಜೆ.ಕೆ ಟಯರ್ ಸಂಸ್ಥೆಯ ಸಹಯೋಗದೊಂದಿಗೆ ವಿವಿಧ ಹುದ್ದೆಗಳ ನೇಮಕಕ್ಕಾಗಿ ನೇರ ಸಂದರ್ಶನವನ್ನು ಅಕ್ಟೋಬರ್ 16 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಏರ್ಪಡಿಸಲಾಗಿದೆ.

ಯು.ಫ್ಲೈ ಸಂಸ್ಥೆಯಲ್ಲಿ ಕ್ಯಾಬಿನ್ ಕ್ರ್ಯೂ ಹುದ್ದೆ, ಎಲ್.ಐ.ಸಿ ಆಫ್ ಇಂಡಿಯಾ ಸಂಸ್ಥೆಯಲ್ಲಿ ಎಲ್.ಐ.ಸಿ ಅಡ್ವೈಸರ್, ಬಂಧನ್ ಬ್ಯಾಂಕ್ ಸಂಸ್ಥೆಯಲ್ಲಿ ರಿಲೇಶನ್ ಶಿಪ್ ಆಫೀಸರ್, ರಿಲೇಶನ್ ಶಿಪ್ ಎಕ್ಸಿಕ್ಯೂಟಿವ್ ಮತ್ತು ಬ್ರಾಂಚ್ ಮ್ಯಾನೇಜರ್ ಹಾಗೂ ಜೆ. ಕೆ. ಟಯರ್ ಸಂಸ್ಥೆಯಲ್ಲಿ ಪ್ರೊಡಕ್ಷನ್, ಆಪರೇಟರ್, ಹೆಲ್ಪರ್, ಟೆಕ್ನಿಕಲ್ ಮತ್ತು ಸಪೋರ್ಟ್ ಸ್ಟಾಫ್ ಹುದ್ದೆಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಡಿಪ್ಲೋಮಾ ಮತ್ತು ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಸ್ವ-ವಿವರ (ಬಯೋ ಡೇಟಾ) ಮತ್ತು ಅಂಕಪಟ್ಟಿಗಳ ಮೂಲ ಹಾಗೂ ಜೆರಾಕ್ಸ್ ಪ್ರತಿಗಳೊಂದಿಗೆ ಹಾಜರಾಗಬೇಕು ದೂ.ಸಂ 08226-224430 ಸಂಪರ್ಕಿಸಿ ಮಾಹಿತಿ ಪಡೆಯಬಹುದು

## ದಸರಾ ಕ್ರೀಡಾಕೂಟ: ಪೂರ್ವಿಕಗೆ ಚಿನ್ನದ ಪದಕ

**ರಾಮನಗರ:** ಮೈಸೂರಿನ ಯುವರಾಜ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ರಾಜ್ಯಮಟ್ಟದ ದಸರಾ ಕ್ರೀಡಾಕೂಟ ಸಿಎಂ ಕಪ್ 2026ರ ಟೇಕ್ವಾಂಡೋ ಚಾಂಪಿಯನ್‌ಶಿಪ್‌ನಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾ ಟೇಕ್ವಾಂಡೋ ಸಂಸ್ಥೆಯ ಕ್ರೀಡಾಪಟು ಪೂರ್ವಿಕ ಎಂ. ಅವರು 50 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿ ಚಿನ್ನದ ಪದಕ ಗಳಿಸಿ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಈ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಕರ್ನಾಟಕ ಸರ್ಕಾರದ ಪೌರಾಡಳಿತ ಸಚಿವ ಎಚ್.ಸಿ. ಬಾಲಕೃಷ್ಣ ಅವರು, ಬೆಂಗಳೂರಿನ ತಮ್ಮ ನಿವಾಸದ ಕಚೇರಿಯಲ್ಲಿ ಕ್ರೀಡಾಪಟು ಪೂರ್ವಿಕ ಎಂ. ಅವರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, "ಪೂರ್ವಿಕ ಅವರು ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದಿರುವುದು ನಮ್ಮ ಜಿಲ್ಲೆಗೆ ಹೆಮ್ಮೆಯ ಹಾಗೂ ಸಂತೋಷದ ವಿಷಯವಾಗಿದೆ. ಇಂತಹ ಸಾಧನೆಗಳು ಇತರ ಹೆಣ್ಣುಮಕ್ಕಳಿಗೂ ಸ್ಫೂರ್ತಿಯಾಗಲಿ. ಕ್ರೀಡಾಪಟುಗಳು ಇನ್ನಷ್ಟು ಧೈರ್ಯ, ಆತ್ಮವಿಶ್ವಾಸ ಮತ್ತು ಪರಿಶ್ರಮದಿಂದ ತರಬೇತಿ ಪಡೆದು ಉನ್ನತ ಸಾಧನೆ ಮಾಡಬೇಕು" ಎಂದು ಹಾರೈಸಿದರು.

ಮುಂದಿನ ದಿನಗಳಲ್ಲಿ, ಅಂದರೆ 20-10-2026ರಂದು ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆಯಲಿರುವ ಎಸ್‌ಜಿಎಫ್‌ಐ ರಾಷ್ಟ್ರಮಟ್ಟದ ಟೇಕ್ವಾಂಡೋ ಸ್ಪರ್ಧೆಯಲ್ಲಿ ಪೂರ್ವಿಕ ಅವರು ಭಾಗವಹಿಸಲಿದ್ದು, ಅಲ್ಲಿ ಉತ್ತಮ ಪ್ರದರ್ಶನ ನೀಡಿ ಜಯಶಾಲಿಯಾಗಲಿ ಎಂದು ಸಚಿವರು



ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾ ಟೇಕ್ವಾಂಡೋ ಸಂಸ್ಥೆಯ ಅಧ್ಯಕ್ಷರಾದ ಕೃಷ್ಣಮೂರ್ತಿ ಹಾಗೂ ಸಂಸ್ಥೆಯ ಕಾರ್ಯದರ್ಶಿ ಮತ್ತು ತರಬೇತಿದಾರರಾದ ಗೋವಿಂದ ಅವರನ್ನು ಅಭಿನಂದಿಸಿದ ಸಚಿವರು, ಕ್ರೀಡಾಪಟುಗಳಿಗೆ ಉತ್ತಮ ತರಬೇತಿ ನೀಡಿ, ಅವರು ರಾಷ್ಟ್ರಮಟ್ಟ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುವಂತೆ ಪ್ರೋತ್ಸಾಹಿಸಬೇಕು ಎಂದು ತಿಳಿಸಿದರು. ಪೂರ್ವಿಕ ಅವರ ಈ ಸಾಧನೆಗೆ ಬೆಂಗಳೂರು ದಕ್ಷಿಣ ಜಿಲ್ಲಾ ಟೇಕ್ವಾಂಡೋ ಸಂಸ್ಥೆಯ ಪದಾಧಿಕಾರಿಗಳು, ತರಬೇತುದಾರರು ಹಾಗೂ ಕ್ರೀಡಾಭಿಮಾನಿಗಳು ಅಭಿನಂದನೆ ಸಲ್ಲಿಸಿದ್ದಾರೆ.

### ನ್ಯಾಯಾಧೀಶೆ ನೂರುನ್ನೀಸಾ

# ಮಾನಸಿಕ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ಬೇಡ

ಗುಂಡ್ಲುಪೇಟೆ: ದೈಹಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯವೂ ಮಹತ್ವದ್ದಾಗಿದ್ದು, ಮಾನಸಿಕ ಸಮಸ್ಯೆಗಳನ್ನು ನಿರ್ಲಕ್ಷಿಸದೆ ಆರಂಭಿಕ ಹಂತದಲ್ಲಿಯೇ ಸೂಕ್ತ ಚಿಕಿತ್ಸೆ ಹಾಗೂ ಸಮಾಲೋಚನೆ ಪಡೆಯಬೇಕು ಎಂದು ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶೆ ಹಾಗೂ ತಾಲ್ಲೂಕು ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ನೂರುನ್ನೀಸಾ ತಿಳಿಸಿದರು.

ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ತಾಲ್ಲೂಕು ಕಾನೂನು ಸೇವೆಗಳ ಪ್ರಾಧಿಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಸಾರ್ವಜನಿಕ ಆಸ್ಪತ್ರೆಯ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರನ್ನು ತಾರತಮ್ಯದಿಂದ ಕಾಣದೆ, ಗೌರವದಿಂದ ನಡೆದುಕೊಳ್ಳಬೇಕು. ಅವರಿಗೆ ಕುಟುಂಬದವರು ಹಾಗೂ ಸಮಾಜದವರು




ಪ್ರೀತಿ, ಸಹಕಾರ ಮತ್ತು ಬೆಂಬಲ ನೀಡಬೇಕು.

ಮಾನಸಿಕ ಆರೋಗ್ಯ ಕಾಯ್ದೆ-2017ರ ಅಡಿಯಲ್ಲಿ ಮಾನಸಿಕ ಸಮಸ್ಯೆ ಎದುರಿಸುತ್ತಿರುವವರ ಹಕ್ಕುಗಳನ್ನು ರಕ್ಷಿಸುವುದು ಹಾಗೂ ಅವರಿಗೆ ಸೂಕ್ತ ಚಿಕಿತ್ಸೆ ದೊರಕಿಸುವುದು ಅತ್ಯಂತ ಮುಖ್ಯವಾಗಿದೆ ಎಂದರು. ಜೀವನದಲ್ಲಿ ಎದುರಾಗುವ ಸವಾಲು ಮತ್ತು ಒತ್ತಡಗಳನ್ನು ಧೈರ್ಯದಿಂದ ಎದುರಿಸಬೇಕು. ಕೋಪವನ್ನು ನಿಯಂತ್ರಿಸಿ, ಸಕಾರಾತ್ಮಕ ಚಿಂತನೆ ಬೆಳೆಸಿಕೊಳ್ಳಬೇಕು. ಯೋಗ, ಧ್ಯಾನ ಮತ್ತು ಪ್ರಾರ್ಥನೆಯಂತಹ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದರ ಜತೆಗೆ, ಮಾನಸಿಕ ಒತ್ತಡವನ್ನು ನಿಭಾಯಿಸಲು ಸಾಧ್ಯವಾಗದಿದ್ದರೆ ತಜ್ಞರ ಸಲಹೆ ಪಡೆಯಲು ಹಿಂಜರಿಯಬಾರದು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಅಲೀಮ್ ಪಾಷಾ ಬಿ.ಆರ್. ಅವರು, ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಆರೋಗ್ಯದ ಮಹತ್ವವನ್ನು ವಿವರಿಸಿದರು.

ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಆರಂಭದಲ್ಲಿಯೇ ಗುರುತಿಸಿ ಸೂಕ್ತ ಚಿಕಿತ್ಸೆ ನೀಡುವ ಮೂಲಕ ಗಂಭೀರ ಪರಿಣಾಮಗಳನ್ನು ತಡೆಗಟ್ಟಬಹುದು. ಮದ್ಯಪಾನ, ತಂಬಾಕು ಹಾಗೂ ಮಾದಕ ವಸ್ತುಗಳ ವ್ಯಸನಗಳಿಂದ ದೂರವಿರಬೇಕು. ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ನೆರವು ಪಡೆಯಲು ಟೆಲಿ-ಮಾನಸ್ ಉಚಿತ ಸಹಾಯವಾಣಿ 14416 ಸಂಪರ್ಕಿಸಬಹುದು ಎಂದರು.

ಡಾ. ಮಂಜುನಾಥ್ ಮಾತನಾಡಿ, ಕೆಲಸದ ಒತ್ತಡ, ಕೌಟುಂಬಿಕ ಸಮಸ್ಯೆಗಳು ಹಾಗೂ ದೈನಂದಿನ ಜೀವನದ ಸವಾಲುಗಳು ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಇಂತಹ ಒತ್ತಡವನ್ನು ಕಡಿಮೆ ಮಾಡಿಕೊಳ್ಳಲು ನಿಯಮಿತ ವ್ಯಾಯಾಮ, ಧ್ಯಾನ, ವಿಶ್ರಾಂತಿ ಹಾಗೂ ಕುಟುಂಬದವರೊಂದಿಗೆ ಮುಕ್ತವಾಗಿ ಮಾತನಾಡುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಅಗತ್ಯವಿದ್ದಲ್ಲಿ ತಜ್ಞರ ಸಲಹೆ ಪಡೆಯಬೇಕು ಎಂದರು. ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

# ಮೇಲುಕೋಟೆಯಲ್ಲಿ ಜಂಬೂ ಸವಾರಿ ಮತ್ತು ದಸರಾ ಉತ್ಸವಕ್ಕೆ ಭರ್ಜರಿ ಸಿದ್ಧತೆ

## ಶಾಸಕ ದರ್ಶನ್ ಪುಟ್ಟಣ್ಣಯ್ಯ ಸಹಕಾರದೊಂದಿಗೆ ಹತ್ತು ದಿನಗಳ ವೈಭವ – ಕಾಡೇನಹಳ್ಳಿ ಸತೀಶ್



**ಮಂಡ್ಯ:** ಭೂಲೋಕದ ವೈಕುಂಠ ಎಂದು ಕರೆಯಲಾಗುವ ಶ್ರೀ ಕ್ಷೇತ್ರ ಮೇಲುಕೋಟೆಯಲ್ಲಿ ಸುಮಾರು ಒಂದು ಸಾವಿರ ವರ್ಷಗಳ ಇತಿಹಾಸವಿರುವ ಜಂಬೂ ಸವಾರಿ ಮತ್ತು ದಸರಾ ಹಾಗೂ ನವರಾತ್ರಿ ಉತ್ಸವಕ್ಕೆ ಭರ್ಜರಿ ಸಿದ್ಧತೆ ನಡೆದಿದೆ ಮತ್ತು ಈ ಬಾರಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಸೂಚನೆ ಹಾಗೂ ಜಿಲ್ಲಾ ಆಡಳಿತದ ಸಹಕಾರದೊಂದಿಗೆ ಉತ್ಸವವನ್ನು ದೊಡ್ಡಮಟ್ಟದಲ್ಲಿ ಆಚರಿಸಲು ತೀರ್ಮಾನಿಸಲಾಗಿದೆ ಎಂದು ಶ್ರೀ ಚೆಲುವನಾರಾಯಣ ಸ್ವಾಮಿ ಸಮೂಹ ದೇವಾಲಯಗಳ ವ್ಯವಸ್ಥಾಪನಾ ಸಮಿತಿಯ ಸದಸ್ಯ ಕಾಡೇನಹಳ್ಳಿ ಸತೀಶ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ನವರಾತ್ರಿಯ ಹತ್ತು ದಿನಗಳ ಕಾಲ ದೇವಸ್ಥಾನದಲ್ಲಿ ವಿಶೇಷ ಪೂಜೆ ಮತ್ತು ಉತ್ಸವಗಳು ಜರುಗಲಿವೆ. ಈಗಾಗಲೇ ದೇವಸ್ಥಾನದಲ್ಲಿ ಉತ್ತಮ ರೀತಿಯಲ್ಲಿ ವಿದ್ಯುತ್ ಅಲಂಕಾರವನ್ನು ಮಾಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

**ಸಾಂಸ್ಕೃತಿಕ ಕಾರ್ಯಕ್ರಮಗಳು:** ನಾಲ್ಕು ದಿನಗಳ ಕಾಲ ಅಂದರೆ ಅಕ್ಟೋಬರ್ 16, 17, 18 ಮತ್ತು 19 ರಂದು ಸಾಂಸ್ಕೃತಿಕ ವೈಭವದ ರೀತಿಯಲ್ಲಿ ದಸರಾವನ್ನು ಆಚರಿಸಲಾಗುತ್ತಿದ್ದು ವಿವಿಧ ಕಲಾತಂಡಗಳು ಭಾಗವಹಿಸಲಿವೆ ಎಂದು ಅವರು ತಿಳಿಸಿದರು.

ಅ.16 ರಂದು ಪ್ರೊ.ಕೃಷ್ಣೇಗೌಡ, ಹಾಸ್ಯ ಕಲಾವಿದರು ಹಾಗೂ ಮೈಸೂರು ಕಥೆಗಳು ಖ್ಯಾತಿಯ ಧರ್ಮೇಂದ್ರ ಕುಮಾರ್ ರವರ ಕಾರ್ಯಕ್ರಮ ಹಾಗೂ ಭರತನಾಟ್ಯ ಕಾರ್ಯಕ್ರಮ, ಅ.17 ರಂದು ಪಾಂಡವಪುರ ವಿಜಯ ಬಿ.ಎಡ್ ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಅ.18ರಂದು ವಿದ್ವಾನ್ ವಿಷ್ಣು ವೆಂಕಟೇಶ್ ತಂಡದವರಿಂದ ಮ್ಯಾಂಡಲಿನ್ ವಾದ್ಯ ಗೋಷ್ಠಿ ಅ. 19 ರಂದು ಖ್ಯಾತ ಹರಿಕಥೆ ಕಲಾವಿದ ಶಿವಾರ ಉಮೇಶ್ ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ಅವರು ತಿಳಿಸಿದರು.ಸ್ಥಳೀಯ ಜನರನ್ನು ದೇವಸ್ಥಾನದ ಬಳಿ ಸಂಪರ್ಕ ಮಾಡುವ ಉದ್ದೇಶದಿಂದ ರಂಗೋಲಿ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಹಾಗೂ ವೇಷಭೂಷಣ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಅವರು ಹೇಳಿದರು.

ಅಕ್ಟೋಬರ್ 21 ರಂದು ಮೂಲದೇವರಿಗೆ ಮತ್ತು ಉತ್ಸವ ಮೂರ್ತಿಗೆ ಮಹಾರಾಜರ ಅಲಂಕಾರವಿರುತ್ತದೆ, ಮೇಲುಕೋಟೆ ಚೆಲುವನಾರಾಯಣಸ್ವಾಮಿ ದೇವಸ್ಥಾನದಿಂದ ಸುಮಾರು 2 ಕಿ.ಮೀ ಜಂಬೂ ಸವಾರಿ ಉತ್ಸವ ನಡೆಯಲಿದೆ ಎಂದು ಅವರು ವಿವರಿಸಿದರು. ದೇವಸ್ಥಾನಕ್ಕೆ ಬರುವ ಕಲಾತಂಡಗಳಿಗೆ ಹಾಗೂ ಭಕ್ತರಿಗೆ ಉತ್ತಮ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಪರಮೇಶ್‌ಗೌಡ ಕೆ.ಸಿ, ಸದಸ್ಯರುಗಳಾದ ಪುಟ್ಟಸ್ವಾಮಿಗೌಡ.ಕೆ.ಹೆಚ್, ರಾಜು ಬಚ್ಚಿಕೊಪ್ಪಲು ಹಾಗೂ ವೆಂಕಟೇಶ್ ಅವರು ಉಪಸ್ಥಿತರಿದ್ದರು.

# ಅ.17 ರಂದು ಕಾವೇರಿ ಮಾತೆಗೆ ಪೂಜೆ ಮತ್ತು ಅನ್ನಸಂತರ್ಪಣೆ– ತಗ್ಗಹಳ್ಳಿ ವೆಂಕಟೇಶ್




**ಮಂಡ್ಯ:** ಮಂಡ್ಯ ಜಿಲ್ಲೆಯ ರೈತರ ಜೀವನಾಡಿ, ಪವಿತ್ರ ನದಿ ಕಾವೇರಿ ತೀರ್ಥೋದ್ಭವದ ಪ್ರಯುಕ್ತ ತಲಕಾವೇರಿಯಲ್ಲಿ ಕಾವೇರಿ ತೀರ್ಥೋದ್ಭವ ಪ್ರಯುಕ್ತ ಮಂಡ್ಯದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿರುವ ಕಾವೇರಿ ವನದಲ್ಲಿ ಮಧ್ಯಾಹ್ನ 12 ಗಂಟೆಗೆ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್ ವತಿಯಿಂದ ಪ್ರತಿವರ್ಷ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ವಿಚಾರಧಾರೆಯನ್ನು ಪ್ರಚಾರಪಡಿಸಬೇಕು ಮತ್ತು ಜನ್ಮದಿನಾಚರಣೆ, ಪುಣ್ಯಸ್ಮರಣೆ ಮಾಡಬೇಕು ಎಂಬ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಮಂಡ್ಯ ಜಿಲ್ಲೆಯು ಕಾವೇರಿ ನೀರು ಹಾಗೂ ಕೃಷ್ಣರಾಜಸಾಗರ ಜಲಾಶಯದ ಕಾರಣಕ್ಕೆ ಹಸಿರಾಗಿದೆ, ಕೊಡಗಿನಲ್ಲಿ ಜನ್ಮತಳೆದ ಕಾವೇರಿ ತಾಯಿಯನ್ನು ಮಂಡ್ಯದ ಸಮೃದ್ಧಿಯ ಪ್ರತೀಕವಾಗಿ ನೆನೆಯಬೇಕು, ಸ್ಮರಿಸಬೇಕು ಎನ್ನುವ ಉದ್ದೇಶದಿಂದ ಟ್ರಸ್ಟ್‌ನ ಪದಾಧಿಕಾರಿಗಳು ಈ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದಾರೆ ಎಂದು ಅವರು ಹೇಳಿದರು.

ಈ ಕಾರ್ಯಕ್ರಮಕ್ಕೆ ಆದಿಚುಂಚನಗಿರಿ ಮಠದ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಅವರು ದಿವ್ಯ ಸಾನಿಧ್ಯವನ್ನು ವಹಿಸಲಿದ್ದಾರೆ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಡ್ಯ ಕ್ಷೇತ್ರದ ಶಾಸಕರಾದ ರವಿಕುಮಾರ್ ಗಣಿಗ ಅವರು ವಹಿಸಲಿದ್ದಾರೆ, ಕಾರ್ಯಕ್ರಮದ ಉದ್ಘಾಟನೆಯನ್ನು ವಿಧಾನ ಪರಿಷತ್ ಸದಸ್ಯರಾದ ಕೆ.ವಿವೇಕಾನಂದ ಹಾಗೂ ಮಾಜಿ ಶಾಸಕ ಎಂ. ಶ್ರೀನಿವಾಸ್ ಅವರು ನೆರವೇರಿಸಲಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಈ ಕಾರ್ಯಕ್ರಮ ಕಾವೇರಿ ನೀರಾವರಿ ನಿಗಮದ ಸಹಕಾರದಲ್ಲಿ ನಡೆಯಲಿದೆ, ಸಮಸ್ತ ರೈತಬಾಂಧವರು ಹಾಗೂ ನಾಗರಿಕ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಅವರು ಕೋರಿದರು.

ಪತ್ರಿಕಾಗೋಷ್ಠಿಯಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್ ಕಾರ್ಯಾಧ್ಯಕ್ಷ ಸಾತನೂರು ಮಹೇಶ್, ಬಸವರಾಜು, ಜಗದೀಶ್, ದಕೋಹಳ್ಳಿ ಚಂದ್ರಶೇಖರ್ ಅವರು ಉಪಸ್ಥಿತರಿದ್ದರು.

# ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಪ್ರಾಚಾರ್ಯರಾಗಿ ಆಯ್ಕೆಯಾಗಲು ಇದು ಅತ್ಯುತ್ತಮ ಅವಕಾಶ: ಎಡಿಸಿ ಬಿ.ಸಿ. ಶಿವಾನಂದಮೂರ್ತಿ

**ಮಂಡ್ಯ:** ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಅರ್ಹ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.ಅಂತಹ ಅವಕಾಶ ಉಪನ್ಯಾಸಕರಿಗೆ ಒದಗಿ ಬಂದಿದ್ದು,ಈ ಪರೀಕ್ಷೆಯಲ್ಲಿ ಗೆದ್ದು ಪ್ರಾಚಾರ್ಯರಾಗಿ ಕೆಲಸ ಮಾಡಲು ಇದು ಅತ್ಯುತ್ತಮ ಅವಕಾಶವಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದ ಮೂರ್ತಿ ಅವರು ತಿಳಿಸಿದರು.

ಅವರು ಮಂಡ್ಯದಲ್ಲಿ ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ, ಜಿಲ್ಲಾ ಶಾಖೆ, ಮಂಡ್ಯ ವತಿಯಿಂದ ಸರ್ಕಾರಿ ಪದವಿ ಪೂರ್ವ ಕಾಲೇಜು, ಮಾಜಿ ಪುರಸಭೆ, ಮಂಡ್ಯದಲ್ಲಿ ಹಮ್ಮಿಕೊಂಡಿರುವ ಪ್ರಾಂಶುಪಾಲರ ಹುದ್ದೆಯ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕಾರ್ಯಾಗಾರದ ಉದ್ಘಾಟನೆ ಮತ್ತು ಪುಸ್ತಕ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಸರ್ಕಾರಿ ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯಗಳು ಸಾಕಷ್ಟಿದ್ದರೂ, ಅವುಗಳನ್ನು ಸಮರ್ಪಕವಾಗಿ ನಿರ್ವಹಿಸಿ ಕಾಪಾಡಿಕೊಳ್ಳುವುದು ಅತ್ಯಂತ ಮುಖ್ಯವಾಗಿದೆ, ಬೋಧಕರು ಹಾಗೂ ಪ್ರಾಚಾರ್ಯರು ಇವುಗಳ ನಿರ್ವಹಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಇಂದಿನ ಟ್ರೆಂಡ್‌ಗೆ ತಕ್ಕಂತೆ ವಿದ್ಯಾರ್ಥಿಗಳಿಗೆ ಮತ್ತು ಬೋಧಕ ವರ್ಗಕ್ಕೆ ಉತ್ತಮ ಅವಕಾಶಗಳು ದೊರೆಯುತ್ತಿದ್ದು, ಆ ನಿಟ್ಟಿನಲ್ಲಿ ಸರಿಯಾದ ಆಲೋಚನೆ ಮಾಡಿ ಸಿದ್ಧತೆ ನಡೆಸಬೇಕು, ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಕೇವಲ ಓದುವಿಕೆ ಮಾತ್ರವಲ್ಲದೆ, ವಿಷಯವನ್ನು ತಾರ್ಕಿಕವಾಗಿ ಆಲೋಚಿಸಿ ಮನನ ಮಾಡಿಕೊಳ್ಳುವ ಸಾಮರ್ಥ್ಯ ಅಗತ್ಯವಿರುತ್ತದೆ, ವಿವಿಧ ವಿಷಯಗಳ ಸೈನ್ಸ್, ಆರ್ಟ್ಸ್, ಕಾಮರ್ಸ್ ಇತ್ಯಾದಿ ಕುರಿತು ಸಂಪೂರ್ಣ ಜ್ಞಾನವನ್ನು ಹೊಂದುವುದು ಮುಖ್ಯವಾಗಿದೆ ಎಂದು ಅವರು ಹೇಳಿದರು.

ಉತ್ತಮ ಸಾಧನೆ ಮಾಡಿ, ಸರ್ಕಾರ ಮತ್ತು ಸಮಾಜದ ವಿಶ್ವಾಸವನ್ನು ಗಳಿಸಿ ಕೆಲಸ ಮಾಡುವವರಿಗೆ ಸಮಾಜದಲ್ಲಿ ವಿಶೇಷ ಮನ್ನಣೆ ದೊರೆಯುತ್ತದೆ ಎಂದು ಅವರು ತಿಳಿಸಿದರು.

**ಹೆಚ್ಚು ಜನ ಪ್ರಾಂಶುಪಾಲರ ಹುದ್ದೆಗೆ ಆಯ್ಕೆಯಾಗಬೇಕು:** ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಪ್ರಸನ್ನ ಕುಮಾರ್ ಮಾತನಾಡಿ ಉಪನ್ಯಾಸಕ ವೃತ್ತಿಯಿಂದ ಪ್ರಾಚಾರ್ಯರ ಹುದ್ದೆಗೆ 20 ವರ್ಷ ಅಥವಾ 25 ವರ್ಷಗಳ ಕಾಲ ಕನಿಷ್ಠ ಸೇವೆ ಸಲ್ಲಿಸಿದವರಿಗೆ ಪ್ರಭಾರ ಅವಕಾಶ ನೀಡಲಾಗುತ್ತಿತ್ತು. ಆದರೆ ಈಗ ಹತ್ತು ವರ್ಷ ಸೇವೆ ಸಲ್ಲಿಸಿದರೂ ಕೂಡ ಈ ಸಂದರ್ಭದಲ್ಲಿ ಅವಕಾಶ ಪಡೆದು ಪ್ರಾಚಾರ್ಯರಾಗುವ ಅವಕಾಶಗಳೂ ಇವೆ ಎಂದು ಅವರು ಹೇಳಿದರು. ಮಂಡ್ಯ ಜಿಲ್ಲೆಯ ಉಪನ್ಯಾಸಕರು ಕಾರ್ಯಾಗಾರದಲ್ಲಿ ಹೆಚ್ಚು ಸಕ್ರಿಯವಾಗಿ ಪಾಲ್ಗೊಂಡು ಹೆಚ್ಚು ಜನ ಪ್ರಾಂಶುಪಾಲರ ಹುದ್ದೆಗೆ ಆಯ್ಕೆಯಾಗಬೇಕು ಎಂಬುದು ಮುಖ್ಯ ಉದ್ದೇಶವಾಗಿದೆ, ಕೇವಲ ತರಬೇತಿ ಪಡೆಯುವುದಷ್ಟೇ ಅಲ್ಲದೆ, ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚೆ ಮಾಡಿ, ಯಾವುದೇ ಪ್ರಶ್ನೆಗಳು ಬಂದಾಗ ಹಿಂಜರಿಯದೆ ಒಡನಾಟ ಇಟ್ಟುಕೊಂಡು, ನಿಮ್ಮ ಸಂಶಯಗಳನ್ನು ಬಗೆಹರಿಸಿಕೊಂಡು ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು ಎಂದು ಅವರು ಕರೆ ನೀಡಿದರು.

ರಾಜ್ಯದಲ್ಲಿ ಪ್ರಾಚಾರ್ಯರ ಹುದ್ದೆಗಳು ಸಾಕಷ್ಟು ಖಾಲಿ ಇದ್ದು, ಮಂಡ್ಯ ಜಿಲ್ಲೆಯಲ್ಲಿ ಒಟ್ಟು 70 ಕಾಲೇಜುಗಳಿವೆ, ಇದರಲ್ಲಿ ಕೇವಲ 24 ರಿಂದ 25 ಕಾಲೇಜುಗಳಲ್ಲಿ ಮಾತ್ರ ಖಾಯಂ ಪ್ರಾಚಾರ್ಯರಿದ್ದಾರೆ ಎಂದು ಅವರು ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ. ರಾ. ಪ. ಪೂ. ಕಾ. ಉ. ಸಂಘ ಮಂಡ್ಯದ ಅಧ್ಯಕ್ಷರಾದ ಆರ್ ಎಂ ಚನ್ನಕೃಷ್ಣಯ್ಯ ಅವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಪ್ರಾಂಶುಪಾಲರು ಮಾಜಿ ಪುರಸಭೆ ಗುರುಲಿಂಗೇಗೌಡ, ಕಲ್ಲು ಕಟ್ಟಡ ಕಾಲೇಜಿನ ಪ್ರಾಂಶುಪಾಲ ಎಚ್ ಪಿ ತಮ್ಮೇಗೌಡ, ಪ್ರಾಂಶುಪಾಲರು ಹಾಗೂ ಪ್ರಧಾನ ಕಾರ್ಯದರ್ಶಿಗಳು ಕ.ರಾ.ಪ್ರಾ.ಸಂ.ಬೆಂ. ಹನುಮಂತಯ್ಯ ಅವರು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಲಾ.ರಾಘವೇಂದ್ರ ಬೆಂಗಳೂರು, ಗಣೇಶ್ ಎಟಿಐ ಮೈಸೂರು, ಶಂಕರ್ ಪ್ರಕೃತಿ ಮೈಸೂರು, ಚಂದ್ರಪ್ಪ ಖಜಾನೆ ಅಧಿಕಾರಿಗಳು ಬೆಂಗಳೂರು, ಹೇಮಾಚಂದ್ರ ಹುಣಸೂರು ಅವರು ಭಾಗವಹಿಸಿದ್ದರು. ಜಿಲ್ಲಾ ಉಪನ್ಯಾಸಕರ ಸಂಘ ಮಂಡ್ಯ ಜಿಲ್ಲೆ, ತಾಲ್ಲೂಕು ಪದಾಧಿಕಾರಿಗಳು ಉಪಸ್ಥಿತರಿದ್ದರು.



# ಒಬ್ಬರ ದೌರ್ಬಲ್ಯ!,,ಯಾರದೋ ದಾಳ,, ಇನ್ಯಾರದೋ ಬಲಿ,, ಮತ್ಯಾರದೋ ಕುತಂತ್ರ, ಇದು ಮುಗಿಯದ "ಪೋಲಿ"ಟಿಕ್ಸ್



ವೆಂಕಟೇಶ ಎಸ್. ಸಂಪ.
ಸಂಪಾದಕರು
ಸಂಪದ ಸಾಲು ಪತ್ರಿಕೆ
9448219347

ಹಲವು ವರ್ಷಗಳ ಹಿಂದೆ ಸಿಡಿ ರಾಜಕೀಯ ಜೋರಾಗಿತ್ತು...ಆಮೇಲೆ? ಪೆನ್ ಡ್ರೈವ್ ಗಲಾಟೆ ಆಯ್ತು.. ಯಾರಿದ್ದೋ ಹೆಸರು, ಯಾರಿದ್ದೋ ರಾಜಕಾರಣ,, ಯಾರದ್ದೋ ಹೋರಾಟ,, ಯಾರದ್ದೋ ವರದಿಗಾರಿಕೆ ಏನೇನೋ ಪರಿಣಾಮಗಳನ್ನು ನೋಡಿದ್ದೇವೆ.

ಯಾರು ತಪ್ಪಿತಸ್ಥರು.. ಯಾರಿಗೆ ಶಿಕ್ಷೆ ಆಯಿತು ಎಂಬ ಪ್ರಶ್ನೆಗೆ ಉತ್ತರ ಇನ್ನೂ ಸಿಕ್ಕಿಲ್ಲ..ಆದರೆ ಯಾರ್ಯಾರದೋ ಬದುಕು ಏನೇನೋ ಆಯಿತು ಅನ್ನೋದು ಸತ್ಯ.

ಅಕ್ರಮಗಳನ್ನು ಬಯಲಿಗೆಳೆಯಲು ಬಳಸುವ ಈ ಸ್ಟಿಂಗ್ ಆಪರೇಷನ್ ಇಂದು ಅಪ್ಪಟ ದಂಧೆಯಾಗಿದೆ ಎಂಬುದು ಇತ್ತೀಚಿನ ಆರೋಪ.

ಇಲ್ಲಿ ರಾಜಕಾರಣಿಗಳನ್ನು, ಹೋರಾಟಗಾರರನ್ನು, ಪತ್ರಕರ್ತರನ್ನೂ, ಅಧಿಕಾರಿಗಳನ್ನು ಸಂಶಯದ ದೃಷ್ಟಿಯಲ್ಲಿ ನೋಡುವಂತಾಗಿದೆ.ಯಾರು ಒಳ್ಳೆಯವರು, ಯಾರು ಕೆಟ್ಟವರು, ಯಾರನ್ನು ನಂಬಬಹುದು, ಯಾರನ್ನು ನಂಬಬಾರದು ಎಂಬುದೇ ಯಕ್ಷಪ್ರಶ್ನೆಯಾಗಿದೆ.

ಹಾಗಾದರೆ ಇತ್ತೀಚಿಗೆ ಕರ್ನಾಟಕದ ರಾಜಕಾರಣದಲ್ಲಿ ಏನಾಗುತ್ತಿದೆ?

**1. ಸ್ಟಿಂಗ್ ಆಪರೇಷನ್ ಎಂದರೇನು?**

ಸ್ಟಿಂಗ್ ಆಪರೇಷನ್ ಎಂದರೆ ರಹಸ್ಯವಾಗಿ ಮಾಹಿತಿ ಸಂಗ್ರಹಿಸಿ, ವ್ಯಕ್ತಿಯ ನಡೆ, ಮಾತು ಅಥವಾ ಕೃತ್ಯವನ್ನು ಧ್ವನಿ, ವಿಡಿಯೊ, ಛಾಯಾಚಿತ್ರಗಳ ಮೂಲಕ ದಾಖಲಿಸಿ ಬಹಿರಂಗಪಡಿಸುವ ಕಾರ್ಯಾಚರಣೆ.




ಭ್ರಷ್ಟಾಚಾರ, ಲಂಚದ ಬೇಡಿಕೆ, ಅಧಿಕಾರ ದುರುಪಯೋಗ ಅಥವಾ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ ಕೃತ್ಯಗಳನ್ನು ಬಯಲಿಗೆಳೆಯಲು ಇದನ್ನು ಬಳಸಬಹುದು. ಆದರೆ ಯಾರನ್ನಾದರೂ ಉದ್ದೇಶಪೂರ್ವಕವಾಗಿ ಬಲೆಗೆ ಬೀಳಿಸಲು, ಖಾಸಗಿ ಮಾಹಿತಿಯನ್ನು ದುರುಪಯೋಗಪಡಿಸಿಕೊಳ್ಳಲು ಅಥವಾ ರಾಜಕೀಯ ಒತ್ತಡ ಹೇರಲು ಇದೇ ವಿಧಾನವನ್ನು ಬಳಸಿದರೆ ಗಂಭೀರ ಪ್ರಶ್ನೆಗಳು ಉದ್ಭವಿಸುತ್ತವೆ.

ಹೀಗಾಗಿ, ರಹಸ್ಯವಾಗಿ ಚಿತ್ರೀಕರಿಸಲಾಗಿದೆ ಎಂಬ ಕಾರಣಕ್ಕೆ ಪ್ರತಿಯೊಂದು ವಿಡಿಯೊವೂ ಸತ್ಯದ ಅಂತಿಮ ಸಾಕ್ಷಿಯಾಗುವುದಿಲ್ಲ. ಅದರ ಮೂಲ, ಸಂದರ್ಭ, ಸಂಪಾದನೆ, ಧ್ವನಿಮುದ್ರಣದ ವಿಶ್ವಾಸಾರ್ಹತೆ ಮತ್ತು ಕಾನೂನುಬದ್ಧತೆಯನ್ನು ಪರಿಶೀಲಿಸಬೇಕಾಗುತ್ತದೆ.

**2.** ಕರ್ನಾಟಕದಲ್ಲಿ ಈಗ ನಡೆದಿರುವುದೇನು?

2026ರ ಅಕ್ಟೋಬರ್ 8ರಂದು ಪ್ರಕಟವಾದ ವರದಿಗಳ ಪ್ರಕಾರ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮ ವಿರುದ್ಧವೂ, ತಮ್ಮ ಸಂಪುಟದ ಸಚಿವರು ಮತ್ತು ಕೆಲವು ಅಧಿಕಾರಿಗಳ ವಿರುದ್ಧವೂ ಸ್ಟಿಂಗ್ ಆಪರೇಷನ್ ನಡೆಸುವ ಪ್ರಯತ್ನ ನಡೆದಿದೆ ಎಂದು ಆರೋಪಿಸಿದ್ದಾರೆ.

ತಮ್ಮ ಬಳಿ ಈ ಕಾರ್ಯಾಚರಣೆಯ ಹಿಂದಿರುವ ವ್ಯಕ್ತಿಗಳು, ಹಣಕಾಸು ನೆರವು ಮತ್ತು ಯೋಜನೆಯ ಬಗ್ಗೆ ಮಾಹಿತಿ ಹಾಗೂ ಛಾಯಾಚಿತ್ರಗಳಿವೆ ಎಂದು ಅವರು ಹೇಳಿದ್ದಾರೆ.







ಸಚಿವರು ಎಚ್ಚರಿಕೆಯಿಂದ ಇರಬೇಕು ಎಂಬ ಸಂದೇಶವನ್ನೂ ನೀಡಿದ್ದಾರೆ.

ಇದಾದ ಬಳಿಕ ಕಾಂಗ್ರೆಸ್ ಶಾಸಕ ರವಿಕುಮಾರ್ ಗಣಿಗ ಅವರು ಪೆನ್‌ಡ್ರೈವ್ ಪ್ರದರ್ಶಿಸಿ, ಈ ಕಾರ್ಯಾಚರಣೆಗೆ ಕೇಂದ್ರ ಸಚಿವರೊಬ್ಬರು ಮತ್ತು ಕರ್ನಾಟಕದ ಬಿಜೆಪಿ ನಾಯಕರೊಬ್ಬರು ಹಣಕಾಸು ನೆರವು ನೀಡಿದ್ದಾರೆ ಎನ್ನುವ ಆರೋಪಕ್ಕೆ ಸಂಬಂಧಿಸಿದ ಸಾಕ್ಷ್ಯ ತಮ್ಮ ಬಳಿ ಇರುವುದಾಗಿ ಹೇಳಿದ್ದಾರೆ. ಆದರೆ ಆರೋಪಿತ ವ್ಯಕ್ತಿಗಳ ಗುರುತು ಹಾಗೂ ಪೆನ್‌ಡ್ರೈವ್‌ನಲ್ಲಿರುವ ಮಾಹಿತಿಯ ಸಂಪೂರ್ಣ ವಿವರಗಳು ಸಾರ್ವಜನಿಕವಾಗಿ ದೃಢಪಟ್ಟಿಲ್ಲ.

ಇಲ್ಲಿ ಮುಖ್ಯವಾದ ಪ್ರಶ್ನೆ ಏನೆಂದರೆ, ಸಾಕ್ಷ್ಯವಿದೆ ಎಂದು ಹೇಳುವುದು ಒಂದು ಸಂಗತಿ; ಆ ಸಾಕ್ಷ್ಯವನ್ನು ಸ್ವತಂತ್ರ ತನಿಖೆಯ ಮೂಲಕ ಪರಿಶೀಲಿಸಿ ಆರೋಪವನ್ನು ಸಾಬೀತುಪಡಿಸುವುದು ಮತ್ತೊಂದು ಸಂಗತಿ.

**3. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರವೇನು?**

ಈ ವಿವಾದದ ಅತ್ಯಂತ ಸೂಕ್ಷ್ಮ ಭಾಗವೇ ಇದು.

ಕೇಂದ್ರ ಸಚಿವ ಹಾಗೂ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಅಕ್ಟೋಬರ್ 7ರಂದು ಗಂಭೀರ ಆರೋಪವೊಂದನ್ನು ಮಾಡಿದ್ದಾರೆ. ಅವರ ಹೇಳಿಕೆಯ ಪ್ರಕಾರ, ಡಿ.ಕೆ. ಶಿವಕುಮಾರ್ ಅವರು ಹಿಂದೆ ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿಕೊಂಡು ಸ್ಟಿಂಗ್ ಆಪರೇಷನ್ ನಡೆಸಿದ್ದು, ಅದರ ಮಾಹಿತಿಯನ್ನು ಕಾಂಗ್ರೆಸ್ ಹೈಕಮಾಂಡ್‌ಗೆ ತಲುಪಿಸಿ ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಒತ್ತಡ ಹೇರಲಾಗಿದೆ.

ಸಿದ್ದರಾಮಯ್ಯ ಅವರನ್ನು ಸಂಪುಟ ವಿಸ್ತರಣೆಯ ಚರ್ಚೆಯ ನೆಪದಲ್ಲಿ ದೆಹಲಿಗೆ ಕರೆಸಿ, ಈ ಮಾಹಿತಿಯ ಮೂಲಕ ಒತ್ತಡ ಹೇರಲಾಯಿತು ಎಂಬುದೂ ಕುಮಾರಸ್ವಾಮಿ ಅವರ ಆರೋಪದ ಭಾಗವಾಗಿದೆ. ಆದರೆ ಈ ಹೇಳಿಕೆಗಳಿಗೆ ಸಂಬಂಧಿಸಿದಂತೆ ಅವರು ಸಾರ್ವಜನಿಕವಾಗಿ ನಿರ್ಣಾಯಕ ಸಾಕ್ಷ್ಯಗಳನ್ನು ಮಂಡಿಸಿರುವುದು ವರದಿಗಳಲ್ಲಿ ಕಂಡುಬಂದಿಲ್ಲ. ಕಾಂಗ್ರೆಸ್‌ನ ರಮೇಶ್ ಬಾಬು ಈ ಆರೋಪಗಳನ್ನು ರಾಜಕೀಯ ಪ್ರೇರಿತ ಮತ್ತು ಆಧಾರರಹಿತ ಎಂದು ತಳ್ಳಿಹಾಕಿದ್ದಾರೆ.

ಅಕ್ಟೋಬರ್ 12ರಂದು ಸಿದ್ದರಾಮಯ್ಯ ಅವರು ಈ ವಿವಾದದ ಕುರಿತು ಪ್ರತಿಕ್ರಿಯಿಸಿ, ಸ್ಟಿಂಗ್ ಆಪರೇಷನ್ ನಡೆಯುತ್ತಿರುವ ಬಗ್ಗೆ ತಮಗೆ ಅರಿವಿದೆ ಮತ್ತು ಅದರ ಹಿಂದೆ ಇರುವವರನ್ನು ಗುರುತಿಸುವುದು ಮುಖ್ಯ ಎಂದು ಹೇಳಿದ್ದಾರೆ. ಈ ಪ್ರತಿಕ್ರಿಯೆ ಪ್ರಕರಣದ ಬಗ್ಗೆ ಅವರಿಗೂ ಮಾಹಿತಿ ಇದೆ ಎಂಬುದನ್ನು ಸೂಚಿಸುತ್ತದೆ; ಆದರೆ ಅದರಿಂದಲೇ ಅವರು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು ಅಥವಾ ಅದಕ್ಕೆ ಬಲಿಯಾಗಿದ್ದರು ಎಂಬುದು ಸಾಬೀತಾಗುವುದಿಲ್ಲ.

**ಹಾಗಾದರೆ ಸಿದ್ದರಾಮಯ್ಯ ಅವರ ಪಾತ್ರವೇನು?**

ಸದ್ಯದ ಸಾರ್ವಜನಿಕ ಮಾಹಿತಿಯ ಆಧಾರದಲ್ಲಿ ಮೂರು ಸಾಧ್ಯತೆಗಳನ್ನು ಪ್ರತ್ಯೇಕವಾಗಿ ನೋಡಬೇಕು:

* ಅವರು ಕಾರ್ಯಾಚರಣೆಯ ಬಗ್ಗೆ ಮಾಹಿತಿ ಹೊಂದಿದ್ದ ವ್ಯಕ್ತಿಯಾಗಿರಬಹುದು.
* ಅವರ ವಿರುದ್ಧ ಕಾರ್ಯಾಚರಣೆ ನಡೆದಿದೆ ಎಂಬುದು ಕುಮಾರಸ್ವಾಮಿ ಅವರ ಆರೋಪವಾಗಿದೆ.
* ಅವರು ಸ್ವತಃ ಕಾರ್ಯಾಚರಣೆಯನ್ನು ರೂಪಿಸಿದ್ದರು ಅಥವಾ ಅದರಲ್ಲಿ ಭಾಗಿಯಾಗಿದ್ದರು ಎಂಬುದಕ್ಕೆ ಸಾರ್ವಜನಿಕವಾಗಿ ದೃಢಪಟ್ಟ ಸಾಕ್ಷ್ಯ ಲಭ್ಯವಿಲ್ಲ.

ಈ ಮೂರರಲ್ಲಿ ಯಾವುದನ್ನು ಸತ್ಯವೆಂದು ನಿರ್ಧರಿಸಬೇಕಾದರೂ ದಾಖಲೆಗಳು, ಸಂಬಂಧಪಟ್ಟವರ ಹೇಳಿಕೆಗಳು ಮತ್ತು ಸ್ವತಂತ್ರ ತನಿಖೆಯ ಫಲಿತಾಂಶ ಅಗತ್ಯ.

**4. ಡಿ.ಕೆ. ಶಿವಕುಮಾರ್ ಅವರ ಪಾತ್ರದ ಸುತ್ತಲಿನ ಪ್ರಶ್ನೆಗಳು**

ಈ ವಿವಾದದಲ್ಲಿ ಶಿವಕುಮಾರ್ ಅವರ ಪಾತ್ರದ ಕುರಿತು ಎರಡು ವಿಭಿನ್ನ ಚಿತ್ರಣಗಳಿವೆ.

ಒಂದೆಡೆ, ಸಚಿವರು ಮತ್ತು ಅಧಿಕಾರಿಗಳನ್ನು ಸಿಲುಕಿಸಲು ಹೊರಗಿನ ಶಕ್ತಿಗಳು ಪ್ರಯತ್ನಿಸುತ್ತಿವೆ, ತಮ್ಮ ಬಳಿ ಸಾಕ್ಷ್ಯವಿದೆ ಎಂಬುದು ಅವರ ನಿಲುವು. ಮತ್ತೊಂದೆಡೆ, ಕುಮಾರಸ್ವಾಮಿ ಅವರು ಶಿವಕುಮಾರ್ ಅವರೇ ಈ ರೀತಿಯ ಕಾರ್ಯಾಚರಣೆಯನ್ನು ನಡೆಸಿ ರಾಜಕೀಯ ಒತ್ತಡ ಸೃಷ್ಟಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ಅಕ್ಟೋಬರ್ 11ರಂದು ಕುಮಾರಸ್ವಾಮಿ ಅವರು ಸ್ಟಿಂಗ್ ಆಪರೇಷನ್‌ಗೆ ಸಂಬಂಧಿಸಿದ ವ್ಯಕ್ತಿಯೊಬ್ಬರೊಂದಿಗೆ ಶಿವಕುಮಾರ್ ಅವರು ಬೆಂಗಳೂರಿನ ಪಂಚತಾರಾ ಹೋಟೆಲ್‌ನಲ್ಲಿ ಸುದೀರ್ಘವಾಗಿ ಭೇಟಿಯಾಗಿದ್ದರು ಎಂದು ಆರೋಪಿಸಿ, ಆ ವ್ಯಕ್ತಿ ಯಾರು ಎಂಬುದನ್ನು ಬಹಿರಂಗಪಡಿಸುವಂತೆ ಒತ್ತಾಯಿಸಿದ್ದಾರೆ. ಅಲ್ಲದೆ, ಈ ವಿಷಯದ ಕುರಿತು ಸರ್ಕಾರ ಏಕೆ ತನಿಖೆ ಆರಂಭಿಸಿಲ್ಲ ಎಂದು ಪ್ರಶ್ನಿಸಿದ್ದಾರೆ.

ಆದರೆ ಒಂದು ಭೇಟಿಯ ಆರೋಪ ಮಾತ್ರದಿಂದಲೇ ಕಾನೂನುಬಾಹಿರ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾರೆ ಎಂದು ತೀರ್ಮಾನಿಸಲಾಗುವುದಿಲ್ಲ. ಅದೇ ರೀತಿ, ಸಾಕ್ಷ್ಯವಿದೆ ಎಂದು ಹೇಳಿದ ಮಾತ್ರಕ್ಕೆ ಆರೋಪಕ್ಕೆ ಅಂತಿಮ ಮುದ್ರೆ ಬೀಳುವುದಿಲ್ಲ.

ಇಲ್ಲಿ ಸಾರ್ವಜನಿಕರು ಕೇಳಬೇಕಾದ ಪ್ರಶ್ನೆಗಳು ಸ್ಪಷ್ಟವಾಗಿವೆ: ಶಿವಕುಮಾರ್ ಅವರ ಬಳಿ ಯಾವ ಸಾಕ್ಷ್ಯವಿದೆ? ಅದನ್ನು ತನಿಖಾ ಸಂಸ್ಥೆಗೆ ನೀಡಲಾಗಿದೆಯೇ? ಕಾರ್ಯಾಚರಣೆಗೆ ಹಣ ನೀಡಿದವರು ಯಾರು ಎಂಬುದು ಪತ್ತೆಯಾಗಿದೆಯೇ? ಈ ಪ್ರಶ್ನೆಗಳಿಗೆ ದಾಖಲೆ ಆಧಾರಿತ ಉತ್ತರ ಸಿಗಬೇಕು.

**5\. ಐವರು ಸಚಿವರು, ಹತ್ತು ಮಂದಿ ಗುರಿ?ಏನು ಸತ್ಯ?**

ವರದಿಗಳಲ್ಲಿ ಎರಡು ಸಂಖ್ಯೆಗಳು ಉಲ್ಲೇಖವಾಗಿವೆ. ಮುಖ್ಯಮಂತ್ರಿ ಅವರು ತಮ್ಮ ಸಂಪುಟದ ಐವರು ಸಹೋದ್ಯೋಗಿಗಳನ್ನು ಗುರಿಯಾಗಿಸುವ ಸಾಧ್ಯತೆಯ ಬಗ್ಗೆ ಎಚ್ಚರಿಕೆ ನೀಡಿದ್ದರು ಎಂಬ ವರದಿಗಳಿವೆ. ಮತ್ತೊಂದೆಡೆ, ಕಾಂಗ್ರೆಸ್ ಶಾಸಕ ಪಿ. ರವಿಕುಮಾರ್ ಗೌಡ ಅವರು ಹತ್ತು ಪ್ರಮುಖ ಸಚಿವರು ಮತ್ತು ಹಿರಿಯ ಅಧಿಕಾರಿಗಳನ್ನು ಗುರಿಯಾಗಿಸಲು ಖಾಸಗಿ ಏಜೆನ್ಸಿಗಳನ್ನು ಬಳಸಲಾಗಿದೆ ಎಂದು ಆರೋಪಿಸಿದ್ದಾರೆ.

ಈ ಸಂಖ್ಯೆಗಳ ವ್ಯತ್ಯಾಸವೇ ಇನ್ನಷ್ಟು ಸ್ಪಷ್ಟೀಕರಣದ ಅಗತ್ಯವನ್ನು ತೋರಿಸುತ್ತದೆ. ಐವರು ಸಚಿವರ ವಿರುದ್ಧ ಕಾರ್ಯಾಚರಣೆ ನಡೆದಿದೆಯೇ? ಹತ್ತು ಮಂದಿ ಗುರಿಯಾಗಿದ್ದರೇ? ಇದು ಒಂದೇ ಕಾರ್ಯಾಚರಣೆಯ ಭಾಗವೇ ಅಥವಾ ಬೇರೆಬೇರೆ ಮಾಹಿತಿಗಳೇ? ಲಭ್ಯವಿರುವ ವರದಿಗಳಿಂದ ಇವೆಲ್ಲವನ್ನೂ ಖಚಿತವಾಗಿ ನಿರ್ಧರಿಸಲು ಸಾಧ್ಯವಾಗಿಲ್ಲ.

ಪೆನ್‌ಡ್ರೈವ್‌ನಲ್ಲಿ ದಾಖಲೆಗಳಿವೆ ಎಂಬ ಹೇಳಿಕೆ ಕೇಳಿಬಂದಿದೆ. ಆದರೆ ಅದರಲ್ಲಿರುವ ವಿಡಿಯೊ, ಧ್ವನಿಮುದ್ರಣ, ಛಾಯಾಚಿತ್ರಗಳು ಅಥವಾ ಇತರ ಮಾಹಿತಿಯ ಸತ್ಯಾಸತ್ಯತೆ ಸಾರ್ವಜನಿಕವಾಗಿ ಪರಿಶೀಲನೆಯಾಗದೆ ಅವುಗಳನ್ನು ನಿರ್ಣಾಯಕ ಸಾಕ್ಷ್ಯವೆಂದು ಪರಿಗಣಿಸಲಾಗದು.

**6. ಇದು ರಾಜಕೀಯ ಅಧಿಕಾರದ ಸಂಘರ್ಷವೇ?:** ಕರ್ನಾಟಕದ ರಾಜಕೀಯದಲ್ಲಿ ರಹಸ್ಯ ವಿಡಿಯೊಗಳು, ಪೆನ್‌ಡ್ರೈವ್‌ಗಳು, ಆಡಿಯೊ ದಾಖಲೆಗಳು ಮತ್ತು ಪರಸ್ಪರ ಆರೋಪಗಳು ಹಿಂದೆಯೂ ವಿವಾದಗಳಿಗೆ ಕಾರಣವಾಗಿವೆ. ಇಂತಹ ಪ್ರಕರಣಗಳಲ್ಲಿ ಆರೋಪ ಹೊರಬಿದ್ದ ಕ್ಷಣದಿಂದಲೇ ರಾಜಕೀಯ ಹಾನಿ ಸಂಭವಿಸಬಹುದು; ಆದರೆ ತನಿಖೆಯ ಫಲಿತಾಂಶ ಬರಲು ಬಹಳ ಸಮಯ ಹಿಡಿಯಬಹುದು.

ಈ ಪ್ರಕರಣದಲ್ಲಿಯೂ ಮೂರು ಆಯಾಮಗಳನ್ನು ಗಮನಿಸಬಹುದು.

ಮೊದಲನೆಯದು?ಪಕ್ಷದೊಳಗಿನ ಅಧಿಕಾರದ ಸಮೀಕರಣ: ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರ ನಡುವಿನ ನಾಯಕತ್ವದ ಸಂಬಂಧದ ಬಗ್ಗೆ ರಾಜಕೀಯ ವಲಯದಲ್ಲಿ ಹಿಂದಿನಿಂದಲೂ ಚರ್ಚೆಗಳಿವೆ. ಆದರೆ ಈ ವಿವಾದವೇ ನಾಯಕತ್ವ ಬದಲಾವಣೆಗೆ ಕಾರಣವಾಯಿತು ಎಂದು ಸಾಬೀತುಪಡಿಸಲು ನಿರ್ದಿಷ್ಟ ಸಾಕ್ಷ್ಯ ಬೇಕು.

ಎರಡನೆಯದು?ವಿರೋಧ ಪಕ್ಷಗಳ ರಾಜಕೀಯ: ಕುಮಾರಸ್ವಾಮಿ ಅವರು ತನಿಖೆಗೆ ಒತ್ತಾಯಿಸುತ್ತಿದ್ದಾರೆ. ಸರ್ಕಾರದ ಹೇಳಿಕೆಗಳಿಗಿಂತ ಸ್ಪಷ್ಟ ದಾಖಲೆಗಳನ್ನು ಮುಂದಿಡಬೇಕು ಎಂಬ ಅವರ ಪ್ರಶ್ನೆಗೆ ಸಾರ್ವಜನಿಕ ಮಹತ್ವವಿದೆ. ಅದೇ ಸಮಯದಲ್ಲಿ ಅವರ ಆರೋಪಗಳನ್ನೂ ಪರಿಶೀಲನೆಯಿಲ್ಲದೆ ಸತ್ಯವೆಂದು ಸ್ವೀಕರಿಸಬಾರದು.

ಮೂರನೆಯದು?ಆಡಳಿತದ ವಿಶ್ವಾಸಾರ್ಹತೆ: ಸಚಿವರು ಮತ್ತು ಹಿರಿಯ ಅಧಿಕಾರಿಗಳು ರಹಸ್ಯ ಕಾರ್ಯಾಚರಣೆಗಳ ಭೀತಿಯಲ್ಲಿದ್ದಾರೆ ಎನ್ನುವ ಸ್ಥಿತಿ ನಿಜವಾಗಿದ್ದರೆ, ಆಡಳಿತದ ಕಾರ್ಯವೈಖರಿ ಹಾಗೂ ಸಾರ್ವಜನಿಕ ವಿಶ್ವಾಸದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಆದರೆ ಈ ಭೀತಿಯ ಹಿಂದೆ ನಿಜವಾದ ಸಂಚು ಇದೆಯೇ ಎಂಬುದನ್ನು ತನಿಖೆಯೇ ನಿರ್ಧರಿಸಬೇಕು.

**7\. ತನಿಖೆ ಹೇಗಿರಬೇಕು?**

ಈ ವಿವಾದಕ್ಕೆ ರಾಜಕೀಯ ಹೇಳಿಕೆಗಳೇ ಅಂತಿಮ ಉತ್ತರವಾಗಬಾರದು. ವಿಶ್ವಾಸಾರ್ಹ ತನಿಖೆಗೆ ಕನಿಷ್ಠ ಈ ಕ್ರಮಗಳು ಅಗತ್ಯ:

* ಮುಖ್ಯಮಂತ್ರಿ ಮತ್ತು ಶಾಸಕರು ಉಲ್ಲೇಖಿಸಿರುವ ಪೆನ್‌ಡ್ರೈವ್‌ಗಳು, ಛಾಯಾಚಿತ್ರಗಳು ಹಾಗೂ ಇತರ ದಾಖಲೆಗಳನ್ನು ಅಧಿಕೃತವಾಗಿ ಸ್ವೀಕರಿಸಿ ಪರಿಶೀಲಿಸಬೇಕು.
* ಡಿಜಿಟಲ್ ಸಾಕ್ಷ್ಯಗಳ ಮೂಲ, ಅವುಗಳ ಸಂಪಾದನೆ ನಡೆದಿದೆಯೇ ಮತ್ತು ದಾಖಲೆಗಳ ಸಮಗ್ರತೆ ಉಳಿದಿದೆಯೇ ಎಂಬುದನ್ನು ತಾಂತ್ರಿಕವಾಗಿ ದೃಢೀಕರಿಸಬೇಕು.
* ಕಾರ್ಯಾಚರಣೆಗೆ ಹಣಕಾಸು ನೆರವು ನೀಡಿದವರು ಯಾರು, ಖಾಸಗಿ ಏಜೆನ್ಸಿಗಳು ಭಾಗಿಯಾಗಿದ್ದವೆಯೇ ಎಂಬುದನ್ನು ದಾಖಲೆಗಳ ಆಧಾರದಲ್ಲಿ ತನಿಖೆ ಮಾಡಬೇಕು.
* ಸಿದ್ದರಾಮಯ್ಯ, ಶಿವಕುಮಾರ್ ಸೇರಿದಂತೆ ಸಂಬಂಧಪಟ್ಟ ಎಲ್ಲರ ಹೇಳಿಕೆಗಳನ್ನು ಪಕ್ಷಪಾತವಿಲ್ಲದೆ ದಾಖಲಿಸಬೇಕು.
* ತನಿಖೆಯ ಪ್ರಗತಿ ಮತ್ತು ಅದರ ಫಲಿತಾಂಶವನ್ನು ಕಾನೂನು ಅನುಮತಿಸುವ ಮಿತಿಯಲ್ಲಿ ಸಾರ್ವಜನಿಕರಿಗೆ ತಿಳಿಸಬೇಕು.

ಸಾಕ್ಷ್ಯ ನಾಶವಾಗುವ ಅಥವಾ ದುರುಪಯೋಗವಾಗುವ ಸಾಧ್ಯತೆಗಳನ್ನು ತಡೆಯುವ ಜೊತೆಗೆ, ಆರೋಪ ಎದುರಿಸುತ್ತಿರುವ ವ್ಯಕ್ತಿಗಳ ಹಕ್ಕುಗಳನ್ನೂ ರಕ್ಷಿಸಬೇಕು.

**ಕೊನೆಯ ಮಾತು: ಸತ್ಯಕ್ಕೆ ಪೆನ್‌ಡ್ರೈವ್ ಸಾಕಾಗುವುದಿಲ್ಲ, ಪಾರದರ್ಶಕ ತನಿಖೆ ಬೇಕು!**

ಕರ್ನಾಟಕದ ಈ ಸ್ಟಿಂಗ್ ಆಪರೇಷನ್ ವಿವಾದದಲ್ಲಿ ಈಗಾಗಲೇ ಆರೋಪಗಳಿವೆ, ರಾಜಕೀಯ ಪ್ರತಿಕ್ರಿಯೆಗಳಿವೆ, ಪೆನ್‌ಡ್ರೈವ್ ಪ್ರದರ್ಶನದ ಸುದ್ದಿಯಿದೆ ಮತ್ತು ತನಿಖೆಗೆ ಒತ್ತಾಯವೂ ಇದೆ. ಆದರೆ ಆರೋಪಗಳ ಹಿಂದೆ ಇರುವ ಸಂಪೂರ್ಣ ಸತ್ಯ ಇನ್ನೂ ಸಾರ್ವಜನಿಕವಾಗಿ ಸ್ಥಾಪನೆಯಾಗಿಲ್ಲ.

ಸಿದ್ದರಾಮಯ್ಯ ಅವರ ಪಾತ್ರದ ಕುರಿತು ಕೇಳಲಾಗುತ್ತಿರುವ ಪ್ರಶ್ನೆಗಳಿಗೆ ಅವರ ಹೇಳಿಕೆಯಷ್ಟೇ ಅಲ್ಲ, ಸಂಬಂಧಪಟ್ಟ ದಾಖಲೆಗಳೂ ಉತ್ತರ ನೀಡಬೇಕು. ಶಿವಕುಮಾರ್ ಅವರು ತಮ್ಮ ಬಳಿ ಇದೆ ಎನ್ನುವ ಸಾಕ್ಷ್ಯವನ್ನು ಸೂಕ್ತ ತನಿಖಾ ಸಂಸ್ಥೆಗೆ ಸಲ್ಲಿಸಿ ಅದರ ಸತ್ಯಾಸತ್ಯತೆ ಪರಿಶೀಲನೆಗೆ ಅವಕಾಶ ಮಾಡಿಕೊಡಬೇಕು. ವಿರೋಧ ಪಕ್ಷಗಳ ಆರೋಪಗಳನ್ನೂ ಇದೇ ಮಾನದಂಡದಲ್ಲಿ ಪರೀಕ್ಷಿಸಬೇಕು.

ರಾಜಕಾರಣದಲ್ಲಿ ರಹಸ್ಯ ದಾಖಲೆಗಳು ಆಯುಧವಾಗಬಹುದು; ಆದರೆ ಪ್ರಜಾಪ್ರಭುತ್ವದಲ್ಲಿ ಸತ್ಯವೇ ಅಂತಿಮ ತೀರ್ಪುಗಾರನಾಗಬೇಕು.

ಸಚಿವರು ತಪ್ಪಿತಸ್ಥರಾಗಿದ್ದರೆ ಕಾನೂನು ಕ್ರಮ ಕೈಗೊಳ್ಳಬೇಕು. ಅವರನ್ನು ಉದ್ದೇಶಪೂರ್ವಕವಾಗಿ ಸಿಲುಕಿಸಲು ಸಂಚು ನಡೆದಿದ್ದರೆ ಸಂಚುಕೋರರ ವಿರುದ್ಧವೂ ಕ್ರಮವಾಗಬೇಕು. ಯಾರೇ ಆಗಿರಲಿ, ಯಾವ ಪಕ್ಷದವರೇ ಆಗಿರಲಿ?ಸಾಕ್ಷ್ಯವಿಲ್ಲದೆ ಅಪರಾಧಿ ಎಂದು ಘೋಷಿಸಬಾರದು; ಸಾಕ್ಷ್ಯವಿದ್ದರೆ ಪ್ರಭಾವಕ್ಕೆ ಮಣಿದು ತನಿಖೆಯನ್ನು ನಿಲ್ಲಿಸಬಾರದು.

ಇದೆಲ್ಲದರ ನಡುವೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತನ್ನ ವಿರುದ್ಧದ ಎನ್ನಲಾದ ವಿಡಿಯೋ ಬಿಡುಗಡೆ ಮಾಡದಂತೆ ಬಹುತೇಕ ಮಾಧ್ಯಮಗಳ ವಿರುದ್ಧ ತಡೆಯಾಜ್ಞೆ ತಂದಿದ್ದು, ಈ ವಯಸ್ಸಿನಲ್ಲಿ ಹೀಗೆಲ್ಲಾ ಆಗಿದೆಯಾ? ತಪ್ಪು ಮಾಡದ ಮೇಲೆ ತಡೆಯಾಜ್ಞೆ ಯಾಕೆ?

ಮೌಲ್ಯಯುತ ರಾಜಕಾರಣಿ,ಸಮಾಜವಾದಿ ಅಂತ ಬಿಂಬಿತ ಆದವರ ಕತೆಯೂ ಹೀಗೆಯೇ? ಎಂದೆಲ್ಲಾ ಜನ ಮಾತಾಡುವುದು ನೋಡಬಹುದು, 2011 ರ ವಿಡಿಯೋ ಇಲ್ಲಿಯವರೆಗೆ ಇಟ್ಟುಕೊಂಡು ಬಂದಿದ್ದು ಯಾರು? ಇಷ್ಟು ವರ್ಷ ಎಷ್ಟೆಲ್ಲಾ ಬ್ಲ್ಯಾಕ್ಮೇಲ್ ಆಗಿರಬಹುದು?

ಈ ಘಟನೆ ಸತ್ಯವಾ!? ಇಷ್ಟು ವರ್ಷ ಏನು ಮಾಡುತ್ತಿದ್ದರು? ಹೀಗೆ ಪ್ರಶ್ನೆಗಳೇ ಮೂಡುತ್ತಿವೆ.

ಕರ್ನಾಟಕದ ಜನರಿಗೆ ಬೇಕಿರುವುದು ಮತ್ತೊಂದು ರಾಜಕೀಯ ಆರೋಪ?ಪ್ರತ್ಯಾರೋಪದ ಸರಣಿ ಅಲ್ಲ. ಏನಾಯಿತು, ಯಾರು ಮಾಡಿದರು, ಏಕೆ ಮಾಡಿದರು ಮತ್ತು ಅದರ ಹಿಂದೆ ಯಾವ ಸಾಕ್ಷ್ಯವಿದೆ ಎಂಬ ಪ್ರಶ್ನೆಗಳಿಗೆ ಉತ್ತರ ನೀಡುವ ನಿಷ್ಪಕ್ಷಪಾತ ತನಿಖೆ. ಅದೇ ಈ ವಿವಾದಕ್ಕೆ ನ್ಯಾಯಯುತ ಅಂತ್ಯ ತರುವ ದಾರಿ.

ಯಾವುದೂ ಹಿಟ್ ಎಂಡ್ ರನ್ ಆಗದೇ ಇರಲಿ,
ತಪ್ಪುಗಳು ಜರುಗಿದ್ದರೆ ಅದಕ್ಕೆ ಶಿಕ್ಷೆಯಾಗಲಿ!
ಬ್ಲ್ಯಾಕ್ಮೇಲ್ ತಂತ್ರವಾಗಿದ್ದರೆ ಅದಕ್ಕೂ ಶಿಕ್ಷೆಯಾಗಲಿ!
ಇದು ಜನರಿಗೆ ಪುಕ್ಕಟೆ ಸಿಗುವ ಮನೋರಂಜನೆ ಆಗದಿರಲಿ!

# ಅಭಿನವ ಗವಿ ಸಿದ್ದೇಶ್ವರ ಶ್ರೀಗಳ ವಚನಾಮೃತ
## ದಸರಾ ಉದ್ಘಾಟನೆಯಲ್ಲಿ ನುಡಿದ ಮೂರು ವಿವೇಕ ರತ್ನಗಳು



| ಸ್ವಾಮಿನಾಥನ್
ಮೊ:9880041516

ಮೈಸೂರು ದಸರೆಯ ಉದ್ಘಾಟನಾ ವೇದಿಕೆ ಎಂದರೆ ಕೇವಲ ಸಾಂಸ್ಕೃತಿಕ ವೈಭವದ ಪ್ರದರ್ಶನವಷ್ಟೇ ಅಲ್ಲ; ಅದು ನಾಡಿನ ಹಿತಾಸಕ್ತಿ, ಚಿಂತನೆ ಮತ್ತು ಭವಿಷ್ಯದ ದಾರಿಯನ್ನು ತೋರಿಸುವ ಗಂಭೀರ ವೇದಿಕೆಯೂ ಹೌದು. ಈ ಬಾರಿಯ ಉದ್ಘಾಟನಾ ಸಮಾರಂಭದಲ್ಲಿ ಅಭಿನವ ಗವಿ ಸಿದ್ದೇಶ್ವರ ಸ್ವಾಮೀಜಿಗಳು ಆಡಿದ ಮಾತುಗಳು, ಇಂದಿನ ಸಮಾಜ ಗಂಭೀರವಾಗಿ ಯೋಚಿಸಬೇಕಾದ ಕೆಲವು ವಿಷಯಗಳನ್ನು ನಮ್ಮ ಮುಂದಿಟ್ಟಿವೆ.

ಆಧುನಿಕತೆಯ ಭರಾಟೆಯಲ್ಲಿ ನಾವು ಪ್ರಕೃತಿಯಿಂದ .

ಹೇಗೆ ದೂರವಾಗುತ್ತಿದ್ದೇವೆ ಮತ್ತು ತಂತ್ರಜ್ಞಾನದ ಮೇಲಿನ ಅತಿಯಾದ ಅವಲಂಬನೆಯ ನಡುವೆ ಬದುಕಿನ ಮೂಲಭೂತ ಸತ್ಯಗಳನ್ನು ಹೇಗೆ ಮರೆಯುತ್ತಿದ್ದೇವೆ ಎಂಬುದನ್ನು ಶ್ರೀಗಳು ಸರಳ ಹಾಗೂ ಮನಮುಟ್ಟುವ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ.

**ಅವರ ಮೂರು ಅಮೃತ ನುಡಿಗಳು ಇವು:**

1. ಲಕ್ಷ ದೀಪಗಳನ್ನು ಹಚ್ಚುವುದಕ್ಕಿಂತ ವೃಕ್ಷ ದೀಪವನ್ನು ಹಚ್ಚಿ ದೇವರನ್ನು ಪೂಜಿಸಬೇಕು ಎಂಬ ಕರೆ.
2. ಗೂಗಲ್‌ನಿಂದ ರೊಟ್ಟಿ ಅಥವಾ ಅನ್ನವನ್ನು ಡೌನ್‌ಲೋಡ್ ಮಾಡಲು ಸಾಧ್ಯವಿಲ್ಲ ಎಂಬ ಉದಾಹರಣೆ.
3. ಬಂಗಾರದ ಕೊರತೆಯಾದರೆ ಆಮದು ಮಾಡಿಕೊಳ್ಳಬಹುದು; ಆದರೆ ಕಾವೇರಿ, ಕೃಷ್ಣೆ, ತುಂಗಭದ್ರೆಯರನ್ನು ಯಾವ ದೇಶದಿಂದ ತರುವುದು ಎಂಬ ಪ್ರಶ್ನೆ.

ಈ ಮೂರು ಅತ್ಯದ್ಭುತ ವಿಚಾರಗಳು ನಮ್ಮ ಅಭಿವೃದ್ಧಿಯ ಆದ್ಯತೆಗಳನ್ನೇ ಮರುಪರಿಶೀಲಿಸುವಂತೆ ಮಾಡುತ್ತವೆ. ಇವು ಪರಿಸರ, ಆಹಾರ ಮತ್ತು ಜಲಸಂಪತ್ತಿನ ಮಹತ್ವವನ್ನು ನೆನಪಿಸುವ ಜೀವನದರ್ಶನದ ಭಾಗಗಳಾಗಿವೆ.

**1. ದೀಪ ಬೆಳಗಿಸುವುದರ ಜೊತೆಗೆ ಮರ ಬೆಳೆಸೋಣ**

ಹಬ್ಬ ಹರಿದಿನಗಳಲ್ಲಿ ದೀಪ ಹಚ್ಚುವುದು ನಮ್ಮ ಸಂಸ್ಕೃತಿಯ ಒಂದು ಭಾಗ. ದೀಪವು ಕತ್ತಲೆಯನ್ನು ದೂರಮಾಡುವ ಬೆಳಕಿನ ಸಂಕೇತ. ಆದರೆ ಹೊರಗಿನ ಕತ್ತಲೆಯನ್ನು ದೂರಮಾಡಲು ಸಾವಿರಾರು ದೀಪಗಳನ್ನು ಹಚ್ಚುವಾಗ, ನಮ್ಮ ಸುತ್ತಲಿನ ಪರಿಸರವನ್ನು ಆವರಿಸುತ್ತಿರುವ ಸಂಕಟಗಳ ಬಗ್ಗೆಯೂ ಯೋಚಿಸಬೇಕಾಗಿದೆ.

ನಗರಗಳು ವಿಸ್ತರಿಸುತ್ತಿವೆ. ಕಟ್ಟಡಗಳು ಹೆಚ್ಚುತ್ತಿವೆ. ರಸ್ತೆಗಳನ್ನು ಅಗಲಗೊಳಿಸಲಾಗುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಮರಗಳು ಉರುಳುತ್ತಿವೆ. ಬೇಸಿಗೆಯ ಬಿಸಿಲು ತೀವ್ರವಾಗುತ್ತಿದೆ. ಮಳೆಯ ಅನಿಶ್ಚಿತತೆ, ಅಂತರ್ಜಲದ ಕುಸಿತ ಮತ್ತು ವಾಯುಮಾಲಿನ್ಯ ನಮ್ಮ ದೈನಂದಿನ ಬದುಕಿನ ಸವಾಲುಗಳಾಗಿವೆ.

ಇಂತಹ ಸಂದರ್ಭದಲ್ಲಿ ವೃಕ್ಷ ದೀಪದ ಕಲ್ಪನೆಗೆ ವಿಶೇಷ ಅರ್ಥವಿದೆ. ದೇವರ ಮುಂದೆ ದೀಪ ಹಚ್ಚುವುದು ಭಕ್ತಿಯ ಅಭಿವ್ಯಕ್ತಿಯಾದರೆ, ಒಂದು ಸಸಿಯನ್ನು ನೆಟ್ಟು ಅದನ್ನು ಮರವಾಗುವವರೆಗೆ ಬೆಳೆಸುವುದು ಪ್ರಕೃತಿಯ ಮೇಲಿನ ನಮ್ಮ ಜವಾಬ್ದಾರಿಯ ಅಭಿವ್ಯಕ್ತಿ.

ಸಸಿ ನೆಡುವುದು ಸುಲಭ; ಅದನ್ನು ಉಳಿಸಿ ಬೆಳೆಸುವುದು ನಿಜವಾದ ಸವಾಲು. ಆದ್ದರಿಂದ ಹಬ್ಬಗಳ ಸಂದರ್ಭದಲ್ಲಿ ಸಸಿಗಳನ್ನು ವಿತರಿಸುವುದಕ್ಕೆ ಮಾತ್ರ ಸೀಮಿತವಾಗದೆ, ಅವುಗಳ ನಿರಂತರ ಆರೈಕೆಗೂ ವ್ಯವಸ್ಥೆ ಮಾಡಬೇಕು. ದೇವಾಲಯಗಳು, ಶಿಕ್ಷಣ ಸಂಸ್ಥೆಗಳು, ಸಂಘಸಂಸ್ಥೆಗಳು, ಸ್ಥಳೀಯ ಆಡಳಿತ ಮತ್ತು ನಾಗರಿಕರು ಈ ಕಾರ್ಯದಲ್ಲಿ ಕೈಜೋಡಿಸಬಹುದು.

ಪ್ರಕೃತಿಯನ್ನು ಪೂಜಿಸುವುದೆಂದರೆ ಅದನ್ನು ಆರಾಧಿಸುವುದಷ್ಟೇ ಅಲ್ಲ; ಅದರ ಅಸ್ತಿತ್ವವನ್ನು ಕಾಪಾಡುವುದೂ ಹೌದು. ಈ ಅರ್ಥದಲ್ಲಿ ವೃಕ್ಷ ದೀಪವು ಒಂದು ಸಾಂಕೇತಿಕ ಆಚರಣೆಯನ್ನು ಮೀರಿ, ನಮ್ಮ ಜೀವನಶೈಲಿಯಲ್ಲಿ ಬದಲಾವಣೆ ತರಬೇಕೆಂಬ ಕರೆಯಾಗಿದೆ.

2. ಗೂಗಲ್ ಜ್ಞಾನ ನೀಡಬಹುದು; ಅನ್ನವನ್ನಲ್ಲ

ಇಂದಿನ ಜಗತ್ತಿನಲ್ಲಿ ಮೊಬೈಲ್, ಇಂಟರ್‌ನೆಟ್ ಮತ್ತು ಕೃತಕ ಬುದ್ಧಿಮತ್ತೆ ನಮ್ಮ ಕಲಿಕೆ, ಉದ್ಯೋಗ, ಸಂವಹನ ಹಾಗೂ ಆರ್ಥಿಕ ಚಟುವಟಿಕೆಗಳನ್ನು ಬದಲಾಯಿಸಿವೆ. ಬೆರಳ ತುದಿಯಲ್ಲಿ ಜಗತ್ತಿನ ಮಾಹಿತಿಯನ್ನು ಪಡೆಯಬಹುದು. ಆದರೆ ಗೂಗಲ್‌ನಿಂದ ರೊಟ್ಟಿ ಅಥವಾ ಅನ್ನವನ್ನು ಡೌನ್‌ಲೋಡ್ ಮಾಡಲು ಸಾಧ್ಯವಿಲ್ಲ ಎಂಬ ಮಾತು, ತಂತ್ರಜ್ಞಾನದ ಮಿತಿಯನ್ನು ಮಾತ್ರವಲ್ಲ, ಪ್ರಕೃತಿಯ ಅನಿವಾರ್ಯತೆಯನ್ನೂ ನೆನಪಿಸುತ್ತದೆ.

ಆಹಾರವು ಪರದೆಯ ಮೇಲೆ ಕಾಣಿಸುವ ಚಿತ್ರವಲ್ಲ. ಅದರ ಹಿಂದೆ ಮಣ್ಣು, ನೀರು, ಬೀಜ, ರೈತನ ಶ್ರಮ, ಸೂರ್ಯನ ಬೆಳಕು ಮತ್ತು ಪ್ರಕೃತಿಯ ಸಹಕಾರವಿದೆ. ಹೊಲದಲ್ಲಿ ಬೆಳೆದ ಧಾನ್ಯ ನಮ್ಮ ತಟ್ಟೆಗೆ ತಲುಪುವವರೆಗೆ ಅನೇಕ ಕೈಗಳ ಪರಿಶ್ರಮ ಅಡಕವಾಗಿದೆ. ತಂತ್ರಜ್ಞಾನ ಈ ಪ್ರಕ್ರಿಯೆಯನ್ನು ಸುಧಾರಿಸಬಹುದು; ಆದರೆ ಪ್ರಕೃತಿಯನ್ನೂ ಮಾನವ ಶ್ರಮವನ್ನೂ ಸಂಪೂರ್ಣವಾಗಿ ಬದಲಾಯಿಸಲಾರದು.

ನಗರಗಳಲ್ಲಿ ಬೆಳೆದ ಅನೇಕ ಮಕ್ಕಳಿಗೆ ಆಹಾರದ ಮೂಲದ ಬಗ್ಗೆ ನೇರ ಅನುಭವ ಕಡಿಮೆಯಾಗಿದೆ. ಅಕ್ಕಿ ಅಂಗಡಿಯಲ್ಲಿ, ತರಕಾರಿ ಮಾರುಕಟ್ಟೆಯಲ್ಲಿ ದೊರೆಯುತ್ತದೆ ಎಂಬಷ್ಟಕ್ಕೆ ಸೀಮಿತ ತಿಳಿವಳಿಕೆ ಇದೆ . ಅವುಗಳನ್ನು ಬೆಳೆಯಲು ಬೇಕಾದ ನೀರು, ಮಣ್ಣು, ಕಾಲ ಮತ್ತು ಶ್ರಮದ ಅರಿವು ಎಷ್ಟು ಮಂದಿಗಿದೆ?

ಆಹಾರವನ್ನು ಗೌರವಿಸುವುದು ಎಂದರೆ ರೈತನ ಶ್ರಮವನ್ನು ಗೌರವಿಸುವುದು. ತಟ್ಟೆಯಲ್ಲಿ ಆಹಾರವನ್ನು ವ್ಯರ್ಥ ಮಾಡದಿರುವುದು, ಕೃಷಿಯ ಮಹತ್ವವನ್ನು ಅರಿಯುವುದು ಮತ್ತು ಆಹಾರ ಉತ್ಪಾದನೆಗೆ ಅಗತ್ಯವಾದ ನೈಸರ್ಗಿಕ ಸಂಪನ್ಮೂಲಗಳನ್ನು ಕಾಪಾಡುವುದು ಸಮಾಜದ ಎಲ್ಲರ ಕರ್ತವ್ಯ.

ಇಲ್ಲಿ ತಂತ್ರಜ್ಞಾನವನ್ನು ತಿರಸ್ಕರಿಸುವ ಪ್ರಶ್ನೆಯಿಲ್ಲ. ಬದಲಾಗಿ, ಅದರ ಪ್ರಯೋಜನಗಳನ್ನು ಪ್ರಕೃತಿಯ ಸಂರಕ್ಷಣೆಗೆ ಬಳಸಿಕೊಳ್ಳುವ ವಿವೇಕ ಅಗತ್ಯ. ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ, ನೀರಿನ ಮಿತವ್ಯಯಿ ಬಳಕೆ, ಮಣ್ಣಿನ ಆರೋಗ್ಯದ ರಕ್ಷಣೆ ಮತ್ತು ಆಹಾರ ಸಂಗ್ರಹಣೆಯ ಸುಧಾರಣೆ ಇವೆಲ್ಲವೂ ಈ ದಿಕ್ಕಿನಲ್ಲಿ ನೆರವಾಗಬಲ್ಲವು.

ತಂತ್ರಜ್ಞಾನ ಎಷ್ಟೇ ಮುಂದುವರಿದರೂ, ಬದುಕಿನ ಮೂಲಾಧಾರವಾದ ಪ್ರಕೃತಿಯನ್ನು ನಿರ್ಲಕ್ಷಿಸಿ ಮಾನವ



ಸಮಾಜ ಮುಂದುವರಿಯಲು ಸಾಧ್ಯವಿಲ್ಲ ಎಂಬುದೇ ಈ ಸಂದೇಶದ ಸಾರ.

3. ಬಂಗಾರವನ್ನು ತರಬಹುದು; ನದಿಗಳನ್ನು ಎಲ್ಲಿಂದ ತರುವುದು?

ಬಂಗಾರದ ಕೊರತೆಯಾದರೆ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಬಹುದು. ಆದರೆ ಕಾವೇರಿ, ಕೃಷ್ಣೆ, ತುಂಗಭದ್ರೆಯಂತಹ ನದಿಗಳನ್ನು ಯಾವ ದೇಶದಿಂದ ತರುವುದು ಎಂಬ ಶ್ರೀಗಳ ಪ್ರಶ್ನೆ ನಮ್ಮನ್ನು ಕ್ಷಣಕಾಲ ನಿಲ್ಲಿಸಿ ಯೋಚಿಸುವಂತೆ ಮಾಡುತ್ತದೆ.

ಬಂಗಾರವು ಆರ್ಥಿಕ ಮೌಲ್ಯವನ್ನು ಹೊಂದಿದೆ. ಆದರೆ ನದಿಗಳು ಜೀವಮೌಲ್ಯವನ್ನು ಹೊಂದಿವೆ. ಅವು ಕುಡಿಯುವ ನೀರನ್ನು ಒದಗಿಸುತ್ತವೆ, ಕೃಷಿಗೆ ಆಧಾರವಾಗುತ್ತವೆ, ಜಲಚರಗಳ ಬದುಕನ್ನು ಪೋಷಿಸುತ್ತವೆ ಮತ್ತು ಅನೇಕ ಪ್ರದೇಶಗಳ ಸಂಸ್ಕೃತಿ ಹಾಗೂ ಜನಜೀವನದೊಂದಿಗೆ ಬೆಸೆದುಕೊಂಡಿವೆ.

ನಮ್ಮ ಅನೇಕ ನದಿಗಳು ಕೈಗಾರಿಕಾ ತ್ಯಾಜ್ಯ, ಕೊಳಚೆ ನೀರು ಮತ್ತು ಇತರ ಮಾಲಿನ್ಯಕಾರಕಗಳಿಂದ ಕಲುಷಿತಗೊಳ್ಳುತ್ತಿರುವುದು ಗಂಭೀರ ಕಳವಳದ ಸಂಗತಿ. ಕೆಲವು ನದಿ ಭಾಗಗಳಲ್ಲಿ ನೀರು ಕುಡಿಯಲು ಯೋಗ್ಯವಾಗಿರದ ಪರಿಸ್ಥಿತಿಯೂ ಇದೆ. ಇದು ಕೇವಲ ಪರಿಸರದ ಸಮಸ್ಯೆಯಲ್ಲ; ಸಾರ್ವಜನಿಕ ಆರೋಗ್ಯ ಮತ್ತು ಭವಿಷ್ಯದ ನೀರಿನ ಭದ್ರತೆಯ ಪ್ರಶ್ನೆಯೂ ಹೌದು.

ನೀರಿನ ಕೊರತೆಯಾದಾಗ ಹಣವಿದ್ದರೆ ಬಾಟಲಿ ನೀರನ್ನು ಖರೀದಿಸಬಹುದು. ಕೆಲವು ಸಂದರ್ಭಗಳಲ್ಲಿ ನೀರನ್ನು ದೂರದ ಪ್ರದೇಶಗಳಿಂದ ಸಾಗಿಸಬಹುದು. ಆದರೆ ಒಂದು ನದಿ ವ್ಯವಸ್ಥೆಯೇ ದುರ್ಬಲಗೊಂಡರೆ, ಅದರ ಪರಿಣಾಮವನ್ನು ಹಣ ಕೊಟ್ಟು ಸುಲಭವಾಗಿ ಸರಿಪಡಿಸಲು ಸಾಧ್ಯವಿಲ್ಲ. ನದಿಯ ಹರಿವು, ಜಲಾನಯನ ಪ್ರದೇಶ, ಮಳೆ, ಅರಣ್ಯ ಮತ್ತು ಅಂತರ್ಜಲ?ಇವೆಲ್ಲವೂ ಪರಸ್ಪರ ಸಂಬಂಧ ಹೊಂದಿವೆ.

ಕಾವೇರಿ , ಕಪಿಲ ,ಕೃಷ್ಣೆ ಮತ್ತು ತುಂಗಭದ್ರೆ ನಮ್ಮ ಜೀವನಾಧಾರವಾಗಿವೆ. ನದಿಗಳ ನೀರಿನ ಹಂಚಿಕೆ ಕುರಿತು ರಾಜ್ಯಗಳ ನಡುವೆ ಭಿನ್ನಾಭಿಪ್ರಾಯಗಳಿರಬಹುದು. ಆದರೆ ನದಿಗಳ ಮೂಲಸಂಪತ್ತನ್ನು ಕಾಪಾಡುವ ಹೊಣೆಗಾರಿಕೆ ಎಲ್ಲರಿಗೂ ಸೇರಿದೆ. ನೀರಿನ ಹಂಚಿಕೆಯ ಚರ್ಚೆಯ ಜೊತೆಗೆ ನೀರಿನ ಸಂರಕ್ಷಣೆಯೂ ಸಮಾನ ಪ್ರಾಮುಖ್ಯತೆ ಪಡೆಯಬೇಕು.

ಮಳೆನೀರಿನ ಕೊಯ್ಲು, ಕೆರೆಗಳ ಪುನರುಜ್ಜೀವನ, ಜಲಾನಯನ ಪ್ರದೇಶಗಳ ರಕ್ಷಣೆ, ಅರಣ್ಯ ಸಂವರ್ಧನೆ ಮತ್ತು ಅಂತರ್ಜಲ ಮರುಪೂರಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಕೃಷಿಯಲ್ಲಿ ನೀರಿನ ಮಿತವ್ಯಯಿ ಪದ್ಧತಿಗಳನ್ನು ಉತ್ತೇಜಿಸಬೇಕು. ನಗರಗಳಲ್ಲಿ ಸಂಸ್ಕರಿಸಿದ ನೀರಿನ ಮರುಬಳಕೆ ಹೆಚ್ಚಬೇಕು. ನದಿಗಳಿಗೆ ತ್ಯಾಜ್ಯ ಮತ್ತು ಸಂಸ್ಕರಿಸದ ಕೊಳಚೆ ನೀರು ಸೇರುವುದನ್ನು ತಡೆಯಬೇಕು.

ಈ ಜವಾಬ್ದಾರಿ ಸರ್ಕಾರದ ಇಲಾಖೆಗಳಿಗಷ್ಟೇ ಸೀಮಿತವಲ್ಲ. ಕೈಗಾರಿಕೆಗಳು ಪರಿಸರ ನಿಯಮಗಳನ್ನು ಪಾಲಿಸಬೇಕು; ನಗರಾಡಳಿತಗಳು ತ್ಯಾಜ್ಯ ನಿರ್ವಹಣೆಗೆ ಆದ್ಯತೆ ನೀಡಬೇಕು; ರೈತರು ಮತ್ತು ನಾಗರಿಕರು ನೀರಿನ ಮಿತವ್ಯಯಕ್ಕೆ ಸಹಕರಿಸಬೇಕು. ಪ್ರತಿಯೊಬ್ಬರೂ ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಿದಾಗಲೇ ನದಿಗಳ ಸಂರಕ್ಷಣೆ ಪರಿಣಾಮಕಾರಿಯಾಗುತ್ತದೆ.

ನೀರಿನ ಬಗ್ಗೆ ನಮ್ಮ ಚಿಂತನೆ ಬರಗಾಲ ಬಂದಾಗ ಮಾತ್ರ ಆರಂಭವಾಗಬಾರದು. ನೀರು ಸಮೃದ್ಧವಾಗಿರುವ ದಿನಗಳಲ್ಲಿಯೇ ಅದರ ಮೌಲ್ಯವನ್ನು ಅರಿಯಬೇಕು. ನದಿಯನ್ನು ಉಳಿಸುವುದು ಎಂದರೆ ಕೇವಲ ನೀರನ್ನು ಉಳಿಸುವುದಲ್ಲ; ಅದರೊಂದಿಗೆ ಬೆಸೆದುಕೊಂಡಿರುವ ಜೀವವೈವಿಧ್ಯ, ಕೃಷಿ, ಆರ್ಥಿಕತೆ ಮತ್ತು ಮಾನವ ಬದುಕನ್ನು ಉಳಿಸುವುದಾಗಿದೆ.

**ಪ್ರಕೃತಿ ಸಂರಕ್ಷಣೆ ಎಲ್ಲರ ಹೊಣೆಗಾರಿಕೆ**

ಪರಿಸರ ಸಂರಕ್ಷಣೆ ಯುವಜನತೆಯ ಜವಾಬ್ದಾರಿ ಮಾತ್ರವಲ್ಲ. ಅದು ಸಮಾಜದ ಪ್ರತಿಯೊಬ್ಬ ವ್ಯಕ್ತಿ, ಕುಟುಂಬ, ಶಿಕ್ಷಣ ಸಂಸ್ಥೆ, ಉದ್ಯಮ ಮತ್ತು ಸರ್ಕಾರದ ಸಾಮೂಹಿಕ ಹೊಣೆಗಾರಿಕೆ. ಯುವಜನತೆ ಈ ಬದಲಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಬಹುದು; ಆದರೆ ಉಳಿದ ಸಮಾಜದ ಸಹಭಾಗಿತ್ವವಿಲ್ಲದೆ ದೀರ್ಘಕಾಲೀನ ಬದಲಾವಣೆ ಸಾಧ್ಯವಿಲ್ಲ.

ಕುಟುಂಬಗಳಲ್ಲಿ ನೀರು ಮತ್ತು ವಿದ್ಯುತ್ ಮಿತವಾಗಿ ಬಳಸುವ ಅಭ್ಯಾಸ ಬೆಳೆಸಬೇಕು. ಆಹಾರವನ್ನು ವ್ಯರ್ಥ ಮಾಡದಿರುವುದನ್ನು ಮಕ್ಕಳಿಗೆ ಕಲಿಸಬೇಕು. ಶಾಲೆ ಮತ್ತು ಕಾಲೇಜುಗಳಲ್ಲಿ ಪರಿಸರ ಶಿಕ್ಷಣದ ಜೊತೆಗೆ ತೋಟಗಾರಿಕೆ, ಕೆರೆಗಳ ಸಂರಕ್ಷಣೆ ಮತ್ತು ಸ್ಥಳೀಯ ಪರಿಸರದ ಅಧ್ಯಯನಕ್ಕೆ ಅವಕಾಶ ಕಲ್ಪಿಸಬೇಕು. ಸಂಘಸಂಸ್ಥೆಗಳು ಮತ್ತು ನಾಗರಿಕ ಗುಂಪುಗಳು ಗಿಡಗಳನ್ನು ನೆಡುವುದರ ಜೊತೆಗೆ ಅವುಗಳ ಆರೈಕೆಯನ್ನೂ ಕೈಗೊಳ್ಳಬೇಕು.

ಉದ್ಯಮಗಳು ತಮ್ಮ ಉತ್ಪಾದನಾ ಪ್ರಕ್ರಿಯೆಯಲ್ಲಿ ನೀರಿನ ಮರುಬಳಕೆ, ತ್ಯಾಜ್ಯ ನಿರ್ವಹಣೆ ಮತ್ತು ಮಾಲಿನ್ಯ ನಿಯಂತ್ರಣಕ್ಕೆ ಆದ್ಯತೆ ನೀಡಬೇಕು. ಸರ್ಕಾರಗಳು ಪರಿಸರ ಸಂರಕ್ಷಣಾ ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ನಗರಾಭಿವೃದ್ಧಿ ಯೋಜನೆಗಳಲ್ಲಿ ಮರಗಳು, ಕೆರೆಗಳು ಮತ್ತು ನೈಸರ್ಗಿಕ ಜಲಮಾರ್ಗಗಳ ರಕ್ಷಣೆಗೆ ಸೂಕ್ತ ಸ್ಥಾನ ನೀಡಬೇಕು.

ಯುವಜನತೆ ತಮ್ಮ ಜ್ಞಾನ ಮತ್ತು ಕೌಶಲ್ಯವನ್ನು ಪರಿಹಾರಗಳನ್ನು ರೂಪಿಸಲು ಬಳಸಿಕೊಳ್ಳಬಹುದು. ತಂತ್ರಜ್ಞಾನ ಕ್ಷೇತ್ರದವರು ನೀರಿನ ಬಳಕೆಯನ್ನು ಅಳೆಯುವ ವ್ಯವಸ್ಥೆಗಳನ್ನು ರೂಪಿಸಬಹುದು. ಕೃಷಿಯಲ್ಲಿ ಆಸಕ್ತಿ ಹೊಂದಿರುವವರು ಕಡಿಮೆ ನೀರಿನಲ್ಲಿ ಹೆಚ್ಚು ಉತ್ಪಾದನೆ ಸಾಧ್ಯವಾಗುವ ವಿಧಾನಗಳನ್ನು ಅಧ್ಯಯನ ಮಾಡಬಹುದು. ಉದ್ಯಮಶೀಲರು ಪರಿಸರ ಸ್ನೇಹಿ ಉತ್ಪನ್ನಗಳು ಮತ್ತು ಸೇವೆಗಳಿಗೆ ಅವಕಾಶಗಳನ್ನು ಸೃಷ್ಟಿಸಬಹುದು.

ಸಾಮಾಜಿಕ ಜಾಲತಾಣಗಳಲ್ಲಿ ಪರಿಸರದ ಬಗ್ಗೆ ಸಂದೇಶ ಹಂಚಿಕೊಳ್ಳುವುದರ ಜೊತೆಗೆ, ನೈಜ ಬದುಕಿನಲ್ಲಿ ಸಣ್ಣ ಬದಲಾವಣೆಗಳನ್ನು ಅಳವಡಿಸಿಕೊಳ್ಳುವುದೂ ಮುಖ್ಯ. ಮನೆಯಲ್ಲೊಂದು ಸಸಿಯನ್ನು ಬೆಳೆಸುವುದರಿಂದ ಹಿಡಿದು ಸ್ಥಳೀಯ ಕೆರೆಯ ಸಂರಕ್ಷಣೆಯಲ್ಲಿ ಭಾಗವಹಿಸುವವರೆಗೆ ಪ್ರತಿಯೊಂದು ಪ್ರಯತ್ನಕ್ಕೂ ಮಹತ್ವವಿದೆ.

ಅಭಿವೃದ್ಧಿ ಎಂದರೆ ಕೇವಲ ದೊಡ್ಡ ಕಟ್ಟಡಗಳು, ಅಗಲವಾದ ರಸ್ತೆಗಳು, ವೇಗದ ಇಂಟರ್‌ನೆಟ್ ಮತ್ತು ಹೆಚ್ಚುತ್ತಿರುವ ಆದಾಯವಲ್ಲ. ಶುದ್ಧ ಗಾಳಿ, ಕುಡಿಯುವ ನೀರು, ಫಲವತ್ತಾದ ಮಣ್ಣು ಮತ್ತು ಆರೋಗ್ಯಕರ ಪರಿಸರವೂ ಅಭಿವೃದ್ಧಿಯ ಅವಿಭಾಜ್ಯ ಅಂಗಗಳು. ಇವುಗಳನ್ನು ಕಳೆದುಕೊಂಡು ಸಾಧಿಸುವ ಪ್ರಗತಿ ದೀರ್ಘಕಾಲ ಸುಸ್ಥಿರವಾಗಿರಲಾರದು.

**ಆಚರಣೆಯಿಂದ ಆಲೋಚನೆಗೆ, ಆಲೋಚನೆಯಿಂದ ಬದಲಾವಣೆಗೆ** ಹಬ್ಬಗಳು ನಮ್ಮ ಸಂಸ್ಕೃತಿಯ ನೆನಪನ್ನು ಜೀವಂತವಾಗಿರಿಸುತ್ತವೆ. ಆದರೆ ಅವುಗಳ ನಿಜವಾದ ಅರ್ಥವು ಆಚರಣೆ ಮುಗಿದ ನಂತರ ನಮ್ಮ ಬದುಕಿನಲ್ಲಿ ಏನು ಬದಲಾವಣೆಯಾಗುತ್ತದೆ ಎಂಬುದರಲ್ಲಿದೆ.

ದಸರಾ ಸಂದರ್ಭದಲ್ಲಿ ದೇವಿಗೆ ದೀಪ ಬೆಳಗಿಸುವುದು ಭಕ್ತಿಯ ಸಂಕೇತ. ಅದೇ ಸಂದರ್ಭದಲ್ಲಿ ಒಂದು ಮರವನ್ನು ಬೆಳೆಸುವ ಸಂಕಲ್ಪ ಕೈಗೊಳ್ಳುವುದು ಪ್ರಕೃತಿಯ ಮೇಲಿನ ಗೌರವದ ಸಂಕೇತವಾಗಬಹುದು. ಅನ್ನದಾನ ಮಾಡುವುದು ಪುಣ್ಯದ ಕಾರ್ಯ; ಆಹಾರ ವ್ಯರ್ಥವಾಗದಂತೆ ನೋಡಿಕೊಳ್ಳುವುದು ಸಾಮಾಜಿಕ ಜವಾಬ್ದಾರಿ. ನದಿಗಳಿಗೆ ಪೂಜೆ ಸಲ್ಲಿಸುವುದು ನಮ್ಮ ಸಂಪ್ರದಾಯ; ಅವುಗಳನ್ನು ಮಾಲಿನ್ಯದಿಂದ ರಕ್ಷಿಸುವುದು ಆ ಸಂಪ್ರದಾಯದ ಆಶಯವನ್ನು ಬದುಕಿನಲ್ಲಿ ಅನುಷ್ಠಾನಗೊಳಿಸುವ ಮಾರ್ಗ.

ಅಭಿನವ ಗವಿ ಸಿದ್ದೇಶ್ವರ ಸ್ವಾಮೀಜಿಯವರ ಈ ಮೂರು ಚಿಂತನೆಗಳನ್ನು ಪ್ರತ್ಯೇಕ ಸಂದೇಶಗಳೆಂದು ನೋಡುವ ಬದಲು, ಒಂದೇ ಜೀವನದರ್ಶನದ ಮೂರು ಮುಖಗಳೆಂದು ನೋಡಬಹುದು. ಮರಗಳು ನಮ್ಮ ಪರಿಸರವನ್ನು ಉಳಿಸುತ್ತವೆ. ಆಹಾರ ನಮ್ಮ ಬದುಕನ್ನು ಪೋಷಿಸುತ್ತದೆ. ನದಿಗಳು ನಮ್ಮ ಅಸ್ತಿತ್ವಕ್ಕೆ ಆಧಾರವಾಗುತ್ತವೆ. ಈ ಮೂರನ್ನೂ ಕಾಪಾಡುವ ಜವಾಬ್ದಾರಿ ಸಮಾಜದ ಎಲ್ಲರ ಮೇಲಿದೆ.

ಈ ಸತ್ಯಗಳನ್ನು ಅರಿತು ನಮ್ಮ ವೈಯಕ್ತಿಕ ಜೀವನ, ಸಾಮಾಜಿಕ ಆಚರಣೆ ಮತ್ತು ಅಭಿವೃದ್ಧಿಯ ಆದ್ಯತೆಗಳಲ್ಲಿ ಅಳವಡಿಸಿಕೊಂಡಾಗಲೇ ದಸರೆಯ ಈ ಸಂದೇಶಗಳು ನಿಜವಾದ ಅರ್ಥದಲ್ಲಿ ಸಾಕಾರಗೊಳ್ಳುತ್ತವೆ. ಪ್ರಕೃತಿಯನ್ನು ಕಾಪಾಡುವುದು ಮುಂದಿನ ಪೀಳಿಗೆಗೆ ನೀಡಬಹುದಾದ ಅತ್ಯಂತ ಅಮೂಲ್ಯ ಕೊಡುಗೆ. ಅದು ಕೇವಲ ಯುವಜನತೆಯ ಹೊಣೆಗಾರಿಕೆಯಲ್ಲ; ನಮ್ಮೆಲ್ಲರ ಸಾಮೂಹಿಕ ಕರ್ತವ್ಯ.

# ಕನ್ಯಾಪೂಜೆ ಮಹತ್ವ



| ಗಿರಿಜಾ.ಎಸ್.
ದೇಶಪಾಂಡೆ.
ಬೆಂಗಳೂರು.

ಹಿಂದೂ ಧರ್ಮದ ಪ್ರಕಾರ ತಾಯಿ ದುರ್ಗೆಯನ್ನು ನವರಾತ್ರಿಯಲ್ಲಿ ಪೂಜಿಸುವದರೊಂದಿಗೆ ಕನ್ಯಾಪೂಜೆ ಮಾಡುವದರಿಂದ ಭಕ್ತರಿಗೆ ಪುಣ್ಯಪ್ರಾಪ್ತಿಯಾಗುವದು ಎಂಬ ನಂಬಿಕೆ ಇದೆ.ನವರಾತ್ರಿ ಶಕ್ತಿದೇವತೆಯನ್ನು ಆರಾಧಿಸುವ ಹಬ್ಬ.ಈ ಹಬ್ಬದಲ್ಲಿ ಎಲ್ಲೆಲ್ಲೂ ಸಂಭ್ರಮದ ವಾತಾವರಣ ಕಂಡುಬರುತ್ತದೆ.ನವರಾತ್ರಿಯು ಭಾರತೀಯ ಸಂಪ್ರದಾಯದಲ್ಲಿ ಹೆಣ್ಣುಮಕ್ಕಳಿಗೆ ಹೆಚ್ಚಿನ ಪ್ರಶಸ್ತ್ಯ ನೀಡಲಾಗಿದೆ.ವಿಜಯದಶಮಿಗೆ ಮೂರು ಕಥೆಗಳಿವೆ.ತಾಯಿ ದುರ್ಗೆ ಮಹಿಷನನ್ನು ವಧೆಮಾಡಿದ ದಿನ,ರಾಮನು ರಾವಣನನ್ನು ಕೊಂದ ದಿನ,ಪಾಂಡವರು ಕೌರವರನ್ನು ಬನ್ನಿ ವೃಕ್ಷದಡಿಯಿಟ್ಟ ಶಸ್ತ್ರಾಸ್ತ್ರಗಳಿಂದ ಸಂಹಾರಮಾಡಿದ್ದು ಎಂದು ಹೇಳಲಾಗುತ್ತದೆ.ಕನ್ಯಾಪೂಜೆ ಸಂಪ್ರದಾಯ ನವರಾತ್ರಿಯ ಬಹು ಮುಖ್ಯ ಆಚರಣೆಯಲ್ಲಿ ಒಂದಾಗಿದೆ. ಈ ಸಮಯದಲ್ಲಿ ಪುಟ್ಟ ಹೆಣ್ಣುಮಕ್ಕಳಿಗೆ ನವದುರ್ಗೆಯಂತೆ ಅಲಂಕರಿಸಿ ಅವರನ್ನೇ ದುರ್ಗೆಯಂದು ಪೂಜಿಸುವದು ಹಿಂದಿನಿಂದ ಬಂದಿದೆ. ಕನ್ಯಾಪೂಜೆ ಅಥವಾ ಕಂಜಕಪೂಜನವೆಂದು ಕರೆಯುವ ಸಂಪ್ರದಾಯಕ್ಕೆ ಕಿರಿವಯಸ್ಸಿನ ಹೆಣ್ಣುಮಕ್ಕಳನ್ನು ದೇವಿಯ ಪ್ರತಿರೂಪವೆಂದು ಪರಿಗಣಿಸಲಾಗುತ್ತದೆ. ಅಂದು ಕಿರಿ ವಯಸ್ಸಿನ ಹೆಣ್ಣುಮಕ್ಕಳಿಗೆ ಬಾಗಿಣ ನೀಡಿ ಹಬ್ಬದ ಅಡುಗೆಮಾಡಿ ಊಟಕ್ಕೆ ಬಡಿಸಲಾಗುತ್ತದೆ.

ಕನ್ಯಾಪೂಜೆಯ ಮಹತ್ವ– ಪ್ರತಿಯೊಬ್ಬ ಮನುಷ್ಯನಲ್ಲೂ ದೇವರಿರುತ್ತಾನೆ. ಎಂಬುದನ್ನು ನಮ್ಮ ಗ್ರಂಥಗಳು ಪ್ರತಿಪಾದಿಸುತ್ತವೆ.ಪುಟ್ಟಮಕ್ಕಳು ಶುದ್ಧ ಹಾಗೂ ಮುಗ್ಧಮನಸಿನ ಮನುಷ್ಯರೂಪವಾಗಿರುತ್ತವೆ.

ಕನ್ಯಾಪೂಜೆಯಲ್ಲಿ ದುರ್ಗೆಯ ಒಂಬತ್ತು ರೂಪಗಳು

ಕನ್ಯೆಯರು ಪ್ರತಿನಿಧಿಸುವ ದುರ್ಗೆಯ ಒಂಬತ್ತು ದೇವಿಯರೆಂದರೆ 1 .ಕುಮಾರಿಕಾ,2. ತ್ರಿಮೂರ್ತಿ3. ಕಲ್ಯಾಣಿ4. ರೋಹಿಣಿ5. ಕಾಳಿ6. ಚಂಡಿಕಾ7. ಶಾಂಭವಿ,8.ದುರ್ಗಾ.9.ಸುಭದ್ರಾ. ಕನ್ಯಾಪೂಜೆಯಲ್ಲಿ ಪಾಲ್ಗೊಳ್ಳುವ ಬಾಲೆಯರು ಆರೋಗ್ಯವಂತರಾಗಿರಬೇಕು. ಎಲ್ಲ ಕಾಯಿಲೆಯಿಂದ ಮುಕ್ತರಾಗಿರಬೇಕು.ಬ್ರಾಹ್ಮಣ ಸಮಾಜದ ಕುಮಾರಿಯಾದರೆ ಆಸೆಗಳು ಬೇಗ ಇಡೇರುತ್ತವೆ,ಕ್ಷತ್ರಿಯರಾದರೆ



ಘನತೆ,ಗೌರವಾದರಗಳು ಹೆಚ್ಚಾಗುತ್ತವೆ. ವೈಶ್ಯಮನೆತನದ ಕನ್ಯೆಯಾದರೆ ಸಂಪತ್ತು ಲಭಿಸುತ್ತದೆ.ಪರಿಶಿಷ್ಟ ಹೆಣ್ಣುಮಕ್ಕಳಾದರೆ ಸಂತಾನಭಾಗ್ಯ ಒದಗಿ ಬರುತ್ತದೆ.ಒಟ್ಟಿನಲ್ಲಿ ಬಾಲೆಯರ ಪೂಜೆ ದೇವತಾಪೂಜೆಯಿದ್ದಂತೆ ಎಂದು ಭಾವಿಸಲಾಗಿದೆ.

ಪೂಜಾವಿಧಾನ– ಹೆಣ್ಣುಮಕ್ಕಳ ಕಾಲು ತೊಳೆದು ಅರಿಷಿಣ ಕುಂಕುಮ ಪಾದಕ್ಕೆ ಹಚ್ಚಿ,ಹೊಸಮಣೆಯ ಮೇಲೆ ಕೂಡಿಸಿ ಕುಂಕುಮ ನೀಡಿ ಅಕ್ಕಿ,ಬೆಲ್ಲ, ಹುರಕಡ್ಲೆ,ಕೊಬ್ಬರಿಬಟ್ಟಲು,ಅಡಿಕೆ,ವಿಳ್ಳೆದೆಲೆ,ಐದು ತರದ ಹಣ್ಣುಗಳು ,ತೆಂಗಿನಕಾಯಿ ಹೊಸಬಟ್ಟೆ ಇಟ್ಟು ನೀಡಬೇಕು.ರುಚಿಕರವಾದ ಊಟ ಬಡಿಸಿ ತೃಪ್ತಿಪಡಿಸಬೇಕು.

ಎರಡು ವರ್ಷದಿಂದ 10 ವರ್ಷದ ಮಕ್ಕಳನ್ನು ಆಯ್ಕೆಮಾಡಿಕೊಳ್ಳಬೇಕು. ದುರ್ಗಾ ಮಂತ್ರ ಹೇಳಿ ಕನ್ಯಾಯರನ್ನು ಪೂಜಿಸಿದರೆ ಶುಭಫಲ ಲಭ್ಯವಾಗುತ್ತದೆ.

ಕನ್ಯೆಯಪೂಜೆಯ ಹಿಂದಿನ ಕಥೆ

ಪುರಾಣದ ಕಥೆಯ ಪ್ರಕಾರ ಹಿಂದೆ ಮಹಿಷಾಸುರ ಎಂಬ ರಾಕ್ಷಸನಿದ್ದನು.ಅವನನ್ನು ಕೊಲ್ಲಲು ಮಹಾಕಾಳಿ ,ಲಕ್ಷ್ಮಿ,ಸರಸ್ವತಿಯರು ಸೇರಿ ದುರ್ಗಾಅವತಾರ ಎತ್ತಿದರು.ಸಂಹಾರಕ್ಕೂ ಮೊದಲು ದೇವಿಯರು ಒಂಬತ್ತು ಅವತಾರ ತಾಳಬೇಕಾಯಿತು.ತಾಯಿ ದುರ್ಗೆಯ ಅವತಾರಗಳು ಅವಳ ಶಕ್ತಿಯನ್ನು ಪೂಜಿಸುವ ಸಲುವಾಗಿ ಒಂಬತ್ತು ಹೆಣ್ಣುಮಕ್ಕಳಿಗೆ ದೇವಿಯರಂತೆ ಅಲಂಕರಿಸಿ ಅವರನ್ನು ಪೂಜೆ ಮಾಡಲಾಗುತ್ತದೆ.

ಕುಮಾರಿ ಪೂಜೆಯಿಂದ ಗೌರವ,ಲಕ್ಷ್ಮಿ, ವಿದ್ಯೆ,ತೇಜಸ್ಸು,ಪ್ರಾಪ್ತಿಯಾಗುತ್ತದೆ.ಭಯ ಹಾಗೂ ಶತ್ರುಗಳ ನಾಶವಾಗುತ್ತದೆ.

# ಅ. 24 ರಂದು ಜಿಲ್ಲಾ ಮಟ್ಟದ ಪ್ರಜಾಸೇವಾ ಆಂದೋಲನ

**ಮಂಡ್ಯ:** ಅಕ್ಟೋಬರ್ 24ರಂದು ಮಂಡ್ಯ ನಗರದ ಗುತ್ತಲು ಅರ್ಕೇಶ್ವರ ನಗರದಲ್ಲಿರುವ ಕೆ.ಪಿ.ಎಸ್. ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿರುವ ಜಿಲ್ಲಾ ಮಟ್ಟದ ಪ್ರಜಾಸೇವಾ ಆಂದೋಲನ ಹಾಗೂ ವಿಶೇಷ ಆರೋಗ್ಯ ಶಿಬಿರವನ್ನು (Health Camp) ಪರಿಣಾಮಕಾರಿಯಾಗಿ ಆಯೋಜಿಸುವ ಮೂಲಕ ಸಾರ್ವಜನಿಕರಿಗೆ ಹೆಚ್ಚಿನ ಪ್ರಯೋಜನ ದೊರೆಯುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ. ರವಿಕುಮಾರ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಂದು ಜಿಲ್ಲಾಧಿಕಾರಿ ಕಛೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಪ್ರಜಾಸೇವಾ ಆಂದೋಲನ ಹಾಗೂ ವಿಶೇಷ ಆರೋಗ್ಯ ಶಿಬಿರ ಕಾರ್ಯಕ್ರಮ ಆಯೋಜನೆ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮದ ಮೂಲಕ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವುದರ ಜೊತೆಗೆ,





ಆರೋಗ್ಯ ಸೇವೆಗಳೂ ಅರ್ಹ ಫಲಾನುಭವಿಗಳಿಗೆ ಸುಲಭವಾಗಿ ತಲುಪುವಂತಾಗಬೇಕು. ವಿಶೇಷ ಆರೋಗ್ಯ ಶಿಬಿರದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಲಭ್ಯವಿರುವ ಆರೋಗ್ಯ ತಪಾಸಣೆ ಹಾಗೂ ವೈದ್ಯಕೀಯ ಸೇವೆಗಳ ಸದುಪಯೋಗ ಪಡೆದುಕೊಳ್ಳುವಂತೆ ಅಗತ್ಯ ಅರಿವು ಮೂಡಿಸಬೇಕು ಎಂದು ಅವರು ತಿಳಿಸಿದರು. ಪ್ರಜಾಸೇವಾ ಆಂದೋಲನವು ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ವೇದಿಕೆಯಾಗಬೇಕು. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಿ, ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಹಾಗೂ ಜನೋಪಯೋಗಿಯಾಗಿ ನಡೆಸಲು ಸಿದ್ಧತೆ ಮಾಡಿಕೊಳ್ಳಬೇಕು ಎಂದು ಶಾಸಕರು ಸೂಚಿಸಿದರು. ಅಪರ ಜಿಲ್ಲಾಧಿಕಾರಿಗಳಾದ ಬಿ.ಸಿ. ಶಿವಾನಂದಮೂರ್ತಿ ಅವರು ಮಾತನಾಡಿ, ಕಾರ್ಯಕ್ರಮಕ್ಕೆ ಸಂಬಂಧಿಸಿದ ಆಹ್ವಾನ ಪತ್ರಿಕೆಗಳ ಮುದ್ರಣ ಹಾಗೂ ವಿತರಣೆ, ವೇದಿಕೆ ನಿರ್ಮಾಣ, ಸಾರ್ವಜನಿಕರಿಗೆ ಆಸನ ವ್ಯವಸ್ಥೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಲು ಅಧಿಕಾರಿಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ಯಶಸ್ವಿ ಆಯೋಜನೆಗೆ ವಿವಿಧ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕು. ವೇದಿಕೆಯಲ್ಲಿ ಗಣ್ಯರಿಗೆ ಅಗತ್ಯ ವ್ಯವಸ್ಥೆ ಕಲ್ಪಿಸುವುದರ ಜತೆಗೆ ಕಾರ್ಯಕ್ರಮಕ್ಕೆ ಆಗಮಿಸುವ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಮಾಡಬೇಕು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಸ್ವಚ್ಛತೆ ಕಾಪಾಡಬೇಕು.ವಾಹನಗಳ ಸುಗಮ ಸಂಚಾರ ಹಾಗೂ ಪಾರ್ಕಿಂಗ್‌ಗೆ ಸೂಕ್ತ ಸ್ಥಳಾವಕಾಶ ಕಲ್ಪಿಸುವತ್ತ ಗಮನಹರಿಸಬೇಕು ಎಂದು ಸೂಚಿಸಿದರು.

ಕಾರ್ಯಕ್ರಮದ ಕುರಿತು ಸಾರ್ವಜನಿಕರಿಗೆ ಮುಂಚಿತವಾಗಿ ವ್ಯಾಪಕ ಪ್ರಚಾರ ಕೈಗೊಂಡು ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸುವಂತೆ ಕ್ರಮ ವಹಿಸಬೇಕು. ಆರೋಗ್ಯ ಸೇವೆಗಳ ಅಗತ್ಯವಿರುವವರಿಗೆತ್ವರಿತನೆರವುದೊರೆಯುವಂತೆ ವೈದ್ಯಕೀಯ ಸಿಬ್ಬಂದಿ ಹಾಗೂ ಅಗತ್ಯ ಆರೋಗ್ಯ ಸೌಲಭ್ಯಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು. ನಿಯೋಜಿತ ಅಧಿಕಾರಿಗಳು ತಮಗೆ ವಹಿಸಿರುವ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಿ, ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಹಾಗೂ ಯಶಸ್ವಿಯಾಗಿ ನಡೆಸಲು ಸಕಾಲದಲ್ಲಿ ಸಿದ್ಧತೆಗಳನ್ನು ಪೂರ್ಣಗೊಳಿಸಬೇಕು ಎಂದು ನಿರ್ದೇಶನ ನೀಡಿದರು.

# ಸಂಬಂಧಗಳ ಬಲ: ಸಾವಿನ ಕಳವಳದ ಅಂತ್ಯ

ಮಾನವ ಮೆದುಳಿಗೆ ಏಕಾಂತವೆಂದರೆ ಅಪಾಯದ ಮುನ್ಸೂಚನೆ. ಆತ್ಮೀಯರ ಬೆಚ್ಚನೆಯ ಸಾನ್ನಿಧ್ಯ ದೊರೆತ ಕ್ಷಣದಲ್ಲಿ ನರಮಂಡಲದಲ್ಲಿ ಭದ್ರತೆಯ ದೀಪ ಬೆಳಗುತ್ತದೆ. ಆಗ ಚಂಚಲಗೊಂಡ ಹೃದಯಬಡಿತ ನಿಧಾನವಾಗುತ್ತದೆ, ಉಸಿರಾಟ ಸಮಸ್ಥಿತಿಗೆ ಮರಳುತ್ತದೆ. ಈ ಆಂತರಿಕ ನೆಮ್ಮದಿಯು ಕೇವಲ ಭಾವನೆಯಲ್ಲ, ಅದು ದೇಹದ ರೋಗನಿರೋಧಕ ಶಕ್ತಿಯನ್ನು ಬಲಪಡಿಸುವ ಜೀವಾಮೃತವಿದ್ದಂತೆ.

ನಿಜವಾದ ಬಾಂಧವ್ಯವೆಂದರೆ ಹಬ್ಬ-ಸಂಭ್ರಮಗಳ ಫೋಟೋದ ಹೊಳಪಲ್ಲ. ಅದು ಕಷ್ಟದ ಇರುಳಲ್ಲಿ ಕೈಹಿಡಿದು ನಡೆಯುವ ಸಂಸ್ಕಾರ. ಯಾರಾದರೂ ಕಿವಿಯಾಗಿ ಆಲಿಸಿದಾಗ, ಹೃದಯವಾಗಿ ಅರ್ಥಮಾಡಿಕೊಂಡಾಗ, ನೆರಳಾಗಿ ಜೊತೆ ನಿಂತಾಗ ನಿರಾಶೆಯ ಬೆಟ್ಟವೂ ಮಂಜಿನಂತೆ ಕರಗುತ್ತದೆ. ಆಗ ಬದುಕಿನ ಅನಿಶ್ಚಿತತೆಗಳು ದಾಟಲಾಗದ ಕಂದರವೆನಿಸುವುದಿಲ್ಲ.

ಆಧುನಿಕ ಅಧ್ಯಯನಗಳು ಹೇಳುವ ಸತ್ಯ ಅತ್ಯಂತ ಮಾರ್ಮಿಕವಾಗಿದೆ.

ಗಟ್ಟಿ ಸಂಬಂಧಗಳನ್ನು ಹೊಂದಿರುವವರಲ್ಲಿ ದೀರ್ಘಕಾಲದ ಒತ್ತಡದ ವಿಷವು ಬೇಗನೆ ಇಳಿಯುತ್ತದೆ. ಪ್ರೀತಿಯ ಒಂದು ಮಾತು, ಭುಜದ ಮೇಲಿನ ಸಾಂತ್ವನದ ಒಂದು ಸ್ಪರ್ಶ, ಏನೂ ಮಾತನಾಡದೆ ಪಕ್ಕದಲ್ಲಿ ಕುಳಿತುಕೊಳ್ಳುವ ಮೌನವೂ ಸಹ ಮನಸ್ಸಿಗೆ ಹೊಸ



ಚೈತನ್ಯ ತುಂಬುತ್ತದೆ.

ಕೊನೆಗೆ ಜೀವನದ ಉದ್ದವನ್ನು ಸಂಪತ್ತಿನ ರಾಶಿ ನಿರ್ಧರಿಸುವುದಿಲ್ಲ. ಹೃದಯದಲ್ಲಿ ಉಳಿಯುವ ಮಾನವೀಯ ಬಂಧಗಳೇ ಬದುಕಿಗೆ ಅರ್ಥ ನೀಡುತ್ತವೆ. ಆ ಪ್ರೀತಿಯ ಬೇರುಗಳು ಆಳವಾದಾಗ ಸಾವಿನ ಕುರಿತ ಕಳವಳವೂ ತಾನಾಗಿಯೇ ಕರಗಿ, ಬದುಕು ಅರ್ಥಪೂರ್ಣವಾಗುತ್ತದೆ.

ಅಂಕಣ-46
ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ
87479 69381

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,